ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷಿಣಿಯವರೇ, 1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ (3) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು.

ಉಪಾಧ್ಯಕ್ಷಿಣಿಯವರು : ಪ್ರಸ್ತಾಪ ಏನೆಂದರೆ, "1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ (3) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 3ರವರೆಗೆ

ಉಪಾಧ್ಯಕ್ಷಿಣಿಯವರು : ಖಂಡ 2 ಮತ್ತು 3, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತವೆ.

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು.

(ಖಂಡ 2 ಮತ್ತು 3, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಅನುಬಂಧ III

ಖಂಡ 1 ಇತ್ಯಾದಿ

ಉಪಾಧ್ಯಕ್ಷಿಣಿಯವರು : ಪ್ರಸ್ತಾಪ ಏನೆಂದರೆ, "ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ'' ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾಪವನ್ನು ಅಂಗೀಕರಿಸಲಾಯಿತು

(ಮೊದಲನೇ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ, ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಉಪಾಧ್ಯಕ್ಷಿಣಿಯವರೇ, "1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ (3) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಉಪಾಧ್ಯಕ್ಷಿಣಿಯವರು : ಪ್ರಸ್ತಾಪ ಏನೆಂದರೆ "1992ನೇ ಸಾಲಿನ ಕರ್ನಾಟಕ ಧನ ವಿನಿಯೋಗ ಸಂಖ್ಯೆ (3) ವಿಧೇಯಕವನ್ನು ಅಂಗೀಕರಿಸುವುದು.''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಅಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ : ಕುಣಿಗಲ್‌ನಲ್ಲಿ ನಡೆದ ಗೋಲಿಬಾರ್ ಬಗ್ಗೆ :

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ದಿನಾಂಕ : 8–6–92ರಂದು ಕುಣಿಗಲ್‌ನಲ್ಲಿ ನಡೆದಂಥ ಗೋಲಿಬಾರ್ ಘಟನೆ ಬಗ್ಗೆ ಬೆಳಿಗ್ಗ ನಾವೆಲ್ಲರೂ ಪ್ರಸ್ತಾಪ ಮಾಡುವಂಥ ಪ್ರಯತ್ನ ಮಾಡಿದೆವು. ಆದರೆ ಮುಖ್ಯಮಂತ್ರಿಗಳು ಬಂದಮೇಲೆ ವಿವರವಾದ ಚರ್ಚೆಗೆ ಹೋಗೋಣ ಮತ್ತು ಅವರಿಂದ ಉತ್ತರವನ್ನು ಪಡೆಯೋಣ ಎನ್ನುವ ಮಾತನ್ನು ತಾವು ಹೇಳಿದ್ದರಿಂದ ಆಗ ಸುಮ್ಮನಾದೆವು. ಈಗ ಮುಖ್ಯಮಂತ್ರಿಗಳು ಇದ್ದು ಉತ್ತರವನ್ನು ಕೊಡುವಂಥ ಸಂದರ್ಭವೂ ಇದೆ. ಈ ಸಂದರ್ಭದಲ್ಲಿ, 8–6–92 ಸಂಜೆ ಸುಮಾರು 5–30ರ ಸಮಯದಲ್ಲಿ ಕುಣಿಗಲ್ ಪ್ರವಾಸಿ ಮಂದಿರದ ಆವರಣದಲ್ಲಿ ಗಂಗಾಧರ ಎನ್ನುವವರ ಕೊಲೆಯಾಯಿತು ಈ ವಿಚಾರದಲ್ಲಿ ಆತನ ಪತ್ನಿಯು ಕೊಟ್ಟಂತ ದೂರನ್ನು ಸೆಕ್ಷನ್ 302ರ ಪ್ರಕಾರ ದಾಖಲೆ ಮಾಡಿಕೊಂಡಿದ್ದಾರೆ. ಇವತ್ತು ಈ ಘಟನೆ ನಡೆದು ಇಷ್ಟು ದಿವಸವಾದ ಮೇಲೂ ಸಹ, ನಾನು ಸಂಬಂಧಪಟ್ಟ ಮಂತ್ರಿಗಳಿಂದ ವಿವರವನ್ನು ಬಯಸುವುದಕ್ಕೆ ಇಷ್ಟಪಡುತ್ತೇನೆ.

ಆ ಸಂಬಂಧಪಟ್ಟ ಆಪಾದಿತರು ಯಾರಿದ್ದಾರೆ, ಮೇಲುನೋಟಕ್ಕೆ ಈಗಾಗಲೇ ಈ ರೀತಿ ಆಪಾದನೆಗೆ ಗುರಿಯಾಗಿರುವಂತಹ, ಈ ಒಂದು ಐಪಿಸಿ 302ರ ಪ್ರಕಾರ ಈಗಾಗಲೇ ಕೇಸನ್ನು ದಾಖಲು ಮಾಡಿಕೊಂಡಿದ್ದಾರೆ, ಅವರನ್ನು ಈಗಾಗಲೇ ಬಂಧನ ಮಾಡಿರುತ್ತಾರೆಯೇ ಅಥವಾ ಬಂಧನ ಮಾಡದೇ ಇದ್ದರೆ ಮಾಡದಿರುವುದಕ್ಕೆ ಕಾರಣ ಏನು ಏತಕ್ಕೆಂದರೆ ಈ ಘಟನೆ ನಡೆದ ತಕ್ಷಣ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಪತ್ರಿಕಾ ಹೇಳಿಕೆಯಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಏನೆಂದರೆ ಕುಣಿಗಲ್ ಪ್ರಕರಣದ ಬಗ್ಗೆ ನಡೆಯುತ್ತಿರುವ ಒಂದು ತನಿಖಾ ವರದಿ ರಮೇಶ್‌ರವರು ಗುಂಡು ಹಾರಿಸಿದ್ದು ಮೇಲು ನೋಟಕ್ಕೆ ಕಂಡುಬರುತ್ತದೆ ಎಂದು ತನಿಖಾ ಆಯೋಗ ಹೇಳಿದ ಮೇಲೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವಂತಹದ್ದರ ಬಗ್ಗೆ ನಾನು ಯೋಚನೆ ಮಾಡುತ್ತೇನೆ ಎಂದು ಹೇಳಿದ್ದಾರೆ. ಅದೇ ರೀತಿ ಗುಂಡೇಟಿನಿಂದ ಸತ್ತವನ ಪತ್ನಿ ಸಚಿವ ರಮೇಶ್‌ರವರು ಕೊಲೆ ಮಾಡಿದ್ದು ಎಂದು ಪೋಲೀಸರಿಗೆ ದೂರು ನೀಡಿದ ಮಾತ್ರಕ್ಕೆ ರಮೇಶ್ ಅವರ ವಿರುದ್ಧ ಕ್ರಮ ಕೈಗೊಳ್ಳಲು ನನಗೆ ಇಚ್ಛೆ ಇಲ್ಲ, ಈ ದೂರಿನ ಮೇಲ ನ್ಯಾಯಾಲಯದಲ್ಲಿ ಎಫ್.ಐ.ಆರ್. ಸಲ್ಲಿಸಿದ ಮಾತ್ರಕ್ಕೆ ರಮೇಶ್‌ರವರನ್ನು ಸಚಿವ ಸಂಪುಟದಿಂದ ತೆಗೆದುಹಾಕಲು ಸಾಧ್ಯ ಇಲ್ಲ ಎಂಬ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇವತ್ತು ನಾನು ಹೇಳುವುದಕ್ಕೆ ಇಚ್ಛೆಪಡುವಂತಹದು, ಇವತ್ತು ಸ್ಪಷ್ಟವಾಗಿ ಈ ರಮೇಶ್‌ರವರು ಈ ಕೊಲೆ ಮಾಡಿದ್ದಾರೆ ಎಂದು ಹೇಳಿ ಒಂದು ಆಪಾದನೆ ಮಾಡಿ ಐಪಿಸಿ 302ರ ಪ್ರಕಾರ ಒಂದು ದೂರು ದಾಖಲಾದ ಮೇಲೆ ಕಾನೂನಿನ ಚೌಕಟ್ಟಿನಲ್ಲಿ ಈಗಾಗಲೇ ಬಂಧಿಸಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಆದರೆ ಇದುವರೆಗೆ ಆ ರೀತಿ ಬಂಧನ ಮಾಡದೇ ಮುಖ್ಯಮಂತ್ರಿಗಳೇ ಒಬ್ಬರು ನ್ಯಾಯಾಧೀಶರಂತೆ ಅವರ ಪರ ವಕಾಲತ್ತು ವಹಿಸಿ ಯಾರು ಈ ನಾಡಿನ ಜನತೆಗೆ ನ್ಯಾಯ ಒದಗಿಸಿಕೊಡಬೇಕಾದ ಒಂದು ಜವಾಬ್ದಾರಿಯನ್ನು ಹೊತ್ತಿರುವವರೇ ಅವರ ಪರವಾಗಿ ಸಾಕ್ಷಿ ಹೇಳುವ ಮಟ್ಟಕ್ಕೆ ಹೋಗಿರುವುದು ಅಕ್ಷಮ್ಯ ಅಪರಾಧ. ಇದುವರೆಗೆ ರೂಢಿಯಲ್ಲಿರುವಂತಹದು ಐಪಿಸಿ 302ರ ಪ್ರಕಾರ ಯಾರಾದರೂ ಕೊಲೆ ಆಪಾದನೆಗೆ ಗುರಿಯಾಗಿದ್ದಾರೆ ಎಂದು ದೂರು ದಾಖಲಾದ ತಕ್ಷಣ ಅವರನ್ನು ಬಂಧಿಸತಕ್ಕದ್ದು ಪದ್ಧತಿಯಲ್ಲಿರುವಂತಹದು. ಆದರೆ ಇವತ್ತು ನಮ್ಮ ಸರಕಾರದ ಮಂತ್ರಿಗಳೊಬ್ಬರು ಈ ರೀತಿ ಕೊಲೆ ಆಪಾದನೆಗೆ ಗುರಿಯಾಗಿದ್ದರೂ ಐಪಿಸಿ 302ರ ಪ್ರಕಾರ ಅವರ ಮೇಲೆ ಕೇಸ್ ದಾಖಲಾದ ಮೇಲೂ ಸಹ ಅವರನ್ನು ಬಂಧನ ಮಾಡುವುದಿಲ್ಲ ಎಂದು ಹೊಸದಾಗಿ ಐಪಿಸಿಗೆ ವ್ಯಾಖ್ಯಾನ ನೀಡುವಂತಹ ಪ್ರಯತ್ನ ಕಾನೂನಿಗೆ ತಿದ್ದುಪಡಿ ತರುವಂತಹ ಪ್ರಯತ್ನ ಸರಕಾರ ಮಾಡುತ್ತಿದೆಯೇ ಎಂಬ ಪ್ರಶ್ನೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡೇಕಾಗಿದೆ. ಇವತ್ತು ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ, ಇದೊಂದು ಕ್ರಿಮಿನಲ್ ಪ್ರಕರಣ ಎಂದು ಸ್ಪಷ್ಟವಾಗಿದೆ. ಒಂದು ಕ್ರಿಮಿನಲ್ ಪ್ರಕರಣ ಇರುವಂತಹ ಸಂದರ್ಭದಲ್ಲಿ ಕ್ರಿಮಿನಲ್ ಮೊಕದ್ದಮೆ ಹಾಕುವಂತಹದನ್ನು ಬಿಟ್ಟು ಇಂತಹ ಒಂದು ಸಂದರ್ಭದಲ್ಲಿ ನ್ಯಾಯಾಂಗ ತನಿಖೆಗೆ ಆದೇಶ ನೀಡಲಾಗಿದೆ. ನ್ಯಾಯಾಂಗ ತನಿಖೆ ಮಾಡುವ ಉದ್ದೇಶ ಏನು ಎಂದರೆ, ಹೇಗಾದರೂ ಮಾಡಿ ಈ ಒಂದು ಸಾಕ್ಷ್ಯಾಧಾರಗಳನ್ನು ತಿರುಚುವಂತಹ ಪ್ರಯತ್ನ ಮಾಡಿ ಅವರಿಗೆ ರಕ್ಷಣೆ ಕೊಡುವಂತಹ ತಂತ್ರ ಎಂದು ನಾನು ಹೇಳುವುದಕ್ಕೆ

ಇಚ್ಛೆಪಡುತ್ತೇನೆ. ನಿಜಕ್ಕೂ ತನಿಖೆ ಆಗಬೇಕು, ಸತ್ಯ ಸಂಗತಿ ಹೊರಬರಬೇಕೆಂದು ಇದ್ದರೆ ಸ್ವತಃ ಮುಖ್ಯಮಂತ್ರಿಗಳೇ ಅವರ ಸಚಿವ ಸಂಪುಟದ ಒಬ್ಬರು ಸದಸ್ಯರು ಎನ್ನುವ ಕಾರಣಕ್ಕೋಸ್ಕರ ಅವರ ಪರವಾಗಿ ಪತ್ರಿಕಾ ಹೇಳಿಕೆ ಕೊಟ್ಟು ಅವರ ಪರವಾಗಿ ಸಾಕ್ಷಿ ಹೇಳುವ ಮಟ್ಟಕ್ಕೆ, ನ್ಯಾಯಾಧೀಶರಂತೆ ವರ್ತನೆ ಮಾಡಿರುವ ಈ ಸಂದರ್ಭದಲ್ಲಿ ನಿಜಕ್ಕೂ ಸತ್ಯಸಂಗತಿ ಹೊರಬರಬೇಕೆಂದು ತಮಗೆ ಕಳಕಳಿ ಇದ್ದರೆ ಇದನ್ನು ಸಿಬಿಐ ತನಿಖೆಗೆ ಒಳಪಡಿಸಿ. ಆಗ ಮಾತ್ರ ಈ ರೀತಿ ಒಬ್ಬ ಮಂತ್ರಿ ಈ ಒಂದು ಕೊಲೆ ಮೊಕದ್ದಮೆಯಲ್ಲಿ ಸಿಕ್ಕಿರುವಂತಹ ಸಂದರ್ಭದಲ್ಲಿ ಸತ್ಯ ಹೊರಗೆ ಬರಬಹುದು. ಸರಿಯಾದ ತನಿಖೆ ಆಗುವುದಕ್ಕೆ ಅವಕಾಶವಾಗಬಹುದು. ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈ ರೀತಿ ಒಂದು ಅಪರಾಧ ಮಾಡಿರುವಂತಹ, ಘಟನೆ ನಡೆದಿರುವಂತಹ ಸಂದರ್ಭದಲ್ಲಿ ಕೋರ್ಟಿನಲ್ಲಿ ಯಾರು ಅಪರಾಧಿ ಯಾರು ಅಲ್ಲ ಎಂದು ತೀರ್ಮಾನವಾಗಬೇಕಾಗಿದೆ. ಅದಕ್ಕೆ ಅವಕಾಶ ಮಾಡಿಕೊಡದೇ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇದುವರೆಗೆ ಐಪಿಸಿ 302ರ ಪ್ರಕಾರ ಯಾವುದಾದರೊಂದು ದೂರು ದಾಖಲಾದರೂ ತಕ್ಷಣ ಅವರನ್ನು ಬಂಧನ ಮಾಡಿ, ಅರೆಸ್ಟ್ ಮಾಡಿ ಕಾನೂನಿನಂತೆ ಕ್ರಮ ತೆಗೆದುಕೊಳ್ಳತಕ್ಕದ್ದು ವಾಡಿಕೆಯಲ್ಲಿರುವುದು. ಕಾನೂನಿನ ಚೌಕಟ್ಟಿನಲ್ಲಿ ಮಾಡಬೇಕಾದ ರೀತಿ ಇದು. ಅದನ್ನು ಮಾಡದೇ ಕಳೆದ ಒಂದೂ ಒಂದೂವರೆ ತಿಂಗಳಿಂದ ಇಡೀ ರಾಜ್ಯದಲ್ಲಿ ಒಂದು ಕೋಲಾಹಲ ಉಂಟಾಗಿ, ಜನ ಈ ರೀತಿ ಕೊಲೆ ಅಪರಾಧಕ್ಕೆ ಸಿಕ್ಕಿರುವ ವ್ಯಕ್ತಿಗೆ ಸರಕಾರವೇ ರಕ್ಷಣೆ ಕೊಡತಕ್ಕ ಪ್ರಯತ್ನ ಮಾಡುತ್ತಿರತಕ್ಕದ್ದು, ಮುಖ್ಯಮಂತ್ರಿಗಳೇ ಅವರ ಪರವಾಗಿ ವಕಾಲತ್ತು ಮಾಡುತ್ತಿರುವುದರ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸುತ್ತಿದ್ದಾರೆ. ಇಂತಹ ಒಂದು ಸಂದರ್ಭದಲ್ಲಿ ನಾನು ಸರಕಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ, ಕೊಲೆ ಆಪಾದನೆಗೆ ಗುರಿಯಾಗಿರುವ ಮಂತ್ರಿ ರಮೇಶ್ ಅವರು ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ತಕ್ಷಣ ಈ ಸಮಸ್ಯೆ ಬಗೆಹರಿಯಲಿಲ್ಲ. ಈಗಾಗಲೇ ಅವರನ್ನು ಏನಾದರೂ ಬಂಧನ ಮಾಡಿರುತ್ತೀರಾ? ಅಥವಾ ಕೋರ್ಟ್ ಏನಾದರೂ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದೆಯೇ? ಅಥವಾ ಬಂಧನ ಮಾಡದೇ ಅವರಿಗೆ ರಕ್ಷಣೆ ಕೊಡುವಂತಹ ಕೆಲಸವನ್ನು ಸರಕಾರ ಮಾಡುತ್ತಿರುವ ಉದ್ದೇಶ ಏನು? ಅಥವಾ ಅಲ್ಲಿ ಗೋಲೀಬಾರ್ ಆಗಿದೆ ಎಂದು ಯಾರಾದರೂ ಹೇಳಿದ್ದಾರೆಯೇ? ಗೋಲೀಬಾರ್ ಆಗದೇ ನೇರವಾಗಿ ಗುಂಡು ಹಾರಿಸಿ ಕೊಲ್ಲುವಂತಹ ಪ್ರಯತ್ನ ಆಗಿರುವ ಸಂದರ್ಭದಲ್ಲಿ ನಾನು ಸರಕಾರಕ್ಕೆ ಒತ್ತಾಯ ಮಾಡುತ್ತೇನೆ. ಈಗಲಾದರೂ ಕಾನೂನಿನಂತೆ ತಾವು ವರ್ತನೆ ಮಾಡಿ, ಇದಕ್ಕೆ ಒಂದು ಗೌರವ ಕೊಟ್ಟು ಮಾನ್ಯ ಮುಖ್ಯಮಂತ್ರಿಗಳು ಮಧ್ಯೆ ಪ್ರವೇಶ ಮಾಡುವುದಕ್ಕೆ ಅವಕಾಶ ಮಾಡಿಕೊಡದೆ ಅವರನ್ನು ತಕ್ಷಣ ಬಂಧಿಸಿ, ಕಾನೂನಿನಂತೆ ಕ್ರಮ ಕೈಗೊಳ್ಳಬೇಕೆಂದು ನಾನು ಸರಕಾರವನ್ನು ಒತ್ತಾಯ ಮಾಡುತ್ತೇನೆ. ಮತ್ತು ಈಗಾಗಲೇ ಆ ಒಂದು ಎಫ್‌ಐಆರ್ ಯಾವ ರೀತಿ ಇದೆ, ಆ ಎಫ್‌ಐಆರ್ ಆಧಾರದ ಮೇಲೆ ಪೋಲೀಸರು ಏತಕ್ಕೆ ಕ್ರಮವನ್ನು ತೆಗೆದುಕೊಂಡಿಲ್ಲ. ಪೋಲೀಸ್ ಅಧಿಕಾರಿಗಳು ಕಾನೂನಿನಂತೆ ಅವರದ್ದೇ ಆದ ಕೆಲಸಗಳನ್ನು ಮಾಡಬೇಕಾಗಿತ್ತು. ಯಾವುದೇ ಮಂತ್ರಿಗಳ ಅಥವಾ ಇನ್ನೊಬ್ಬರ ಆದೇಶಕ್ಕೆ ಅವರು ಕಾಯುವಂತಹ ಅಗತ್ಯವಿರಲಿಲ್ಲ. ಒಬ್ಬ ಸಾಮಾನ್ಯ ವ್ಯಕ್ತಿ ಅಪರಾಧ ಮಾಡಿದಾಗ ಯಾವ ರೀತಿಯಾಗಿ ಕಾನೂನು ಕ್ರಮವನ್ನು ತೆಗೆದುಕೊಳ್ಳುತ್ತೀರೋ ಅದೇ ಒಂದು ರೀತಿಯಲ್ಲಿ ಇವತ್ತು ಅವರು ಮಂತ್ರಿಗಳು ಇರಲಿ ಮತ್ತೊಬ್ಬರು ಇರಲಿ, ಕಾನೂನಿನಂತೆ ಕ್ರಮ ಕೈಗೊಳ್ಳದೆ ಇರುವುದು ಸರಿಯಲ್ಲ. ಅಧಿಕಾರಿಗಳೂ ಸಹ ಇವತ್ತು ಈ ಸರ್ಕಾರದ ಜೊತೆಗೆ ಶಾಮೀಲಾಗಿದ್ದಾರೆ. ಲೋಕ ನಾಯಕ ಜಯಪ್ರಕಾಶ್ ನಾರಾಯಣ್ ಒಂದು ಮಾತು ಹೇಳಿದ್ದರು. ಯಾವುದಾದರೂ ಇಂತಹ ಸಂದರ್ಭಗಳು ಬಂದಾಗ ಅಧಿಕಾರದಲ್ಲಿರುವವನು ಕಾನೂನಿನಂತೆ ವರ್ತನೆ ಮಾಡಬೇಕು, ಅವನು ಯಾರ ಆಡಿಯಾಳಾಗಿ ಜೀತದಾಳಾಗಿ ವರ್ತನೆ ಮಾಡಬಾರದು ಎಂಬ ಒಂದು ಕರೆಯನ್ನು ಕೊಟ್ಟರು. ಆದರೆ ಅಧಿಕಾರಿಗಳ ಜೊತೆಗೆ ತಾವೂ ಜವಾಬ್ದಾರರಾಗುತ್ತೀರಿ. ನಾಳೆ ಯಾವುದೇ ವ್ಯಕ್ತಿ ಈ ರೀತಿಯಾಗಿ ಕೊಲೆ ಆಪಾದನೆಗೆ ಗುರಿಯಾದಾಗ ನಾನು ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ ನ್ಯಾಯಾಂಗ ತನಿಖೆ ಮಾಡಿಸಿ ಅಲ್ಲಿಯತನಕ ನ್ಯಾಯಾಂಗ ತನಿಖೆ ಮಾಡಿ ಅವರು ಕೊಲೆ ಮಾಡಿದ್ದಾರೆ ಎನ್ನುವುದು ಸಾಬೀತಾದ ಮೇಲೆ ಎಫ್‌ಐಆರ್‌ನಂತೆ ಕ್ರಮ ತೆಗೆದುಕೊಳ್ಳುತ್ತೀರಾ? ಅದನ್ನು ಬಿಟ್ಟು ಇವತ್ತು ಈ

ರೀತಿಯಾಗಿ ಒಬ್ಬರನ್ನು ರಕ್ಷಣೆ ಮಾಡತಕ್ಕಂಥ ಪ್ರಯತ್ನ ಮಾಡುತ್ತಿರುವುದು ಒಂದು ಅಕ್ಷಮ್ಯ ಅಪರಾಧ. ಇದುವರೆಗೆ ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಂಡಿದೆ ಎಂಬುದರ ಬಗ್ಗೆ ವಿವರಗಳನ್ನು ಒದಗಿಸಿಕೊಟ್ಟರೆ ಅದರ ಆಧಾರದ ಮೇಲೆ ಮುಂದಿನ ಚರ್ಚೆಗೆ ಅನುಕೂಲವಾಗುತ್ತದೆ. ದಯಮಾಡಿ ಸರ್ಕಾರ ಇದಕ್ಕೆ ಸರಿಯಾಗಿ ಉತ್ತರವನ್ನು ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೇ, ನಮ್ಮ ಸ್ನೇಹಿತರು ಹಾಗೂ ಈ ಹಿಂದೆ ಮಾತನಾಡಿರತಕ್ಕಂಥ ಸದಸ್ಯರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲೂ ಮುಖ್ಯವಾಗಿ ಇವತ್ತಿನ ದಿವಸ ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಿದ್ದೇವೆ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ. ಆದರೆ ಇಡೀ ಭಾರತ ದೇಶದಲ್ಲಿ ಒಂದು ಕೊಲೆ ಮೊಕದ್ದಮೆಯನ್ನು ನ್ಯಾಯಾಂಗ ತನಿಖೆಗೆ ಒಳಪಡಿಸಿರುವಂತಹ ಉದಾಹರಣೆ ಎಲ್ಲೂ ಇಲ್ಲ. ಯಾವಾಗ ನ್ಯಾಯಾಂಗ ತನಿಖೆ ನಡೆಸಬೇಕಾಗುತ್ತದೆ ಅಂದರೆ ಅಲ್ಲಿರತಕ್ಕಂಥ ಸಂದರ್ಭಗಳು ಏನು ಎಂಬುದು ಮುಖ್ಯ ಈಗ ಕೆಲವು ಕಡೆ ಗಲಭೆಗಳು ನಡೆಯುತ್ತವೆ. ಕಮ್ಯೂನಲ್ ಕ್ಲಾಷಸ್ ನಡೆಯುತ್ತವೆ. ಅಂತಹ ಸಂದರ್ಭಗಳಲ್ಲಿ ಮತ್ತು ಎಲ್ಲಿ ಫೈರಿಂಗ್ ಆಗುತ್ತದೆ ಅಲ್ಲಿ ಫೈರಿಂಗ್ ಮಾಡಿದ್ದು ಸರಿಯೇ, ಇಲ್ಲವೇ ಎನ್ನತಕ್ಕಂಥದ್ದಕ್ಕೆ ಅದರ ಸತ್ಯಾಂಶವನ್ನು ತಿಳಿದುಕೊಳ್ಳುವುದಕ್ಕೆ ನ್ಯಾಯಾಂಗ ತನಿಖೆ ಮಾಡುತ್ತಾರೆ. ಈಗ ಅದು ಯಾವುದೂ ಇಲ್ಲ. ಈ ದೇಶದ ಚರಿತ್ರೆಯಲ್ಲಿ ಸ್ಪಷ್ಟವಾದ ಒಂದು ಕೊಲೆ ಮೊಕದ್ದಮೆ ನೂರಾರು ಜನರ ಎದುರಿನಲ್ಲೇ ನಡೆದಿದೆ ಜವಾಬ್ದಾರಿ ಇರುವಂತಹ ಅಧಿಕಾರಿಗಳು ಆ ಸ್ಥಳದಲ್ಲಿ ಇದ್ದಾರೆ ಅಲ್ಲಿ ಉನ್ನತ ಪೊಲೀಸ್ ಅಧಿಕಾರಿಗಳು ಇದ್ದರು. ಜಿಲ್ಲಾಧಿಕಾರಿಗಳು ಇದ್ದರು. ಅವರೆಲ್ಲರ ಸಮ್ಮುಖದಲ್ಲಿ ನಡೆದಿರತಕ್ಕಂಥ ವಿಚಾರ. ಅದು ಎಲ್ಲೋ ಕತ್ತಲಲ್ಲಿ ನಡೆದಿದ್ದರೆ ಹೌದಪ್ಪ ಕತ್ತಲಲ್ಲಿ ಏನೋ ಆಗಿಹೋಯಿತು, ಯಾರಿಗೂ ಗೊತ್ತಿಲ್ಲ ಎನ್ನತಕ್ಕಂಥದ್ದು, ತಾವು ಕತ್ತಲಲ್ಲಿ ಹುಡುಕುವ ಹುಡುಕತಕ್ಕಂಥ ಕೆಲಸವನ್ನು ನೀವು ಮಾಡಿದ್ದರೆ ಹೌದಪ್ಪ ಎಂದು ಹೇಳಬಹುದಾಗಿತ್ತು. ಆದರೆ ಅಲ್ಲಿ ನೂರಾರು ಜನರು ಇದ್ದಾರೆ. ಜವಾಬ್ದಾರಿಯುತ ಅಧಿಕಾರಿಗಳು ಇದ್ದಾರೆ. ಅವರ ಎದುರುಗಡೆ ನಡೆದಿರತಕ್ಕಂಥಾದ್ದು ಇದು. ಇದಕ್ಕೆ ತಾವು ನ್ಯಾಯಾಂಗ ತನಿಖೆ ನಡೆಸುತ್ತೀರಿ. ಅಂದರೆ ಇದು ಒಂದು ಅತ್ಯಂತ ಶೌರ್ಯ ಸಾಹಸದ ಕೆಲಸವನ್ನು ಮಾಡಿದ್ದಾರೆ. ಅದಕ್ಕೆ ಅವರಿಗೆ ಪ್ರಪಂಚದಲ್ಲಿ ಅತಿ ಉನ್ನತವಾದ ಬಿರುದು ಏನಾದರೂ ಕೊಡ ಇದ್ದರೆ ಅದನ್ನು ಇವತ್ತು ಮಾನ್ಯ ಬಂಗಾರಪ್ಪನವರ ಸರ್ಕಾರಕ್ಕೆ ಪ್ರಾಪ್ತವಾಗುತ್ತದೆ ಎನ್ನತಕ್ಕಂಥಾದ್ದು ನನ್ನ ಭಾವನೆ. ಮಾನ್ಯ ಅಧ್ಯಕ್ಷರೇ, ಇವತ್ತು ಅಲ್ಲಿ ಪರಿಸ್ಥಿತಿ ಬಹಳ ಭೀಕರವಾಗಿತ್ತು. ಜನರ ಪ್ರಾಣಗಳು ಉಳಿಯುತ್ತಿರಲಿಲ್ಲ. ಗನ್‌ಮ್ಯಾನ್ ಹೊಡೆದಿರಬಹುದು ಎನ್ನತಕ್ಕಂಥಾದ್ದು ನನ್ನ ಭಾವನೆ. ಮಾನ್ಯ ಅಧ್ಯಕ್ಷರೇ, ಇಲ್ಲಿಯವರೆಗೂ ಕೂಡ ಆ ಗನ್ ಮ್ಯಾನ್ ಹೆಸರು ಎಲ್ಲೂ ಕೂಡ ಹೊರಗಡೆ ಬಂದಿಲ್ಲ. ಆ ಗನ್‌ಮ್ಯಾನ್ ಯಾರು? ಪೊಲೀಸಿನವರು ಆ ಸ್ಥಳದಲ್ಲಿ ಇದ್ದಾರೆ. ಸಾಕಷ್ಟು ರಕ್ಷಣೆ ಇದೆ. ಸಾಕಷ್ಟು ಜನ ಪೊಲೀಸಿನವರು ಇದ್ದರೂ ಕೂಡ ಅವರು ಇವರ ರಕ್ಷಣೆಗೆ ಬಾರದೆ ಅವರು ಒಬ್ಬ ಗನ್‌ಮ್ಯಾನ್ ಹೊಡೆದ ಅಂತ ಹೇಳಿ ಇವತ್ತು ತಿರುಚತಕ್ಕಂಥ ಒಂದು ಕೆಲಸವನ್ನು ಮಾಡುತ್ತಿದ್ದಾರೆ. ಮತ್ತೊಬ್ಬ ನಿರಪರಾಧಿಯನ್ನು ಅಂದರೆ ಗನ್‌ಮ್ಯಾನ್ ಮೇಲೆ ಇದರ ತಪ್ಪನ್ನು ಹೊರಿಸತಕ್ಕಂಥ ಕೆಲಸವನ್ನು ಮಾಡಲು ಹೋಗಿದ್ದಾರೆ ತಾವು ಮಂತ್ರಿಗಳನ್ನು ಉಳಿಸಿಕೊಳ್ಳಲು ಮಾಡಿದಂತಹ ಹುನ್ನಾರವಲ್ಲದೆ ಮತ್ತೇನೂ ಅಲ್ಲ. ಏಕೆಂದರೆ ನಾನು ಕಾನೂನು ಓದಿದವನು ಅಲ್ಲ. ಕಾನೂನಿನ ಪರಿಶ್ರಮ ಹೆಚ್ಚು ಇಲ್ಲ. ಆದರೆ ಒಬ್ಬ ಸಾಮಾನ್ಯ ಮನುಷ್ಯನಾಗಿ ನನಗೆ ಸಂಶಯ ಏನಿದೆ ಅಂದರೆ ಇವತ್ತಿನ ದಿವಸ ಆ ರೀತಿಯಲ್ಲಿ ಹೊಡೆದ ತಕ್ಷಣ ಅವರು ಮೇಲಾಧಿಕಾರಿಗಳಿಗೆ ಹೋಗಿ ತಿಳಿಸಬೇಕಾಗಿತ್ತು. ಆ ಬಂದೂಕ ಯಾವುದು? ಕೆಲವರು ರಿವಾಲ್ವರ್ ಅಂತ ಹೇಳುತ್ತಾರೆ ಕೆಲವರು ಸ್ಟೆನ್‌ಗನ್ ಎಂದು ಹೇಳುತ್ತಾರೆ. ಅದನ್ನು ಸೀಜ್ ಮಾಡಿದ್ದೀರಾ ಸ್ಟೆನ್‌ಗನ್ ಆಗಿದ್ದರೆ ಅದನ್ನು ಸೀಜ್ ಮಾಡಿದ್ದೀರಾ? ಇವೆಲ್ಲವೂ ಕೂಡ ನಿಗೂಢವಾದ ರೀತಿಯಲ್ಲಿ ಇವೆ. ಇದು ಹಗಲಲ್ಲಿ ನಡೆದಿರತಕ್ಕಂಥ ಕೊಲೆಯನ್ನು ಬಚ್ಚಿಟ್ಟು ಮರೆಮಾಚುವ ಪ್ರಯತ್ನ ಸರ್ಕಾರದಿಂದ ಯಶಸ್ವಿಯಾಗಿ ನಡೆಯುತ್ತಿದೆ.

ಆದರೆ ಈ ಕರ್ನಾಟಕ ರಾಜ್ಯದಲ್ಲಿರತಕ್ಕಂಥಾದ್ದು ಕೇವಲ ಒಂದೇ ಒಂದು ಕಾನೂನು ಮಂತ್ರಿಗಳಿಗೆ ಒಂದು ಕಾನೂನು, ಸಾಮಾನ್ಯ ಜನಕ್ಕೆ ಒಂದು ಕಾನೂನು ಇಲ್ಲ. ಶಾಸಕರಿಗೇ ಒಂದು ಕಾನೂನು ಮತ್ತೊಬ್ಬರಿಗೆ ಒಂದು ಕಾನೂನು ಎಂದು ಇಲ್ಲ. ಇರುತಕ್ಕಂಥಾದ್ದು ಒಂದೇ ಕಾನೂನು. ಆದರೂ ಇವತ್ತು ಇವರೇ ಹೇಳುವುದಕ್ಕೆ ಹೊರಟಿದ್ದಾರೆ ಏನಂಥ? ಅವರು ನಿರಪರಾಧಿ ಅನ್ನತಕ್ಕಂಥಾದ್ದನ್ನು ನಿರಪರಾಧಿ ಎಂದು ಹೇಳಬೇಕಾಗಿರತಕ್ಕಂಥವರು ಯಾರು? ಇಲ್ಲಿರತಕ್ಕಂಥವರಲ್ಲ. ನಿರಪರಾಧಿ ಎಂದು ಹೇಳಬೇಕಾಗಿರತಕ್ಕಂಥಾದ್ದು ಸರ್ಕಾರ ಅಲ್ಲ. ಅದಕ್ಕೆ ನ್ಯಾಯಾಲಯ ಇದೆ. ಕಾನೂನು ಪ್ರಕಾರ ನಾವು ನಡೆಯಬೇಕಾಗುತ್ತದೆ. ಕಾನೂನು ಪ್ರಕಾರ ನೀವೂ ನಡೆಯಬೇಕಾಗುತ್ತದೆ. ಅಲ್ಲಿ ಒಬ್ಬರನ್ನು ಕೊಲೆ ಮೊಕದ್ದಮೆಯಲ್ಲಿ ದಸ್ತಗಿರಿ ಮಾಡಿದ ತಕ್ಷಣ ಅವರು ಅಪರಾಧಿಯೆಂದು ಸಾಬೀತಾಗುವುದಿಲ್ಲ. ನ್ಯಾಯಾಲಯದಲ್ಲಿ ಸಾಬೀತಾಗುತ್ತದೆ. ನ್ಯಾಯಾಲಯ ಹೇಳಬೇಕಾಗುತ್ತದೆ. ನ್ಯಾಯಾಲಯಕ್ಕೆ ಹೋಗುವುದಕ್ಕಿಂಥ ಮೊದಲು ವಿಧಿ ವಿಧಾನಗಳು ಇವೆ. ಈ ದೇಶದ ಕಾನೂನು ಇದೆ. ಈ ದೇಶದ ಕಾನೂನು ಕೂಡಾ ಜಾರಿಯಲ್ಲಿದೆಯೆಂದು ನಾವು ಕೂಡಾ ಭಾವಿಸಿದ್ದೇವೆ. ಅದೇ ರೀತಿ ಮಾನ್ಯ ತಿಮ್ಮಪ್ಪನವರು ಕೂಡಾ ಭಾವಿಸಿದ್ದಾರೆ. ಆದರೆ ಅದು ಯಾವುದು ಜಾರಿಯಾಗಿದೆ. ಮಾನ್ಯ ಅಧ್ಯಕ್ಷರೇ? ಇದು ಯಾವುದು ಕೂಡಾ ಜಾರಿಯಾಗಿಲ್ಲ. ಅವರು ಕಾನೂನಿಗಿಂಥ ಹೊರಟಾದರೇನು? ಯಾರೂ ಕೂಡಾ ಕಾನೂನಿಗಿಂಥ ಹೊರತಾಗಿರತಕ್ಕಂಥವರು ಖಂಡಿತಾ ಅಲ್ಲ. ಎಲ್ಲರೂ ಕೂಡಾ ಕಾನೂನಿಗೆ ಒಳಪಟ್ಟಿರತಕ್ಕಂಥವರು. ಮಾನ್ಯ ಅಧ್ಯಕ್ಷರೆ, ನಾವು ಈ ಸದನವನ್ನು ಮುಂದುವರಿಸಬೇಕೆಂದು ಒಂದು ಬೇಡಿಕೆಯನ್ನು ಇಟ್ಟುಕೊಂಡು ಮುಖ್ಯಮಂತ್ರಿಗಳ ಮನೆ ಮುಂದೆ ಹೋಗಿದ್ದೆವು. ಆದರೆ ನಮ್ಮನ್ನೆಲ್ಲಾ ಅರೆಸ್ಟ್ ಮಾಡಿದರು. ಪೊಲೀಸರು ಜಗ್ಗಾಡ್ಡಿದ್ದರಿಂದ. ನನಗೆ ಮೂರು ದಿವಸ ಓಡಾಡುವುದಕ್ಕೆ ಆಗಲಿಲ್ಲ. ಮುಖ್ಯಮಂತ್ರಿಗಳನ್ನು ನೋಡಬೇಕೆಂಬ ಪ್ರಯತ್ನವನ್ನು ನಾವು ಮಾಡಿದ್ದರೆ ನಮ್ಮನ್ನು ಅರೆಸ್ಟ್ ಮಾಡಿದ್ದಾರೆ. ಇಲ್ಲಿಯೂ ಸಹ ನಮಗೆ ಒಂದು ಕಾನೂನು ಬೇರೆಯವರಿಗೆ ಒಂದು ಕಾನೂನು ನಮ್ಮನ್ನು ಅರೆಸ್ಟ್ ಮಾಡತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಮಂತ್ರಿಗಳಾದರೆ, ಆಡಳಿತ ಪಕ್ಷದವರಾದರೆ, ಅವರು ಕೊಲೆ ಮಾಡಬಹುದು, ಏನು ಬೇಕಾದರೂ ಮಾಡಬಹುದು. ಅವರಿಗೇ ಒಂದು ಬೇರೆ ಕಾನೂನು ಆ ರೀತಿಯಾದಂಥ ಒಂದು ವ್ಯವಸ್ಥೆ ಇವತ್ತಿನ ದಿವಸ ಇದೆ. ಇಲ್ಲಿ ಸತ್ಯವನ್ನು ಬಚ್ಚಿಡತಕ್ಕಂಥ ಪ್ರಯತ್ನ ಮಾಡುತ್ತಿದ್ದಾರೆ. ಆದರಿಂದ ನಾವು ಇವತ್ತಿನ ದಿವಸ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಇವರು ಮಾಡಿಸುತ್ತಿರತಕ್ಕಂಥ ನ್ಯಾಯಾಂಗ ತನಿಖೆಗೆ ನಮ್ಮದು ಸಹಕಾರ ಇಲ್ಲ. ನಾವು ಸಹಕಾರ ಕೊಡುವುದಿಲ್ಲ. ಅದು ಗಾಳಿಯಲ್ಲಿ ಗುದ್ದಾಟ ನಡೆಸತಕ್ಕಂಥ ಒಂದು ವ್ಯವಹಾರವನ್ನು ಸರ್ಕಾರ ಮಾಡುವುದಕ್ಕೆ ಹೊರಟಿದೆ. ಗಾಳಿಯಲ್ಲಿ ಗುದ್ದಾಟ ಅವರೇ ನಡೆಸಿಕೊಳ್ಳಬೇಕಾಗಿರತಕ್ಕಂಥಾದ್ದು. ಅವರೇ ನಡೆಸಿಕೊಳ್ಳಲಿ ಅನ್ನತಕ್ಕಂಥ ಮಾತನ್ನು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಒಟ್ಟಿನಲ್ಲಿ ಮಾನ್ಯ ಅಧ್ಯಕ್ಷಿಯವರೆ, ಇವತ್ತು ಒಬ್ಬ ಮಂತ್ರಿಗೆ ಬೇರೆ ಕಾನೂನು ಇಲ್ಲ. ಸಾಮಾನ್ಯ ಜನಕ್ಕೆ ಬೇರೆ ಕಾನೂನು ಇಲ್ಲ. ಇರತಕ್ಕಂಥಾದ್ದು ಎಲ್ಲರಿಗೂ ಒಂದೇ ಕಾನೂನು. ಆ ಒಂದೇ ಕಾನೂನನ್ನು ಬಹುಮತದಲ್ಲಿ ತೂಕ ಹಾಕುವುದಕ್ಕೆ ಹೋಗುತ್ತಿದ್ದಾರೆ. ಕಾನೂನನ್ನು ಬಹುಮತದಲ್ಲಿ ತೂಕ ಹಾಕತಕ್ಕಂಥ ಕೆಲಸ ಇವತ್ತಿನ ದಿವಸ ನಡೆಯುತ್ತಿದೆ. ಆದರೆ ಇದಾಗುವುದಿಲ್ಲ. ಕಾನೂನಿನಲ್ಲಿ ಆ ರೀತಿಯಾದಂಥ ಅವಕಾಶ ಇಲ್ಲ. ಈ ನೆಲದ ಕಾನೂನು ಏನಿದೆ ಅದು ಜಾರಿಯಾಗಲೇಬೇಕಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷಿಣಿಯವರೇ

ಶ್ರೀ ಸಿ. ಬೈರೇಗೌಡ : ಕಾಗೋಡು ತಿಮ್ಮಪ್ಪನವರೂ ಅಪರಾಧಿಯಲ್ಲ; ವೆಂಕಟರೆಡ್ಡಿಯವರೂ ಅಪರಾಧಿಯಲ್ಲ. ಅಪರಾಧಿಯಾಗಿರತಕ್ಕಂಥವರು ನಿಮ್ಮ ಕಣ್ಣು ಎದುರಿಗೇ ನೋಡಿರತಕ್ಕಂಥವರು ಶ್ರೀಹ. ಎನ್ ರಮೇಶ್‌ರವರು.

ಶ್ರೀ ಕಾಗೋಡು ತಿಮ್ಮಪ್ಪ : ಒಬ್ಬರನ್ನು ಅಪರಾಧಿ ಎಂದು ನಿಮಗಾಗಲೀ ನಮಗಾಗಲೀ ಹೇಳುವುದಕ್ಕೆ ಅಧಿಕಾರ ಇಲ್ಲ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಈಗಾಗಲೇ ಮಾನ್ಯ ಬೈರೇಗೌಡರು ತಾವು ಕಾನೂನು ಓದಿಲ್ಲವೆಂದು ಹೇಳಿದ್ದಾರೆ. ಆರೋಪಿ ಎನ್ನುವ ಬದಲು ಅಪರಾಧಿ ಎಂದು ಉಪಯೋಗಿಸಿದ್ದಾರೆ. ಇನ್ನು ಮೇಲೆ ಬೈರೇಗೌಡರೇ ತಾವು ಆರೋಪಿ ಎಂದು ಹೇಳಿ.- ಅಕ್ಯೂಸ್ಡ್ ಎಂದರೆ ಆರೋಪಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೈರೇಗೌಡರು ರಮೇಶ್‌ರವರು ಅಪರಾಧಿ ಎಂದು ಹೇಳಿ ಧೈರ್ಯವಾಗಿ ಹೇಳಿಬಿಟ್ಟಿರು; ನಮಗೆ ಗೊತ್ತಿದ್ದ ಹಾಗೆ ಇನ್‌ವೆಸ್ಟಿಗೇಷನ್ ಪೆಂಡಿಂಗ್‌ನಲ್ಲಿ ಇದೆ. ಎಫ್.ಐ.ಆರ್. ಹಾಕಿದ್ದಾರೆ. ಇನ್ನೂ ತನಿಖೆ ನಡೆಯುತ್ತಿದೆ. ಇದು ಗೊತ್ತಿದ್ದರೂ ತಾವು ನೇರವಾಗಿ ಅಪರಾಧಿ ಎಂದು ಹೇಳುತ್ತಿದ್ದೀರಿ.

ಶ್ರೀ ಸಿ. ಬೈರೇಗೌಡ : ಪ್ರೊಫೆಸರ್ ಹೇಳಿದರೆ ಅದನ್ನು ಒಪ್ಪಿಕೊಳ್ಳುತ್ತೇನೆ.

\+ ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್) : ಸನ್ಮಾನ್ಯ ಅಧ್ಯಕ್ಷಿಣಿಯವರೆ, ಕಳೆದ ತಿಂಗಳು 8ನೇ ತಾರೀಖು ನನ್ನ ಕ್ಷೇತ್ರದಲ್ಲಿ ಅಂದರೆ ಕುಣಿಗಲ್‌ನಲ್ಲಿ ಉಪ ಚುನಾವಣೆ ನಡೆಯಿತು. ಅನಿರೀಕ್ಷಿತವಾಗಿ ಈ ಸಭೆಯ ಹಿರಿಯ ಸದಸ್ಯರಾಗಿದ್ದ ಸನ್ಮಾನ್ಯ ಶ್ರೀ ಲಕ್ಕಪ್ಪನವರು ತೀರಿಕೊಂಡಿದ್ದರಿಂದ ಈ ಉಪ ಚುನಾವಣೆ ಬಂದಿತ್ತು. ಈ ಚುನಾವಣೆಯಲ್ಲಿ ವಿರೋಧ ಪಕ್ಷದಿಂದ ನಾನು ಅಭ್ಯರ್ಥಿಯಾಗಿದ್ದೆ. ಚುನಾವಣೆ ನಡೆಯುವ ಸಂದರ್ಭದಲ್ಲಿ ನನ್ನ ಆಡಳಿತ ಪಕ್ಷದ ಅನೇಕ ಸ್ನೇಹಿತರು ಅಲ್ಲಿಗೆ ಬಂದಿದ್ದರೆಂದು ನನಗೆ ಗೊತ್ತು. ಅದರೊಳಗೆ ಶ್ರೀಮಾನ್ ಖರ್ಗೆಯವರು ಹಾಗೂ ಮಾನ್ಯ ಕಾಗೋಡು ತಿಮ್ಮಪ್ಪ ಇವರಿಬ್ಬರನ್ನೇ ನೋಡಿದ್ದು. ಉಳಿದ ಯಾರನ್ನೂ ನೋಡಲಿಲ್ಲ. ನನಗೆ ತುಂಬಾ ಜನ ಪರಿಚಯ ಇಲ್ಲಿರುವವರು ಇಲ್ಲಿದ್ದಾರೆ. ಉಳಿದ ಯಾವ ಸ್ನೇಹಿತರನ್ನೂ, ರಮೇಶ್‌ರವರನ್ನೂ ಸೇರಿಸಿ ನಾನು ನೋಡಿಲ್ಲ. ಅವರು ಯಾವತ್ತು ಬಂದಿದ್ದರು, ಏನು ಮಾಡಿದರು ಎಂದು ನಾನು ಸ್ವತಃ ನೋಡುವುದಕ್ಕೆ ಸಾಧ್ಯ ಆಗಲಿಲ್ಲ. ಚುನಾವಣೆ ನಡೆಯುವಂತಹ ಸಂದರ್ಭದಲ್ಲಿ ನನ್ನ ಸ್ನೇಹಿತರಾದಂತಹ ಮಾನ್ಯ ರಮೇಶ್ ಯಾರೋ ಒಬ್ಬ ವ್ಯಕ್ತಿಯನ್ನು ಕೊಲೆ ಮಾಡಿರುವಂತಹ ಆಪಾದನೆ ಹೊತ್ತಿದ್ದಾರೆ ಎಂದು ಹೇಳಿದರೆ, ನಮಗೆ ನಿಜ ಹೇಳಬೇಕು ಎಂದರೆ ನಮ್ಮ ಭಾವನೆಗಳೆಲ್ಲಾ ಹೆಪ್ಪುಗಟ್ಟಿ ಹೋಗುತ್ತದೆ. ಅಲ್ಲಿ ಬಂದೂಕಿನಿಂದ ಒಬ್ಬ ವ್ಯಕ್ತಿಯ ಕೊಲೆ ಅದರ ಮತ್ತೊಂದು ಕಡೆ ಪರೋಕ್ಷವಾಗಿ ಪ್ರಜಾಪ್ರಭುತ್ವದ ಮೇಲೆಯೇ ಆಯಿತು ಎಂದು ನಾನು ಭಾವಿಸಿಕೊಂಡಿದ್ದೇನೆ. ಅದನ್ನು ನಾನು ಇಲ್ಲಿ ವಿಶ್ಲೇಷಿಸುವ ಅವಶ್ಯಕತೆ ಇಲ್ಲ. ಅದರ ಅನಿವಾರ್ಯತೆಯೂ ಇಲ್ಲಿ ಕಂಡುಬರುವುದಿಲ್ಲ. ಚುನಾವಣೆ ವಿಷಯ ನಾವು ಹೇಳುತ್ತೇವೆ. ನಮ್ಮ ಎದುರುಗಡೆ ಕುಳಿತಿರುವವರಿಗೆ ಆಗಲಿ, ಅಥವಾ ಇಲ್ಲಿ ಕುಳಿತಿರುವಂತಹ ನಮ್ಮಂಥವರಿಗಾಗಲೀ ಆಗಲಿ ಜನ ಓಟು ಕೊಡುತ್ತಾರೆ. ಚುನಾವಣೆಯಲ್ಲಿ ಮತ ಹಾಕಿಸುವುದರಿಂದ ಹಿಡಿದು ಹೆಂಡ ಕುಡಿಸುವುದಕ್ಕೆ ಸಾಕಾಗುವಷ್ಟು ಹಣವನ್ನು ಅವರೇ ಕೊಡುತ್ತಾರೆ. ಆದರೆ ನಾನು ಈ ಚುನಾವಣೆವರೆಗೆ ನಿಮ್ಮನ್ನೂ ಸೇರಿಸಿ ಹೇಳುತ್ತೇನೆ, ಮಾನ್ಯ ಅಧ್ಯಕ್ಷಿಣಿಯವರೆ, "ನಮಗಾಗಿ ಈ ದೇಶದ ಜನ ಪ್ರಾಣವನ್ನೂ ಕೊಡಬೇಕಾಗುತ್ತದೆ" ಎಂದು ನಿರೀಕ್ಷಿಸಿರಲಿಲ್ಲ. ಅವರು ಓಟು ಕೊಡುತ್ತಾರೆ, ಹಣ ಕೊಡುತ್ತಾರೆ, ಅಧಿಕಾರ ಕೊಡುತ್ತಾರೆ, ಆದರೆ ನಮಗಾಗಿ ಪ್ರಾಣವನ್ನೂ ಕೊಡಬೇಕಾದಂತಹ ಸಂದರ್ಭ ಬರುತ್ತದೆ ಎಂದು ನನಗೆ ಎಂಟನೇ ತಾರೀಖು ಸುಮಾರು ಏಳು ಗಂಟೆಯವರೆಗೆ ಗೊತ್ತಿರಲಿಲ್ಲ. ಅದಕ್ಕಾಗಿ ನಾನು ಹೇಳಿದ್ದು, ಈ ವಿದ್ಯಮಾನಗಳಿಂದ ನಮ್ಮ ಭಾವನೆಗಳೆಲ್ಲಾ ಹೆಪ್ಪುಗಟ್ಟಿದೆ ಎಂದು. ಆ ದಿನ ಬೆಳಿಗ್ಗೆ ಸುಮಾರು ಏಳು ಏಳೂವರೆ ಸಮಯದಲ್ಲಿ ನಾನು ಆ ಪಟ್ಟಣದ ಎಲ್ಲ ಮತಗಟ್ಟೆಗಳಿಗೆ ಭೇಟಿ ಇತ್ತು ಹಳ್ಳಿಗೆ ಹೋದ ಮೇಲೆ ಸುಮಾರು 11 ಗಂಟೆಗೆ ಗಲಾಟೆ ಇದೆ, ನೀವು ವಾಪಸ್ ಬರಬೇಕು ಎಂದು ಸುದ್ದಿ ಬಂತು. ಯಾವುದೋ ಸಣ್ಣ ಪುಟ್ಟ ಗಲಾಟೆ ಇರಬಹುದು ಎಂದು ಅದನ್ನು ನಾನು ಅಲಕ್ಷಿಸದೆ ಸುಮಾರು 4.50ಕ್ಕೆ ನಾನು ಪಟ್ಟಣಕ್ಕೆ ಬಂದಾಗ ನನಗೆ ತಿಳಿದುಬಂತು. ಆಗ ಮಂತ್ರಿಗಳಾಗಿದ್ದ ಮಾನ್ಯ ರಮೇಶ್ ಅವರು ಬೆಂಗಳೂರಿನಿಂದ ಅನೇಕ ವಾಹನಗಳಲ್ಲಿ ಗೂಂಡಾಗಳನ್ನು ಕರೆದುಕೊಂಡು ಬಂದಿದ್ದರು ಎಂದು; ಹಾಗೂ ಅಲ್ಲಿ ಮತಗಟ್ಟೆಗಳನ್ನು ಕ್ಯಾಪ್ಚರ್ ಮಾಡುವಂತಹ ಪ್ರಯತ್ನ ಮಾಡಿದರು ಖೋಟಾ ಮತಗಳನ್ನು ಹಾಕಿಸುವಂತಹ ಪ್ರಯತ್ನ ಮಾಡಿದರು ಎಂದು 4.50 ನಿಮಿಷದಲ್ಲಿ ಅಲ್ಲಿ ಪರಿಸ್ಥಿತಿ ಬಹಳ ಪ್ರಕ್ಷುಬ್ಧ ಆಗಿತ್ತು, ಟೆನ್ಷನ್ ಇತ್ತು. ನಾನು ನನ್ನ ಹಿಂಬಾಲಕರಿಗೆ ಶಾಂತಿಯಿಂದ ಇರಲಿಕ್ಕೆ ಹೇಳಿ, ಮತ ಚಲಾವಣೆಯ ಕಾರ್ಯವನ್ನು ಮುಂದುವರಿಸಲಿಕ್ಕೆ ಹೇಳಿ ಸುಮಾರು 4.55

ನಿಮಿಷದಲ್ಲಿ ಪ್ರವಾಸೀ ಮಂದಿರದ ಎದುರುಗಡೆ ಬೆಂಗಳೂರು ಕಡೆಗೆ ಇರುವಂತಹ ಪ್ರದೇಶಕ್ಕೆ ಬಂದೆ. ಬರುವಾಗ ಆ ಪ್ರವಾಸಿ ಮಂದಿರದ ಗೇಟ್ ಮುಚ್ಚಿತ್ತು, ಒಳಗಡೆ ಸಾಕಷ್ಟು ಜನ ಇದ್ದರು. ಅಲ್ಲಿ ಯಾರು ಇದ್ದರು, ಏನು ಮಾಡುತ್ತಿದ್ದರು ಎಂಬುದು ನನಗಂತೂ ಗೊತ್ತಿರಲಿಲ್ಲ. ಸುಮಾರು ಐದು ಗಂಟೆಗೆ ಐದು ನಿಮಿಷ ಇದೆ ಎನ್ನುವಾಗ ನೀಲತ್ತಹಳ್ಳಿ ಎಂಬ ಪಟ್ಟಣಕ್ಕೆ ಹತ್ತಿರ ಇರುವಂತಹ ಒಂದು ಮತಗಟ್ಟೆಗೆ, ಆ ಸ್ಥಳಕ್ಕೆ ಹೋದಾಗ ಮತವನ್ನು ಕ್ಯಾಪ್ಚರ್ ಮಾಡುವಂತಹ ಪ್ರಯತ್ನ ನಡೆದಿತ್ತು ಎಂಬ ವಿಷಯ ಪ್ರಸ್ತಾಪ ಆಯಿತು. ಈ ವಿಷಯ ಪ್ರಸ್ತಾಪ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಡಿ.ಸಿ. ತುಮಕೂರು ಎಸ್.ಪಿ. ಇಬ್ಬರೂ ಆ ಸ್ಥಳಕ್ಕೆ ಆಗಮಿಸಿದ್ದರು. ಇವತ್ತಿನವರೆಗೆ ಅಲ್ಲಿ ಏನಾದರೂ ಕೇಸ್ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಹತ್ತಿರ ಕೆಲವು ಅನ್ ಯೂಸ್ಡ್ ಬ್ಯಾಲಟ್ ಪೇಪರ್ಸ್ ಇವೆ. Unused ballot papers were torn and an attempt was made to capture the ballot boxes. I handed over all the torn ballot papers to the D.C. and S.P. But I don't know so far whether the case has been registered or not. The Hon'ble Home Minister is not in the House. I don't know about the further action. ಹರಿದು ಚಿಂದಿ ಚಿಂದಿ ಮಾಡಿದಂತಹ ಸುಮಾರು ಮಂಕರಿ ಇದೆ, ಅಷ್ಟು ಬ್ಯಾಲಟ್ ಪೇಪರ್ಸ್‌ನ್ನು ನಾನು ಅವರ ಕೈಗೆ ಕೊಟ್ಟು ಉತ್ತರ ದುರ್ಗ ಎನ್ನುವಂತಹ ಹೋಬಳಿ ಕಡೆ ಇರುವ ಮತಗಟ್ಟೆಗಳಿಗೆ ಹೋದೆ. ಹೋದ ಮೇಲೆ ಅಲ್ಲಿ ವಿಪರೀತ ಮಳೆ ಬಂತು. ವಿಪರೀತ ಮಳೆ ಬಂದಿದ್ದರಿಂದ ಬಹುಶಃ ಅವತ್ತಿನ ಆ ಘಟನೆ ಕೇವಲ ಒಂದೇ ಒಂದು ಕೊಲೆಯಲ್ಲಿ ಮುಕ್ತಾಯ ಆದುದು ನಮ್ಮ ಅದೃಷ್ಟ ಎಂದು ಹೇಳಬೇಕು. ಏನಾದರೂ ಮಳೆ ಬರದೇ ಇದ್ದಿದ್ದರೆ ಬಹುಶಃ ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಆ ಪರಿಸ್ಥಿತಿಯಲ್ಲಿ ಪ್ರವಾಸಿ ಮಂದಿರದಲ್ಲಿದ್ದಂತಹ ನಮ್ಮ ನಾಯಕರುಗಳ ಗತಿ ಏನು ಆಗುತ್ತಿತ್ತು ನನಗೆ ಗೊತ್ತಿಲ್ಲ. ಏಕೆಂದರೆ ಒಂದು ಸುಳ್ಳು ಸುದ್ದಿ ಹಬ್ಬಿತ್ತು. ನನಗೆ ತಿಳಿದು ಬಂದ ಮಾಹಿತಿ ಪ್ರಕಾರ, ನಾನು ಆ ಕಡೆಯಿಂದ ಬಂದ ಮೇಲೆ ಬೆಂಗಳೂರಿನಿಂದ ಬಂದಂತಹ ಮಾನ್ಯ ರಮೇಶ್ ಅವರ ಹಿಂಬಾಲಕರು ನನ್ನನ್ನು ಕಿಡ್‌ನ್ಯಾಪ್ ಮಾಡಿ ಪ್ರವಾಸಿ ಮಂದಿರದಲ್ಲಿಟ್ಟಿದ್ದಾರೆ ಎನ್ನುವಂತಹ ಸುದ್ದಿ ಹರಡಿದಾಗ ಆ ಪಟ್ಟಣದಲ್ಲಿದ್ದಂತಹ ಸಾವಿರಾರು ಜನರು ಆ ಒಂದು ಪ್ರವಾಸೀ ಮಂದಿರಕ್ಕೆ ನುಗ್ಗುವಂತಹ ಪ್ರಯತ್ನವನ್ನು ಮಾಡಿದರು. ಅದೇ ಸಂದರ್ಭದಲ್ಲಿ ಪ್ರವಾಸೀ ಮಂದಿರದಲ್ಲಿದ್ದಂತಹವರು ಗುಂಡು ಹಾರಿಸಿದರು.

ಅಷ್ಟರಲ್ಲಿಯೇ ಪ್ರವಾಸಿ ಮಂದಿರಲ್ಲಿದ್ದಂಥವರು ಗುಂಡು ಹಾರಿಸಿದರು. ಹಾಗೆ ಅವರು ಒಂದೆರಡು ಗುಂಡುಗಳನ್ನು ಹಾರಿಸಿಲ್ಲ, ಹತ್ತಾರು ಗುಂಡುಗಳನ್ನು ಹಾರಿಸಿದ್ದಾರೆ. ಪ್ರವಾಸಿ ಮಂದಿರಕ್ಕೂ ಲೋಕೋಪಯೋಗಿ ಇಲಾಖಾ ಕಟ್ಟಡಕ್ಕೂ ಮಧ್ಯೆ ಗೋಡೆಗೆ ಹತ್ತಾರು ಗುಂಡು ತಗುಲಿರುವ ಚಿಹ್ನೆ ಕಾಣುತ್ತದೆ. ಇರತಕ್ಕಂಥ ಇವೊತ್ತಿಗೂ ಪರೀಕ್ಷೆ ಮಾಡಿ ನೋಡಿದರೆ ಅದು ಗೊತ್ತಾಗುತ್ತದೆ. ಆಗ ಗಂಗಯ್ಯ ಎನ್ನುವವರು ಗುಂಡು ತಗಲಿ ಆತ ಸತ್ತಿದ್ದಾರೆ. ನಾನು ರಾತ್ರಿ ಸುಮಾರು 7 ಗಂಟೆ ಹೊತ್ತಿಗೆ ಮನೆಗೆ ವಾಪಸ್ಸು ಬಂದಾಗ, ನಾನು ಕವಿ ಅಲ್ಲ. ಆದರೆ ಯಾರಾದರೂ ಬರವಣಿಗೆಯ ಶಕ್ತಿ ಇರುವವರು ಇದ್ದಿದ್ದರೆ ಆ ಒಂದು ಪರಿಸ್ಥಿತಿಯನ್ನು ಆ ಪರಿಸ್ಥಿತಿಯನ್ನು ಬಹಳ ಉತ್ತಮವಾಗಿ ವರ್ಣನೆ ಮಾಡುತ್ತಿದ್ದರೋ ಏನೋ ಎಂದು ಕಾಣುತ್ತದೆ. ಭಾರಿ ಮಳೆ ಬೀಳುತ್ತಾ ಇತ್ತು. ಪ್ರತಿಯೊಬ್ಬರಲ್ಲಿಯೂ The panic was prevailed to put it in simple word. ಯಾರೂ ಏನೂ ಹೇಳುವುದಕ್ಕೆ ಸಿದ್ಧರಿಲ್ಲ, ಮಾನ್ಯ ಮಂತ್ರಿಗಳ ಪೋಲೀಸ್ ಅಧಿಕಾರಿಗಳನ್ನು ಸಂಪರ್ಕ ಮಾಡಿದರೆ ಅವರು ಈ ಖೂನಿ ಆಗಿದೆಯೋ ಇಲ್ಲವೇ ಎಂದು ಹೇಳುವ, ಇಂಥ ವ್ಯಕ್ತಿ ಸತ್ತಿದ್ದಾನೆ ಎಂದು ಹೇಳುವ ಪರಿಸ್ಥಿತಿಯಲ್ಲಿರಲಿಲ್ಲ. ಎಸ್.ಪಿ. ಯವರಾಗಲೀ, ಡಿಐಜಿಯವರಾಗಲಿ ಯಾವುದೇ ಅಧಿಕಾರಿ ಈ ಘಟನೆಯ ಬಗ್ಗೆ ಯಾವುದೇ ಒಂದು ಸುದ್ದಿಯನ್ನು ಕೊಡುವುದಕ್ಕೆ ಸಿದ್ಧರಿರಲಿಲ್ಲ. ನಾನು ತುಮಕೂರಿಗೆ ಹೋಗಿ ಎಲ್ಲಾ ಮತಗಟ್ಟೆಗಳ ಬಾಕ್ಸ್ ತಲುಪುವವರೆಗೆ ಇದ್ದು ಆಮೇಲೆ ಒಂದು ವಿಷಯ ಹೌದು, ನಾನೇ ಕಂಪ್ಲೇಂಟ್ ಕೊಡಿಸಲು ಹೇಳಿದೆ. ಇದರಲ್ಲಿ ಯಾವ ಮುಚ್ಚುಮರೆಯೂ ಇಲ್ಲ, ಕದ್ದು ಮಾಡುವುದು ಕೂಡ ಏನೂ ಇಲ್ಲ. ನಾನು ಚುಚ್ಚಯ್ಯ ಎಂಬ ಒಬ್ಬ ಹರಿಜನ ನಾಯಕರು ಇದ್ದಾರೆ, ಅವರನ್ನು ಕಳುಹಿಸಿ,

ಆ ಅಮ್ಮನನ್ನು ಕರೆಸಿ, ನಿನಗೆ ಏನು ತಿಳಿದು ಬಂದಿದೆ ಅದನ್ನು ಬರೆದುಕೊಡು ಎಂದು ಹೇಳಿ ನಾನೇ ಎರಡು ಗಂಟೆಯೊಳಗಾಗಿ ಕಂಪ್ಲೈಂಟ್ ಕೊಡಿಸಿದ್ದೆ. ಅಪ್ಪೊತ್ತು ಅಲ್ಲಿ ಅಧಿಕಾರಿಯಾಗಿರತಕ್ಕಂಥವರು ಕೇಸನ್ನು ರಿಜಿಸ್ಟರ್ಡ್ ಮಾಡಿಕೊಂಡಿದ್ದಾರೆ. I compliment that officer. I congratulate that officer. ಆ ಅಧಿಕಾರಿಯು ನನ್ನ ವಶದಲ್ಲಿರತಕ್ಕಂಥವರು ಅಲ್ಲ. ಆ ಅಧಿಕಾರಿ ಸರಕಾರದ ಒಂದು ಅಂಗ. ಕೇಸನ್ನು ನೊಂದಾವಣೆ ಮಾಡಿಕೊಂಡಿರುವವರು ನಾನು ಅಲ್ಲ, ಅಥವಾ ಬೇರಾವ ವ್ಯಕ್ತಿಯೂ ಅಲ್ಲ. The case has been registered by the officer of the Government The case is not between Mr. Ramesh and Mr. Ramaiah. The case is between the state and Mr. Ramesh.

ನನ್ನ ಮಾನ್ಯ ಸ್ನೇಹಿತರಾದಂಥ ಕಾಗೋಡು ತಿಮ್ಮಪ್ಪನವರು ಅಪರಾಧಿ ಯಾರು ಎನ್ನುವುದನ್ನು ಬಹಳ ಕೇಳುತ್ತಾ ಇದ್ದಾರೆ. ಮಾನ್ಯ ಸಭಾಧ್ಯಕ್ಷಿಣಿಯವರೇ, ನಾನು ಮಾತನಾಡುವ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬಯಸುತ್ತೇನೆ. ನಾನು 18 ವರ್ಷಗಳ ಕಾಲ ವಕೀಲನಾಗಿ ಕೆಲಸ ಮಾಡುವಾಗ ಸಾಕಷ್ಟು ಇಂಥ ಖಟಾನಿ ಕೇಸ್‌ಗಳನ್ನು ನೋಡಿದ್ದೇನೆ. ಇಂಥ ಹತ್ತಾರು, ಕೇಸ್‌ಗಳನ್ನು ನಡೆಸಿದ್ದೇನೆ ಆ ಒಂದು ಅನುಭವದ ಹಿನ್ನೆಲೆಯಲ್ಲಿ ನಾನು ಮಾತನಾಡುವಾಗ ತಮ್ಮ ಗಮನಕ್ಕೆ ಕೆಲವು ವಿಚಾರಗಳನ್ನು ತರುವುದಕ್ಕೆ ಇಚ್ಛೆಪಡುತ್ತೇನೆ. ಪೊಲೀಸ್ ಸ್ಟೇಷನ್‌ನಲ್ಲಿ ಕೇಸ್‌ನ್ನು ನಮೂದು ಮಾಡಿಕೊಂಡಾಗ ಉಪಯೋಗಿದಂತಥ ಫಾರ್ಮ್ prescribed form in which a case has been registered by the Station House officer. ಅದರೊಳಗೆ ಕಾಲಮ್ ಫಿರ್ಯಾದಿಯ ಹೆಸರು ಲಕ್ಷ್ಮಮ್ಮ, ಆರೋಪಿಯ ಹೆಸರು ಎಸ್. ರಮೇಶ್ ಕೇಸ್ ನಂಬರ್ 116. This is the prescribed form. This form is prescribed by this August State Government and the case has been registered by a public servant who is paid-by this Government. The case has been registered by the Police officer under Sec. 302 of IPC and 245. Afterwards, he has sent the FIR rightly and correctly to the First Class Magistrate, Tumkur. ಅಲ್ಲಿ ಸಿ.ಆರ್ ನಂಬರ್ 28 : ಫಿರ್ಯಾದಿ ಕುಣಿಗಲ್ ಪೊಲೀಸ್, ಆರೋಪಿ : ಎಸ್. ರಮೇಶ್. ಇದು ಕೂಡ ಯಾವುದಾದರೂ ಒಂದು ಕೇಸ್ ಕೋರ್ಟ್‌ಗೆ ಬಂದಾಗ ಅದನ್ನು ನಮೂದು ಮಾಡಿಕೊಳ್ಳುವಂಥ ರಿಜಿಸ್ಟರ್ ಮಾಡಿಕೊಳ್ಳುವಂಥ ಏನೊಂದು ಪ್ರಿಸ್ಕ್ರೈಬ್ಡ್ ಫಾರ್ಮ್ ಇದೆಯೋ ಅದರಲ್ಲಿಯೇ ಮಾಡಿಕೊಂಡಿದ್ದಾರೆ. ವರ್ತಮಾನ ಅಥವಾ ವಿಷಯ ಕೊಟ್ಟವರ ಹೆಸರು, ಸಾಕ್ಷಿಗಳು ಸಾರಾಂಶ, ಕೃತ್ಯ ನಡೆದ ತಾರೀಖು, ಅಪರಾಧಿಯ ಹೆಸರು, ಪಿರ್ಯಾದಿ : ಲಕ್ಷ್ಮಮ್ಮ ಕೋಂ—ಗಂಗಯ್ಯ, ಆರೋಪಿ : ಎಸ್. ರಮೇಶ್. ಕರ್ನಾಟಕ ರಾಜ್ಯದ ಮಂತ್ರಿ. ಇಲ್ಲಿ ನಾನು ಮಾತನಾಡುವಾಗ ಅವರ ಪರಿಚಯ ಕೂಡ ನನಗೆ ಇಲ್ಲ. ಒಂದು ದಿವಸ ಕಾಮಾಕ್ಷಿಪಾಳ್ಯದ ಒಂದು ದೇವಸ್ಥಾನದ ಪ್ರಾರಂಭೋತ್ಸವದಲ್ಲಿ ಅವರನ್ನು ನಾನು ದೂರದಿಂದ ನೋಡಿದ್ದೇನೆ. ಎರಡು ಸಾರಿ ನಾನು ಸದನದಲ್ಲಿ ಕೆಲಸ ಮಾಡುತ್ತಿದ್ದಂಥ ಸಂದರ್ಭದಲ್ಲಿ ಅವರು ಸದನದ ಸದಸ್ಯರಾಗಿ ಇರಲಿಲ್ಲ.

ಇಲ್ಲಿ ರಮೇಶ್ ಇದ್ದಾರಾ, ದೇವರಾಜ್ ಇದ್ದಾರಾ, ರಾಮಯ್ಯ ಇದ್ದಾರಾ, ಬೈರೇಗೌಡರಿದ್ದಾರಾ, It is absolutely immaterial for me. ಆದ್ದರಿಂದ ಇಲ್ಲಿ ರಮೇಶ್‌ರವರ ಹೆಸರು ಪ್ರಾಸ್ತಾವಿಕವಾಗಿ ಬರುತ್ತದೆಯೇ ಹೊರತು ವ್ಯಕ್ತಿಯ ಹೆಸರು ಮುಖ್ಯವಲ್ಲ. Now the case is registered and the F.I.R. was forwarded to the Court. ಇದಾದಮೇಲೆ, ರಮೇಶ್ ಅವರು ಮಂತ್ರಿಮಂಡಲದ ಸದಸ್ಯರಾಆಗಿದ್ದರು. ನಾನು ಬೆಂಗಳೂರಿಗೆ ಬಂದು ರಾಜ್ಯದ ಮುಖ್ಯಮಂತ್ರಿಗಳಿಗೆ ಒಂದು ಕಾಗದ ಬರೆದೆ. ಮನ್ಯ ಬಂಗಾರಪ್ಪನವರು ಆ ಪತ್ರ ಓದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಇದನ್ನು ಏಕೆ ನಾನು ಒತ್ತಾಯ ಪೂರ್ವಕವಾಗಿ ಹೇಳುತ್ತಿದ್ದೇನೆಂದರೆ ಇಂತಹುದೇ ಒಂದು ಸಂದರ್ಭ ನಮ್ಮ ಪಕ್ಷ ಆಡಳಿತ ಮಾಡುತ್ತಿದ್ದಾಗ ಕೂಡ ಬಂದಿತ್ತು. ಜನತಾ ಪಕ್ಷದ ಇಲ್ಲಿ ಆಡಳಿತ

ಮಾಡುತ್ತಿದ್ದಾಗ ಶ್ರೀ ಜಾಲಪ್ಪನವರು ರಶೀದರ ಕೊಲೆ ಕೇಸಿನಲ್ಲಿ ಅಬೇಟರ್ ಆಗಿದ್ದಾರೆಂದು ಕೇಸ್ ಹಾಕಿದ್ದರು. He was not involved. He was only mentioned as abettor. ಆ ಕೊಲೆ ಮಾಡಲಿಕ್ಕೆ ಕುಮ್ಮಕ್ಕು ಕೊಟ್ಟಿದ್ದಾರೆಂಬ ಅಪಾದನೆ ಬಂದಾಗ ಅವತ್ತಿನ ಮುಖ್ಯಮಂತ್ರಿಗಳು ಜಾಲಪ್ಪನವರನ್ನು ಸಂಪುಟದಿಂದ ಕೈಬಿಡದೇ ಇದ್ದ ಸಂದರ್ಭದಲ್ಲಿ ಅವರಿಗೆ ನಾನೊಂದು ಪತ್ರ ಬರೆದಿದ್ದೆ. ಅದರ ಪ್ರತಿಯನ್ನೇ ನಾನು ಬಂಗಾರಪ್ಪನವರಿಗೂ ಈಗ ಕಳಿಸಿರುವುದು. ಅದರಲ್ಲಿ ಒಂದಕ್ಷರ ಕೂಡ ಬದಲಾವಣೆ ಮಾಡಿಲ್ಲ. "ಈ ರಾಜ್ಯದಲ್ಲಿ ಕೊಲೆ ಆಪಾದನೆಗೆ ಒಳಗಾಗಿರುವ ಒಬ್ಬ ವ್ಯಕ್ತಿಯನ್ನು ಗೃಹಮಂತ್ರಿಯಾಗಿ ಇಟ್ಟುಕೊಳ್ಳುವಷ್ಟು ದಿವಾಳಿತನ ಕರ್ನಾಟಕ ರಾಜ್ಯಕ್ಕೆ ಬಂದಿಲ್ಲ. ಆದ್ದರಿಂದ ಇಂತಹ ವ್ಯಕ್ತಿಯನ್ನು ಮುಂದುವರೆಸುವುದರಿಂದ ವೈಯಕ್ತಿಕವಾಗಿ ನಿಮಗೇ ಗೌರವ ಬರುವುದಿಲ್ಲ. ನಾನು ಪ್ರತಿನಿಧಿಸುವ ಸರ್ಕಾರಕ್ಕೆ ಹಾಗು ನಾವು ಇರುವಂತಹ ಪಕ್ಷಕ್ಕೆ ಗೌರವ ಬರುವುದಿಲ್ಲ. ದಯಮಾಡಿ ಅವರನ್ನು ಸಂಪುಟದಿಂದ ಕೈಬಿಡಿ" ಅಂತ ಪತ್ರ ಬರೆದಿದ್ದೆ. ಒಂದೇ ವ್ಯತ್ಯಾಸ ಅಂದರೆ ಆ ಪತ್ರಕ್ಕೆ ನಾನೂ ಶ್ರೀ ಸಿದ್ದರಾಮಯ್ಯನವರು ಇಬ್ಬರೂ ರುಜು ಮಾಡಿದ್ದೆವು. ಈ ಪತ್ರಕ್ಕೆ ನಾನೊಬ್ಬರನೇ ರುಜು ಮಾಡಿ ಕಳುಹಿಸಿದ್ದೇನೆ. ಆದ್ದರಿಂದ ಪಕ್ಷಾತೀತವಾಗಿ ಈ ಮಾತು ಹೇಳುತ್ತಿದ್ದೇನೆ. ಯಾವನೇ ಒಬ್ಬ ವ್ಯಕ್ತಿ ಅಪರಾಧ ಮಾಡಿದ್ದಾನೋ ಇಲ್ಲವೋ ಅಂತ ಹೇಳುವ ಜವಾಬ್ದಾರಿ ಕಾನೂನನ್ನು ಅರಿತಿರುವ ಸಂಬಳ ತೆಗೆದುಕೊಳ್ಳುವ ನ್ಯಾಯಾಧೀಶರಿಗೆ ಸೇರಿದ್ದು. ಇದರ ಅರಿವು ಸಂಪೂರ್ಣ ನನಗಿದೆ, ರಮೇಶರು ಅಪರಾಧಿಯೇ ಅಲ್ಲವೇ ಜಾಲಪ್ಪನವರು ಅಪರಾಧಿಯೇ ಅಲ್ಲವೇ ಎಂಬ ಪ್ರಶ್ನೆ ಬೇರೆ ಆದರೆ ಖೂನಿ ಕೇಸಿನಂತಹ ಗಂಭೀರ ಆಪಾದನೆ ಹೊತ್ತಿರುವ ವ್ಯಕ್ತಿಯನ್ನು ನಾನು ಕೈಬಿಡುವುದಿಲ್ಲ, ಅವರನ್ನು ಮಂತ್ರಿಮಂಡಲ ಮುಂದುವರೆಸುತ್ತೇನೆ ಅಂತ ಶ್ರೀ ಬಂಗಾರಪ್ಪನವರು ಹೇಳಿದಾಗ ಖಂಡಿತವಾಗಿಯೂ ನನಗೆ ವ್ಯಥೆಯಾಯಿತು, ಆಗ ಪತ್ರ ಬರೆದು ಸುಮ್ಮನಾದೆ. ಆಮೇಲೆ ಸ್ವಲ್ಪ ದಿಘಸಕ್ಕೆ ಶ್ರೀ ರಮೇಶರು ತಮ್ಮ ಮಂತ್ರಿಮಂಡಲದ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಆಗ ನಾನು ಪತ್ರಿಕೆಗಳಿಗೆ ಹೇಳಿಕೆ ಕೊಟ್ಟೆ "ರಾಜೀನಾಮೆ ಕೊಟ್ಟ ರಮೇಶರಿಗೆ ಮತ್ತು ಅದನ್ನು ಅಂಗೀಕರಿಸಿದ ಬಂಗಾರಪ್ಪನವರಿಗೆ ಕೊನೆಗಾದರೂ ಬುದ್ಧಿ ಬಂತು ಎಂದು ಈ ಕೆಲಸವನ್ನು ತಕ್ಷಣವೇ ಮಾಡಿದ್ದರೆ ಅವರಿಗೆ ಇನ್ನೂ ಕಿಮ್ಮತ್ತು ಜಾಸ್ತಿಯಾಗುತ್ತಿತ್ತು. ಅಷ್ಟು ನಿಧಾನ ಮಾಡಿದ್ದರಿಂದ ಎಷ್ಟು ಕಿಮ್ಮತ್ತು ಬರಬೇಕಾಗಿತ್ತೋ ಅಷ್ಟು ಕಿಮ್ಮತ್ತು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಇವತ್ತು ಪರಿಸ್ಥಿತಿ ಇಷ್ಟೆ I.P.C. 302 ರ ಕೆಳಗೆ ಕೇಸ್ ರಿಜಿಸ್ಟರಾಗಿದೆ. ಆದರೆ ಅಪರಾಧಿಯನ್ನು ಬಂಧಿಸಿಲ್ಲ, ಇವತ್ತು ಗೃಹಮಂತ್ರಿಗಳಿಗೆ ಈ ರಾಜ್ಯದ ಪೊಲೀಸರಿಗೆ, ನಾನು ಒಂದು ಪ್ರಶ್ನೆ ಕೇಳಬಯಸುತ್ತೇನೆ : ಈ ರಾಜ್ಯದಲ್ಲಿ, ನಿಮ್ಮ ಕ್ಷೇತ್ರದಲ್ಲೇ ಆಗಲಿ, ಖೂನಿ ಮಾಡಿದ ಒಬ್ಬ ವ್ಯಕ್ತಿಯನ್ನು ರಾಜರೋಷವಾಗಿ ತಿರುಗಾಡಲಿಕ್ಕೆ ಬಿಟ್ಟಿರುವಂತಹ ನಿದರ್ಶನ ಈ ರಾಜ್ಯದಲ್ಲಿಲ್ಲ ಏಕೆ ಈ ರಾಷ್ಟ್ರದಲ್ಲಿ ಎಲ್ಲಾದರೂ ಇದೆಯೇ? ಕಾನೂನು ಸಾಮಾನ್ಯರಿಗೊಂದು ಬೇರೆಯರಿಗೊಂದು ಎಂದು ಇದೆಯೇ ? ಅಥವಾ ಎಲ್ಲರೂ ಸಮಾನರು ಎಂದು ಹೇಳುತ್ತದೆಯೇ? ಇಂತಹುದೇ ಒಂದು ಸಂದರ್ಭದಲ್ಲಿ ಮಾನ್ಯ ಶ್ರೀ ಖರ್ಗೆಯವರು ಹಾಗೂ ಬಂಗಾರಪ್ಪನವರು ಈ ಕಡೆ ಕೂತಾಗ ಮಾಡಿರುವ ಭಾಷಣದ ಒಂದೆರಡು [illegible]ಗಳನ್ನು ಈ ಸಭೆಯ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಇಂತಹುದೇ ಸಂದರ್ಭ, ಅಲ್ಲಿ ಒಂದ [illegible] ಆಗಿತ್ತು, ಅಲ್ಲೂ ಸಂಬಂಧಪಟ್ಟವರು ಮಂತ್ರಿಗಳಿದ್ದರು. ವ್ಯತ್ಯಾಸವೆಂದರೆ ನೀವು ಇಲ್ಲಿ ಕೂತಿದ್ದರು ನಾವು ಅಲ್ಲಿ ಕೂತಿದ್ದೆವು. ನಾನು ಮೊನ್ನೇನೆ ಒಂದು ಸಲ ಹೇಳಿದೆ, ಇದು ಮಾನವ ಸಹಜವಾದ ದುರ್ಗುಣವೋ, ಸದ್ಗುಣವೋ ವೀಕ್‌ನೆಸೋ ಎಂದು ನನಗೆ ಗೊತ್ತಿಲ್ಲ. ಇಲ್ಲಿ ಕೂತಾಗ ಏನು ಮಾತಾಡ್ತೇವೋ ಆ ಕಡೆ ಹೋಗ್ತಾ ಇದ್ದಾಗ ಬದಲಾವಣೆ ಆಗಿಬಿಡ್ತೇವೆ.

ಶ್ರೀ ಸಿ. ಬೈರೇಗೌಡ : ತಾವು ಆ ಕಡೆ ಕೂತಿದ್ದರೂ ಅಂತಹ ಸಂದರ್ಭ ಬಂದಾಗ ತಾವು ಮುಖ್ಯಮಂತ್ರಿಗಳಿಗೆ ಒಂದು ಪತ್ರ ಬರೆದು ಅವರ ಮೇಲೆ ಕ್ರಮ ತೆಗೆದುಕೊಂಡು ಪಕ್ಷ ಮತ್ತು ಸರ್ಕಾರದ ಮಾನ ಕಾಪಾಡಲು ಅವರನ್ನು ಸಂಪುಟದಿಂದ ಕೈಬಿಡಬೇಕೆಂದು ಹೇಳಿದ್ದೀರಿ. ಅವರು ಅಲ್ಲಿ ಕುಳಿತುಕೊಂಡರು ಎನ್ನುವ ಮಾತನ್ನು ಹೇಳಿದ್ದರೆ. ವ್ಯಕ್ತಿ ಬದಲಾವಣೆಯಾಗಬಹುದೇ? ನೀವು ಅದನ್ನು ಎಲ್ಲರಿಗೂ ಅನ್ವಯಿಸಬೇಡಿ.

ಶ್ರೀ ಆರ್.ಎನ್. ನಾಯಕ್ : ಎಲೆಕ್ಷನ್‌ನಲ್ಲಿ ಗೆದ್ದ ದಿವಸ ಜಾಲಪ್ಪನವರು ಗೃಹಮಂತ್ರಿಯಾಗಿದ್ದಾಗ ನಾನು ಒಂದು ಕಾಲಿಂಗ್ ಅಟೆನ್‌ಷನ್‌ನ್ನು ಕೊಟ್ಟೆ. ನೀನೇ ಏನೋ ಗಲಾಟೆಯನ್ನು ಮಾಡಿರಬೇಕು ಎಂದು ಹೇಳಿ ಮುಚ್ಚಿಬಿಟ್ಟರು. ಅದೆಲ್ಲಾ ಇರುತ್ತದೆ.

ಶ್ರೀ ವೈ.ಕೆ. ರಾಮಯ್ಯ : ಯಾವುದೇ ಒಂದು ಕೇಸ್‌ನಲ್ಲಿ ಆಪಾದನೆ ಹೊಂದಿರುವಂಥ ಒಬ್ಬ ಆರೋಪಿ ತನ್ನ ಸ್ಥಾನಮಾನಗಳಿಂದ ಕಾನೂನಿಗೆ ಒಳಪಡದೆ ಇರುವುದಕ್ಕೆ ಸಾಧ್ಯವೇ? Whether the due process of law, is one and the same for all citizens of this country? ಇದನ್ನು ನಾನು ಹೇಳುತ್ತಿಲ್ಲ. ನನ್ನ ಸ್ನೇಹಿತರೇ ಹೇಳಿರುವ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಅಫಿಸಿಯಲ್ ರಿಪೋರ್ಟ್, ಸಂಪುಟ 5, 11ನೇ ಮೇ 1988ರಿಂದ 17ನೇ ಮೇ 1988ವರೆಗಿನ ವರದಿ. ವಿಧಾನಸಭೆಯಲ್ಲಿ ನಮ್ಮ ಹಿರಿಯ ಸದಸ್ಯರಾದ ಶ್ರೀಮಾನ್ ಖರ್ಗೆಯವರು ಇಂಥದೇ ಸಂದರ್ಭದಲ್ಲಿ ಏನು ಹೇಳಿದ್ದಾರೆ ಎಂದು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ.
"All are equal before law. Whether he is a Home Minister or the chief Minister or M.L.A. Whosoever he may be, you should act importially." This is exactly what uttered by the present rural Minister sitting on this bench. Now is it an offence for me to expect the same conduct from Shri Kharge? Is it incorrect? Is it illegal? is it out of the way? Then I will come to our Chief Minister. I will read what he has said.
ಇದು ಪೇಜ್ 240ರಲ್ಲಿದೆ. "ಈ ತನಿಖೆಯ ಪ್ರಗತಿಗೆ ರಾಜ್ಯ ಸರ್ಕಾರದ ಅಧೀನದಲ್ಲಿರುವ ಗೃಹ ಇಲಾಖೆ ಯಾವ ರೀತಿ ಸಹಕರಿಸಿದೆ ಎಂಬುದನ್ನು ಸಹ ನಾವು ತಿಳಿದುಕೊಳ್ಳಬೇಕಾಗುತ್ತದೆ.'' ಆಮೇಲೆ ಮುಂದುವರಿದು ಅವರು ಹೇಳುತ್ತಾರೆ. ಅವರು ಒಂದು ಮಾತನ್ನು ಬಹಳ ತಮಾಷೆಯಾಗಿ ಹೇಳಿದ್ದಾರೆ.

Accused ಹೆಸರಿಲ್ಲ ಎಂದು ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳುತ್ತಿದ್ದುದಕ್ಕೆ ಶ್ರೀಮಾನ್ ಬಂಗಾರಪ್ಪನವರು ಅವತ್ತು ಉತ್ತರವನ್ನು ಕೊಟ್ಟಿದ್ದಾರೆ. "ಅಕ್ಯೂಸ್ಡ್ ಹಳ್ಳಿಯವನಾಗಿದ್ದರೆ ಅವನ ಹೆಸರನ್ನು ಅಲ್ಲಿ ಕಾಣಿಸುತ್ತಿದ್ದರು'' ಅಂದರೆ ಅವರು ಅವತ್ತು ಹೇಳುತ್ತಾರೆ. ಹಳ್ಳಿಯವರಿಗೆ ಒಂದು ತರಹದ ಕಾನೂನು ಮಾಡಬೇಡಿ. ಮಂತ್ರಿಗಳಿಗೆ ಒಂದು ತರಹದ ಕಾನೂನು ಮಾಡಬೇಡಿ ಎಂದು. ಹಳ್ಳಿಯವರಾಗಿದ್ದರೆ ಏನೇನೂ ಆಗುತ್ತಿತ್ತು. ಆದ್ದರಿಂದ ಅವರು ಮಂತ್ರಿಯಾದ್ದರಿಂದ ಇವರು ಇಂಥ ಸ್ಪೆಷಲ್ ಟ್ರೀಟ್‌ಮೆಂಟನ್ನು ನೀವು ಕೊಡುತ್ತೀದ್ದೀರಿ ಇವತ್ತು ನಾನು ಅದೇ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಹಳ್ಳಿಯವರು ಯಾರಾದರೂ ಕೊಲೆ ಮಾಡಿದ್ದರೆ ಬಹುಶಃ ನಿಮ್ಮ ಪೊಲೀಸ್ ಅಧಿಕಾರಿಗೆ ಒಂದು ಸಾವಿರವೋ ಎರಡು ಸಾವಿರವೋ ಕೊಟ್ಟು ನಾಲ್ಕು ದಿವಸ ತಲೆತಪ್ಪಿಸಿಕೊಳ್ಳಬಹುದಿತ್ತೇ ಹೊರತು ಈ ರೀತಿ ರಾಜಾರೋಷವಾಗಿ ಓಡಾಡುವುದಕ್ಕೆ ಸಾಧ್ಯ ಇರಲಿಲ್ಲ. ಇಲ್ಲಿ ಅದೇ ಮಾತನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಹಳ್ಳಿಯವರಿಗೆ ಒಂದು ಕಾನೂನು ಅಲ್ಲ. ದಿಲ್ಲಿಯವರಿಗೆ ಒಂದು ಕಾನೂನು ಅಲ್ಲ. ಮಂತ್ರಿಗೆ ಒಂದು ಕಾನೂನು ಅಲ್ಲ. ಈ ದೇಶದ ಪ್ರಜೆಗೆ ಒಂದು ಕಾನೂನು ಅಲ್ಲ. ಕಾನೂನು ಎಲ್ಲರಿಗೂ ಒಂದೇ. ಇದು ಬಹಳ ಸ್ವಾರಸ್ಯಕರವಾದುದು. ಹೆಣ್ಣು ಹೃದಯ ಇಂತಹುದು ಒಂದು ಸಂದರ್ಭದಲ್ಲಿ ಹೇಗೆ ಮಿಡಿದಿದೆ ಎನ್ನುವುದಕ್ಕೆ ನೀವು ಹೆಣ್ಣಾಗಿರುವುದರಿಂದ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಶ್ರೀಮತಿ ನಾಗರತ್ನನವರು ಆ ಸಂದರ್ಭದಲ್ಲಿ ಏನು ಹೇಳಿದ್ದಾರೆ, ಒಬ್ಬರು ಖೂನಿಯಾದಾಗ ಅವರ ಮನೆಯ ಪರಿಸ್ಥಿತಿ, ಮಕ್ಕಳ ಪರಿಸ್ಥಿತಿ . ಮುಂಡೆಯಾದವಳ ಪರಿಸ್ಥಿತಿ ಏನು ಆಗಬಹುದು. ಎನ್ನುವುದನ್ನು ನಾನು ಹೇಳುತ್ತಿಲ್ಲ. ಶ್ರೀಮತಿ ನಾಗರತ್ನಮ್ಮನವರು ಅವತ್ತು ಏನು ಹೇಳಿದ್ದಾರೆಂಬುದನ್ನು ಕೂಡ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. "ಮಾನ್ಯ ಅಧ್ಯಕ್ಷರೇ, ರಷೀದರ ಶವವನ್ನು ಸಾಗಿಸಿದಾಗ ಕಾಲುಗಳನ್ನು ಒಳಕ್ಕೆ ತಳ್ಳಿದೆ ಎಂದು ರೂಮ್‌ಬಾಯ್ ಹೇಳಿದ್ದಾನೆ, ಏಕೆ ಇದನ್ನು ಮಾಡುತ್ತಾರೆ. ಇಂಥವರು ಮಾಡಿದ್ದಾರೆ, ಅಂಥವರು ಮಾಡಿದ್ದಾರೆ ಎನ್ನತಕ್ಕಂಥ ಪ್ರಶ್ನೆ ಇದಲ್ಲ. ಈ ರಾಜ್ಯಕ್ಕೆ ಕೇರಳದಿಂದ ಬಂದಿರತಕ್ಕಂಥ ಒಬ್ಬ ಮನುಷ್ಯ ಅವನನ್ನು ಹೀಗೆ ಕೊಲೆ ಮಾಡಿದರೆ ಅವನ ಮನೆ ಮಕ್ಕಳ ಗತಿಯೇನು? ಅವನ ಹೆಂಡತಿಯ ಗತಿಯೇನು? ಕಗ್ಗೊಲೆ ಮಾಡಿದವರನ್ನು ಮುಚ್ಚಿಟ್ಟುಕೊಳ್ಳಬೇಕು ಎಂದರೆ ಅದು ಯಾರಿಗೆ

ಆಗಲಿ. ಮರ್ಯಾದೆ ತರತಕ್ಕಂಥ ಪ್ರಸಂಗ ಅಲ್ಲ''. ಮುಖ್ಯಮಂತ್ರಿಯವರು ಈ ಕೇಸ್‌ನ ಬಗ್ಗೆ ವಿಚಾರಣೆಯನ್ನು ಮಾಡುವುದಕ್ಕೆ ಸಿ.ಬಿ.ಐ. ಅವರಿಗೆ ವಹಿಸಿಕೊಟ್ಟಿದ್ದಾರೆ, ಅವರು ಈಗ ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ, ನಮ್ಮ ಸರ್ಕಾರ ಸಹಕಾರ ಮಡಬೇಕು. ಕಾನೂನುಗಿಂತ ಹೆಚ್ಚಿನವರು ಯಾರೂ ಅಲ್ಲ. ಎಷ್ಟೇ ದೊಡ್ಡವರಾಗಿರಲಿ ತಪ್ಪು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.''

ಶ್ರೀಮತಿ ನಾಗರತ್ನನವರು ಪ್ರಸ್ತಾಪ ಮಾಡಿರುವುದರಲ್ಲಿ ಎರಡನ್ನು ಒತ್ತಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇವತ್ತು ಗಂಗಯ್ಯ ತೀರಿಕೊಂಡಿದ್ದಾರೆ. ನಾನು ಶಾಸನ ಸಭೆಯ ಸದಸ್ಯ ನಾವು ಎಲ್ಲಾ ಸವಲತ್ತುಗಳ ಸರದಾರನಾಗಿದ್ದೇನೆ. ಯಾರಾದರೂ ಕೊಂದಿರಲಿ, ಕೊಂದವರು ಏತಕ್ಕೆ ಕೊಂದಿದ್ದಾರೆಂದು ನನಗೆ ಗೊತ್ತಿಲ್ಲ. ನಾನು ನೋಡಿಲ್ಲ. ನಾನು ಅಷ್ಟು ಅವಿವೇಕಿ ಅಲ್ಲ, ನನಗೆ ಗೊತ್ತಿದೆ ಎಂದು ಹೇಳುವಷ್ಟು, ಕೊಂದವರು ಇವತ್ತು ಐಷಾರಾಮವಾಗಿ ಅವರ ಕುಟುಂಬದವರೊಂದಿಗೆ ಜೀವನವನ್ನು ಮಾಡುತ್ತಿದ್ದಾರೆ. ಆದರೆ ಗಂಡನನ್ನು ಕಳೆದುಕೊಂಡಂತಹ ಹೆಣ್ಣಿನ ಊರು ಬಹುಶಃ ಅಲ್ಲಿಯೇ ಅಲ್ಲಿಯೇಹತ್ತಿರ ಇದೆ. ನಿಮಗೆ ತೊಂದರೆ ಆಗದಿದ್ದರೆ, ನೀವು ಒಂದು ಹಪ್ಪಾಗಿ ಆ ಊರಿಗೆ ಹೋಗಬೇಕು. ಅವಳು ಮೂಗಿ, ಅವಳಿಗೆ ಮಾತನಾಡುವುದಕ್ಕೆ ಬರುವುದಿಲ್ಲ. ನಾನು ಯಾರು ಕೊಂದಿದ್ದಾರೆ ಎಂಬ ಪ್ರಶ್ನೆಗೆ ಬರುವುದಿಲ್ಲ ಯಾರಾದರೂ ಕೊಂದಿರಲಿ, ಅದರ ಪಾಪ ಪುಣ್ಯ ಅವರೇ ನೋಡುತ್ತಾರೆ. ಅದಕ್ಕೆ ಕಾನೂನು ಇದೆ, ಅದು ನೋಡಿಕೊಳ್ಳುತ್ತದೆ. ಆದರೆ ಪರಿಸ್ಥಿತಿ ಹೀಗಿದೆ, ಅವಳಿಗೆ ಒಂದೇ ಒಂದು ಗುಂಟೆ ಜಮೀನೂ ಸಹ ಇಲ್ಲ. ಒಂದೇ ಒಂದು ಅಂಗೈಯಷ್ಟು ಮನೆಯಿಲ್ಲ. ಆದರೆ ಇದುವರೆಗೂ ಸರ್ಕಾರದವರು ಆಕೆಗೆ ಕಣ್ಣು ತೆರೆದು ಒಂದು ರೂಪಾಯಿಯನ್ನು ಕೊಡುವಂತಹ ಪ್ರಯತ್ನವನ್ನು ಕೂಡ ಮಾಡಿಲ್ಲ. ನಾನು ಅದನ್ನು ಕೇಳಲಿಕ್ಕೂ ಹೋಗಿಲ್ಲ. ಅದು ಬೇರೆ ವಿಚಾರ. ಇರುವ ವಸ್ತು ಪರಿಸ್ಥಿತಿಯನ್ನು ಮಾತ್ರ ನಿಮ್ಮ ಗಮನಕ್ಕೆ ತರುತ್ತೇನೆ. ಆಕೆ ಮೂಗಿಯಾಗಿದ್ದಾಳೆ. ಅವಳಿಗೆ ಎರಡು ಹೆಣ್ಣು ಮತ್ತು ಒಂದು ಗಂಡು ಹೀಗೆ ಒಟ್ಟು ಮೂರು ಜನ ಮಕ್ಕಳಿದ್ದಾರೆ. ಅವರು ಹೇಗೆ ಬದುಕಬೇಕು? ಆದಕ್ಕಾಗಿ ನಾನು ಹೇಳಿದ್ದು. ಇದು ಕೇವಲ ಕಾನೂನಿನ ಪ್ರಶ್ನೆ ಅಲ್ಲ ಹಾಗೂ ಕೇವಲ ಈ ಸದನದ ಪ್ರಶ್ನೆ ಅಲ್ಲ. ಇದರಲ್ಲಿ ಮಾನವೀಯತೆಯ ದೃಷ್ಟಿ ಇದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಲಿಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಇಂತಹ ಪರಿಸ್ಥಿತಿಯಲ್ಲಿ ಅಪರಾಧಿ ಎಂದು ಕೇಸ್‌ನಲ್ಲಿ ನಮೂದು ಮಾಡಿರುವಂತಹ ವ್ಯಕ್ತಿಯನ್ನು ಬಂಧಿಸದೇ ಇರುವುದು ಈ ಸರ್ಕಾರಕ್ಕೆ ಗೌರ ತರುವಂತಹ ವಿಷಯ ಅಲ್ಲ. After the registration of the case, what next? The Investigation Officer to proceed with investigation. What is that investigation? The investigation is, he should visit the spot, he should seize the property and arrest the accused. There are two kinds of cases. Cornizable offences and non-congnizable offences-Warrant case and summons case. In summons cse and non-cognizable casesನಲ್ಲಿ ಯಾರಾದರೂ ಫಿರ್ಯಾದಿ ಕೊಟ್ಟರೆ, ಅನುಸರಿಸಬೇಕಾದಂತಹ ಕಾನೂನೇ ಬೇರೆ ಇದೆ. ನಿಯಮಾವಳಿಗಳೇ ಬೇರೆ ಇವೆ. but in the case the cognizable offence, in the case of warrant cases, the inestigation officer should proceed to the spot and seize the property and arrest the accused. ಅವರು ಒಪ್ಪುತ್ತಾರೋ ಬಿಡುತ್ತಾರೋ ನನಗೆ ಬೇಕಾಗಿಲ್ಲ. ನನ್ನ ಕರ್ತವ್ಯವನ್ನು ನಾನು ಮಾಡುತ್ತೇನೆ. I will just bring to the notice of the Chair what is the procedure that ought to have been followed. "Police Officer's power to investigate the cognizable offence : Section 156," page 742- What is Investigation." This is Criminal Procedure Code by B.B. Mitra.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವರಿಗೆ ಇದೆಲ್ಲಾ ಗೊತ್ತಿಲ್ಲ ಎಂದು ಅಂದುಕೊಂಡಿದ್ದೀರಾ? ಗೊತ್ತಿದ್ದೇ ಮಾಡಿರುವಂತಹದ್ದು.

Sri Y.K. RAMAIAH : I know that they know well but I am doing my duty. I know that they know well. Even if they don't know, the Officers

knows it, the police knows it. This is Clause 3 Page 742 : "Under the Code the investigation starts after the police officer receives the information in respect of an offence and consists of the following steps in the case of cognizable offences :

"1. Proceeding to spot
2. Assertion of the facts & circumstances of the case.
3. Discovery and arrest of the suspected of offender"

I emphasize the words suspected offender' The arrest of the accused is not after the collection of the evidence. He has to be arrested immediately and in case the police officer so conducting the investigation feels that the evidence he has collected is insufficient or deficient then he can release him. For that also, there is a provision under the Criminal Procedure code. I request the Chief Minister to recollect his memory, if he has really practiced criminal law I don't know whether he has conducted any 302 cases or not. I know what will be the result of the case, Madam Dy. Speaker.

Now I am emphasizing it only in academic interest as to what would have been the fates if the accused were other than a Minister? If the accused was other than Ramaiah? The accused was other than an [illegible] person. ?

That is what I am emphasizing. So investigation includes discovery and arrest of the suspected accused. "Examination on various persons including the accused. The sarch of the place and seize of things considered necessary for investigation and produce at trial." So in this case the investigation Officer has not come forward or the Government has not come forward with any convincing explanation for not having arrested the accused or for not having seized the propery. May I know the reason from the Home Minister ? Can this be applied to the common man? In the case of the cognizable offence, the receipt and the recording of the information report is not condition precedent to the setting in motion...." This is not necessary because there is a written complaint before the police. So inview of these provisions ಸರ್ಕಾರ ಸಂಬಂಧಪಟ್ಟ ವ್ಯಕ್ತಿಯನ್ನು ಬಂಧಿಸದೇ ಇರುವುದಕ್ಕೆ ಕಾರಣವೇನು? ಎನ್ನುವುದನ್ನು ನಾನು ತಿಳಿಯುವುದಕ್ಕೆ ಇಷ್ಟಪಡುತ್ತೇನೆ. ಮತ್ತು ಈಗ ಇದು ಸುಳ್ಳು ಕೇಸೇ? ನಿಜವಾದ ಕೇಸೇ ಎನ್ನುವುದರ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ನಾನು ಸಿದ್ಧನಿಲ್ಲ, ಅದರ ಅವಶ್ಯಕತೆಯೂ ಇಲ್ಲ, ಅದನ್ನು ಮಾಡಲೂಬಾರದು.

because it affects the investigation by the investigating officer. ಆದುದರಿಂದ, ಈ ಹಂತದಲ್ಲಿ ಯಾರು ಮಾಡಿದ್ದಾರೆ ಎನ್ನುವುದು . ನನ್ನ ಪ್ರಶ್ನೆ ಅಲ್ಲ. ನೀವೇ ಸಂಬಳ ಕೊಟ್ಟು ಇಟ್ಟುಕೊಂಡಿರುವಂಥ ನಿಮ್ಮ ಸರ್ಕಾರದ ಆಡಳಿತ ಯಂತ್ರದ ಒಂದು ಭಾಗವಾಗಿರುವಂಥ ಸರ್ಕಲ್ ಇನ್ಸ್‌ಪೆಕ್ಟರ್‌ರವರು ಕೇಸ್ ಅನ್ನು ರಿಜಿಸ್ಟರ್ ಮಾಡಿದರು. Circle Inspector or any investigation Officer under some provision he fails to conduct

investigation as per the procedure, then he is bound to give explanation to the Home Minister. The normal procedure is, he should arrest the accused when a case is reegistered under Section 302. If he has not done it, he has to explain it to the competent authority. ಅಪರಾಧಿ ತಲೆಮರೆಸಿಕೊಂಡಿದ್ದಾನೆಂದು ಹೇಳಬೇಕು, ಇಲ್ಲವೇ ಆತನನ್ನು ಬಂಧಿಸುವುದಕ್ಕೆ ಏನಾದರೂ ಅಡ್ಡಿ ಇದೆಯೋ? ಎಂದು ಹೇಳಬೇಕು. ಇಂತಹ ಸಂದರ್ಭ ಬಂದಾಗ ಸನ್ಮಾನ್ಯ ಮುಖ್ಯಮಂತ್ರಿಗಳು ಅಪರಾಧಿಯನ್ನು ರಕ್ಷಿಸುವುದರ ಬದಲು ಆ ಕೇಸ್‌ನಲ್ಲಿ ಮೊದಲು ಅರೆಸ್ಟ್ ಮಾಡಿ ಎಂದು ಹೇಳಿ ಮಾಡದಿದ್ದಲ್ಲಿ ಇನ್‌ವೆಸ್ಟಿಗೇಷನ್ ಆ ಫೀಸರ್ ಮೇಲೆ ಡಿಸಿಪ್ಲಿನರಿ ಆ್ಯಕ್ಷನ್ ತೆಗೆದುಕೊಳ್ಳಬೇಕಾಗಿತ್ತು.

In the normal course, in the normal stage of the administration, in the normal expectation of the common man of this country, if the investigation Officr has not arrested the accused when the case is registered under Section 302, the Home Minister, by this time, would have asked the explanation of Investigation Officer or even he could have suspended him. ಸನ್ಮಾನ್ಯ ಉಪಾಧ್ಯಕ್ಷಿಣಿಯರೇ, ಬೆಳಿಗ್ಗೆ ಶ್ರೀ ಕಾಗೋಡು ತಿಮ್ಮಪ್ಪನವರು ಒಂದು ಮಾತನ್ನು ಹೇಳಿದರು. ಏನೆಂದರೆ, ಭಾರತೀಯ ದಂಡಸಂಹಿತೆ 302ರ ಕೆಳಗೆ ಕೇಸ್ ರಿಜಿಸ್ಟರ್ ಆದ ತಕ್ಷಣ ಒಬ್ಬ ವ್ಯಕ್ತಿಯನ್ನು ಬಂಧಿಸಲಿಕ್ಕೆ ಸಾಧ್ಯವೇ ಎಂದು.

If that is the law, I have no objection. If the Home Minister or the Chief Minister says so, ಮೊನ್ನೆ, ದಿವಸ ನಮ್ಮ ನಾಗಸಂದ್ರ ಎನ್ನುವ ಒಂದು ಊರಿನಲ್ಲಿ ಒಂದು ಕೊಲೆಯಾಯಿತು. ಈಗ ನಾನು ಕೊಲೆ ಮಾಡಿದವರನ್ನು ಪೊಲೀಸರ ಎದುರುಗಡೆಯೇ ತಿರುಗಾಡಿ ಎಂದು ಹೇಳುತ್ತೇನೆ.

Then you should not ask the SP or the Circle Inspector,\"Why you have not arrested?" ಭಾರತೀಯ ದಂಡ ಸಂಹಿತೆ 302ರ ಕೆಳಗಡೆ ಕೇಸ್ ನೋಂದಾಣಿ ಆದ ತಕ್ಷಣ ವ್ಯಕ್ತಿಯನ್ನು ಬಂಧಿಸುವುದಕ್ಕೆ ಸಾಧ್ಯವಿಲ್ಲವೆಂದು ನನ್ನ ಸ್ನೇಹಿತರು ಹೇಳುತ್ತಾರೆ.

If that is the law of the land, if that is the law of this Government, I have no objection but it should be applicable to each and everyone. Shri. Kharge has told, "every one is equal before the law. ಖರ್ಗೆ ಸಾಹೇಬರು ಹೇಳಿದ್ದಾರೆ. ನಾನು ಈಗತಾನೇ ಓದಿದ್ದೇನೆ. ಮೊನ್ನೆ ರಮೇಶ್‌ರವರಿಗೆ ಅಥವಾ ನನಗೆ ಅಥವಾ ಮುಖ್ಯಮಂತ್ರಿಗಳಿಗೆ ಯಾವ ಕಾನೂನು ಅಪ್ಲೈ ಆಗುತ್ತದೆಯೋ ಅದೇ ಕಾನೂನು ಬೇರೆಯುವರಿಗೂ ಕೂಡ ಅಪ್ಲೈ ಮಾಡಬೇಕು. ಆದುದರಿಂದ, ನನ್ನ ಭಾಷಣ ಇಷ್ಟೆ. ನಮ್ಮ ಗೃಹ ಮಂತ್ರಿಗಳು "ಈ ರಾಜ್ಯದಲ್ಲಿ ಹಾಗೆಯೇ ಕಾನೂನು ಇರುವುದು, ಇನ್ನು ಮುಂದೆ ಖೂನಿ ಮಾಡಿದವರನ್ನು, ಕೇಸಿಗೆ ಎವಿಡೆನ್ಸ್ ಕಲೆಕ್ಟ್ ಆಗುವವರೆಗೂ, ಕೋರ್ಟಿನಿಂದ ಜಡ್ಜ್‌ಮೆಂಟ್ ಬರುವವರೆಗೂ ನಾವು ಅಪರಾಧಿಯನ್ನು ಅರೆಸ್ಟ್ ಮಾಡುವುದಿಲ್ಲ ಎನ್ನುವ ಕಾನೂನು ಈ ರಾಜ್ಯದಲ್ಲಿದೆ'' ಎಂದು ತಾವು ಅಪ್ಪಣೆ ಕೊಡಿಸಿದರೆ ಕಾನೂನನ್ನು ನಾನು ವಿನಯದಿಂದ ಒಪ್ಪಿಕೊಳ್ಳುವುದಕ್ಕೆ ಸಿದ್ಧನಿದ್ದೇನೆ. But, it should be applicable to all.

ಕ್ರಿಮಿನಲ್ ಕಾನೂನಿನಲ್ಲಿ ಒಂದು ಉಕ್ತಿ ಇದೆ. ಆದೇನೆಂದರೆ "ಸಾವಿರಾರು ಜನರು ಮಾಡಿದಂಥ ಅಪರಾಧದಿಂದ ತಪ್ಪಿಸಿಕೊಂಡರೆ ಪರವಾಗಿಲ್ಲ ಆದರೆ ಅಪರಾಧವನ್ನು ಮಾಡದೆ ಇರತಕ್ಕ ಒಬ್ಬನೇ ಒಬ್ಬನಿಗೂ ಕೂಡ ಶಿಕ್ಷೆಯಾಗಬಾರದು.'' ಎಂದು ಅದನ್ನು ನೀವು ಹೇಳಿ, ನಾನು ಒಪ್ಪಿಕೊಳ್ಳುತ್ತೇನೆ. It is only in France, it is different. ಈ ಪ್ರಪಂಚದಲ್ಲಿ ಫ್ರಾನ್ಸ್ ದೇಶದಲ್ಲಿ ಒಂದು ಕಡೆ ಮಾತ್ರ ಅದು ಅಲ್ಲದೆ ಇರುವುದು. ಇನ್ನು ಉಳಿದ ಎಲ್ಲಾ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಈ ಒಂದು ಹೇಳಿಕೆ ಇದೆ. ಅದೇನೆಂದರೆ "ಸಾವಿರಾರು ಜನರು ಅಪರಾಧದಿಂದ ತಪ್ಪಿಸಿಕೊಂಡರೂ ಪರವಾಗಿಲ್ಲ ಆದರೆ

ಒಬ್ಬನೇ ಒಬ್ಬ ನಿರಪರಾಧಿಗೆ ಶಿಕ್ಷೆಯನ್ನು ಕೊಡಿಸಬೇಡಿ.'' ಎಂದು. ಆ ಪಾಪವನ್ನು ಮಾಡಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತಿಲ್ಲ. ಅಥವಾ ಅದಕ್ಕೆ ನಾನು ಸಿದ್ಧನಾಗಿಯೂ ಇಲ್ಲ. ನನ್ನ ಪ್ರಶ್ನೆ ಏನೆಂದರೆ : ಕಾನೂನಿನ ಚೌಕಟ್ಟಿನಲ್ಲಿ ನಾವು ಆಡಳಿತವನ್ನು ಮಾಡುತ್ತಿದ್ದೇವೆ, ಕಾನೂನಿನ ಚೌಕಟ್ಟಿನಲ್ಲಿ ನಾವು ಬದುಕುತ್ತಿದ್ದೇವೆ. ಕಾನೂನಿನ ಚೌಕಟ್ಟಿನಲ್ಲಿ ಈ ಸರ್ಕಾರ ರಚನೆಯಾಗಿದೆ. ಆದುದರಿಂದ ಇಂಥ ಕಾನೂನನ್ನು ದಯಮಾಡಿ ಸರ್ವರಿಗೂ ಸಮಾನವಾಗಿ ಅನ್ವಯವಾಗುವ ರೀತಿಯಲ್ಲಿ ಆಡಳಿತವನ್ನು ಮಾಡಿ. ನಾನು ಅವರಿಗೆ ಶಿಕ್ಷೆಯನ್ನು ಕೊಡಿ ಎಂದು ಕೇಳಿಕೊಳ್ಳುತ್ತಿಲ್ಲ.

ಈಗಾಗಲೇ ಮಾನ್ಯ ಸದಸ್ಯರಾದ ಬೈರೇಗೌಡರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಅದೇ ಪ್ರಶ್ನೆಯನ್ನು ನಾನು ಪ್ರಸ್ತಾಪ ಮಾಡಬೇಕೆಂದು ಇಷ್ಟಪಡುತ್ತೇನೆ. ಬಹುಶಃ 1975ರಲ್ಲಿ ಶ್ರೀಮಾನ್ ಜಯಪ್ರಕಾಶ್‌ನಾರಾಯಣ್‌ರವರ ಲಿಟರೇಚರ್ ನನ್ನ ಕಾರಿನಲ್ಲಿ ಇತ್ತು ಎನ್ನುವ ಒಂದೇ ಒಂದು ಕಾರಣಕ್ಕಾಗಿ ನನ್ನನ್ನು ಹಿಡಿದು ಅನಾಮತ್ತಾಗಿ ಅರೆಸ್ಟ್ ಮಾಡಿ ಪೊಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗಿ ಹಾಕಿದರು. ನಾನು ಬೇರೆ ಏನು ದೊಡ್ಡ ದೇಶದ್ರೋಹದ ಅಪರಾಧವನ್ನು ಮಾಡಿರಲಿಲ್ಲ. ವಕೀಲಿ ಮಾಡುತ್ತಿದ್ದೆ. ಸಂಪಾದನೆ ಮಾಡುತ್ತಿದ್ದೆ, ಬದುಕುತ್ತಿದ್ದೆ. ಯಾರೋ ಪುಣ್ಯಾತ್ಮರು ಜಯಪ್ರಕಾಶ್‌ನಾರಾಯಣ್‌ರವರು ಸಮಗ್ರ ಆಂದೋಲನದ ಲಿಟರೇಚರ್‌ನ್ನು ನನ್ನ ಕಾರಿನೊಳಗೆ ಇತ್ತು ಎನ್ನುವ ಒಂದೇ ಒಂದು ಕಾರಣಕ್ಕಾಗಿ ನನ್ನನ್ನು ಹಿಡಿದು ಅನಾಮತ್ತಾಗಿ ಅರೆಸ್ಟ್ ಮಾಡಿ ಪೊಲೀಸ್ ಸ್ಟೇಷನ್‌ಗೆ ತೆಗೆದುಕೊಂಡು ಹೋಗಿ ಹಾಕಿದರು. ನಾನು ಬೇರೆ ಏನು ದೊಡ್ಡ ದೇಶದ್ರೋಹದ ಅಪರಾಧವನ್ನು ಮಾಡಿರಲಿಲ್ಲ. ವಕೀಲಿ ಮಾಡುತ್ತಿದ್ದೆ, ಸಂಪಾದನೆ ಮಾಡುತ್ತಿದ್ದೆ, ಬದುಕುತ್ತಿದ್ದೆ. ಯಾರೋ ಪುಣ್ಯಾತ್ಮರು ಜಯಪ್ರಕಾಶ್‌ನಾರಾಯಣ್‌ರವರ ಸಮಗ್ರ ಆಂದೋಳನದ ಲಿಟರೇಚರ್‌ನ್ನು ನನ್ನ ಕಾರಿನೊಳಗೆ ಹಾಕಿದ್ದರು ಎನ್ನತಕ್ಕ ಒಂದೇ ಒಂದು ಕಾರಣಕ್ಕಾಗಿ ನನ್ನನ್ನು ಅರೆಸ್ಟ್ ಮಾಡಿದರು. ಮಾನ್ಯ ಮುಖ್ಯಮಂತ್ರಿಗಳ ಮುಂದೆ ಹೋಗಿ ನಾವು ಪ್ರತಿಭಟನೆ ಮಾಡುತ್ತೇವೆ. ಎನ್ನತಕ್ಕ ಒಂದೇ ಕಾರಣದಿಂದ ಇದೇ ಸರ್ಕಾರದ ಪೊಲೀಸ್‌ನವರು ನನ್ನ ಸ್ನೇಹಿತರನ್ನು ಅರೆಸ್ಟ್ ಮಾಡಿ ಹಿಡಿದುಕೊಂಡು ಹೋದರು. ಇಂಥ ಘಟನೆಗಳ ನಿದರ್ಶನಗಳು ನಮ್ಮ ಮುಂದಿರುವಾಗ ಖೂನಿ ಕೇಸ್‌ನ ಅಪರಾಧಿಯನ್ನು ಬಂಧಿಸದೇ ಇರತಕ್ಕ ನಿರ್ಲಿಯತೆ ರಾಜ್ಯದ ಪೊಲೀಸ್‌ನವರಿಗೆ ಏಕೆ ಬಂದಿದೆ? They should come forward. ಈ ಸದನದ ಮೂಲಕ ಅವರಿಗೆ ಹೇಳುತ್ತಿದ್ದೇನೆ : ಯಾರ ಹಿತಕ್ಕಾಗಿ ಇವತ್ತು ಕರ್ತವ್ಯ ಲೋಪವನ್ನು ಮಾಡುತ್ತೀರೋ ಯಾರನ್ನು ಮೆಚ್ಚಿಸುವುದಕ್ಕಾಗಿ ನೀವು ಕಾನೂನನ್ನು ಜಾರಿ ಮಾಡಲು ಹಿಂಜರಿಯುತ್ತಿದ್ದಿರೋ ಅವರು ಸಂದರ್ಭ ಬಂದಾಗ ನಿಮ್ಮಗಳ ನೆರವಿಗೆ ಬರುವುದಿಲ್ಲ. ಇದನ್ನು ದಯಮಾಡಿ ನೀವು ತಿಳಿದುಕೊಳ್ಳಬೇಕೆಂದು ಕೈಮುಗಿದು ಕೇಳಿಕೊಳ್ಳುತ್ತೇನೆ. ಇವತ್ತು ಶ್ರೀಮಾನ್ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾರೆ, ನಾಳೆ ದಿನ ಶ್ರೀಮಾನ್ ಸಿಂಧ್ಯರವರು, ಚಂದ್ರೇಗೌಡರು ಅಥವಾ ಮಲ್ಲಿಕಾರ್ಜುನ ಖರ್ಗೆಯವರು ಮುಖ್ಯಮಂತ್ರಿಗಳಾಗಬಹುದು. ಇವತ್ತು ಧರ್ಮಸಿಂಗ್‌ರವರು ಗೃಹಮಂತ್ರಿಗಳಾಗಿದ್ದಾರೆ, ನಾಳೆ ದಿನ ನಮ್ಮ ಅಧ್ಯಕ್ಷಿಣಿಯರು ಗೃಹಮಂತ್ರಿಗಳಾಗಬಹುದು. ಆದುದರಿಂದ ಈ ಒಂದು ಸಮಸ್ಯೆಗೆ ಸ್ಪಂದಿಸತಕ್ಕ ಸಂದರ್ಭದಲ್ಲಿ ದಯಮಾಡಿ ಈ ನೆಲದ ಕಾನೂನನ್ನು ಜಾರಿಗೆ ತರತಕ್ಕ ದಿಟ್ಟತನವನ್ನು ತೋರಿಸಬೇಕು. ಆಡಳಿತವನ್ನು ಮಾಡತಕ್ಕಂಥವರಿಗೆ ಗೊತ್ತಿಲ್ಲದೇ ಇದ್ದರೆ ಸೆಕ್ರೆಟರಿಯವರು ಏನು ಮಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. do not know what he is doing. I do not know whether he has the minimum knowledge of law. ಅವರಿಗೆ ಏನಾದರೂ ಕಾನೂನಿನ ಕನಿಷ್ಠವಾದ ಅರಿವು ಇದ್ದಿದ್ದರೆ ಅಥವಾ ಈ ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕೆಂದು ಅವರ ಮನಸ್ಸಿನಲ್ಲಿ, ಆತ್ಮದಲ್ಲಿ ಕಿಂಚಿತ್ತಾದರೂ ಇದಿದ್ದರೆ by time he would advised the Government. I do not know what the Advocate General is doing. By this time, they would have advised the Government in this direction. ಆದುದರಿಂದ ಕೇವಲ ಸಣ್ಣಪುಟ್ಟವರುಗಳನ್ನೆಲ್ಲಾ ಬಂಧಿಸುವಂಥ ನಿದರ್ಶನ ನಮ್ಮ ಮುಂದಿರುವಾಗ ಖೂನಿ ಕೇಸ್‌ನ ಅಪರಾಧಿಯನ್ನು ಬಂಧಿಸದೆ ದಿವ್ಯ ಗಾಂಭೀರ್ಯವನ್ನು, ಮೌನವನ್ನು ಸರ್ಕಾರವು ತಾಳಿರುವುದು

ನಿಮಗಾರಿಗೂ ಮರ್ಯಾದೆ ತರತಕ್ಕಂಥ ವಿಷಯವಲ್ಲ. ಶ್ರೀಮಾನ್ ರಂಗನಾಥ್ ಸಾಹೇಬರವರಿಗೂ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಹತ್ತಾರು ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿ ನನಗಿಂತಲೂ ಹೆಚ್ಚಿನ ಅನುಭವವನ್ನು ಪಡೆದಿರತಕ್ಕಂಥವರು ಅವರು. ಏಕೆ ಸುಮ್ಮನೆ ಕುಳಿತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಪಕ್ಷಕ್ಕಾಗಲಿ ಅಥವಾ ಸರ್ಕಾರಕ್ಕಾಗಲಿ ಯಾರಿಗೂ ವೈಯಕ್ತಿಕವಾಗಿ ಆಗಲಿ ಗೌರವವನ್ನು ತರುವುದಿಲ್ಲವೆಂದು ನನ್ನ ಪಕ್ಷಕ್ಕೆ ನಾನು ಬರೆದಿದ್ದೇನೆ. ಆದುದರಿಂದ ದಯಮಾಡಿ ಮುಖ್ಯಮಂತ್ರಿಗಳು ಈ ವಿಷಯದಲ್ಲಿ ಕಾರ್ಯಪ್ರವೃತ್ತರಾಗಬೇಕೆಂದು ಒಬ್ಬ ವಕೀಲನಾಗಿ ನಾನು ಹೇಳುತ್ತಿದ್ದೇನೆ. ಈ ರೀತಿ ಮಾಡುವುದರಿಂದ, ಕ್ರಮ ತೆಗೆದುಕೊಳ್ಳುವುದರಿಂದ ದೇಶವೇನು ಮುಳುಗಿಹೋಗುವುದಿಲ್ಲ. ಆ್ಯಂಟಿಸಿಪೇಟಿಬೇಲ್‌ಗೆ ಅಪ್ಲೈ ಮಾಡಿದರೆ ಅಲ್ಲಿ ಸಿಗುತ್ತದೆ. ಅರೆಸ್ಟ್ ಮಾಡಿದರೆ ಏನಾಗುತ್ತದೆಂದು ತಮಗೂ ಗೊತ್ತಿದೆ. ನಿಮ್ಮ ಸರ್ಕಾರದ ಮರ್ಯಾದೆಯನ್ನು ಉಳಿಸುವ ದೃಷ್ಟಿಯಿಂದ, ಈ ರಾಜ್ಯದ ಜನರಲ್ಲಿ ನಿಮ್ಮ ಆಡಳಿತದಲ್ಲಿ ನಂಬಿಕೆಯನ್ನು ಹುಟ್ಟಿಸುವ ದೃಷ್ಟಿಯಿಂದ ನೀವು ಅಪರಾಧಿಯನ್ನು ಬಂಧಿಸಿ ಮುಂದೆ ವಿಚಾರಣೆಗೆ ಒಳಪಡಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ. ಇವತ್ತು ಬೆಳಿಗ್ಗೆ ಅಧ್ಯಕ್ಷ ಪೀಠದಲ್ಲಿದ್ದಂಥ ಮಾನ್ಯ ಅಧ್ಯಕ್ಷರು ಒಂದು ಮಾತನ್ನು ಕೇಳಿದರು. ಏನೆಂದರೆ, ತಾ : 3–6–92ರಿಂದ ತಾ : 14–7–92ರವರೆಗೆ ಮಾಡಿದ್ದು ಏನು ಎಂದು. ಇದು ನಾನು ಕೇಳಿದಂಥ ಪ್ರಶ್ನೆ ಅಲ್ಲ. The chair posed this question. I would like to know the answer from the Home Minister. What is the investigation? Whether they have seized the property, whether they have drawn up Mahazar, whether visited the spot recorded statement, questioned the accused, arrested the accused ? ನಾನು ಮಾನ್ಯ ಅಧ್ಯಕ್ಷರ ಪ್ರಶ್ನೆಗೆ ಪೂರಕವಾಗಿ ಒತ್ತಾಯ ಮಾಡುತ್ತೇನೆ. ಅವತ್ತಿನಿಂದ ಇವತ್ತಿನವರೆಗೂ ಈ ಘನವೆತ್ತ ಸರ್ಕಾರ ಆ ಬಡಪಾಯಿಗಳಿಗೆ ಕೊಟ್ಟಂಥ ನ್ಯಾಯವಾದರೂ ಏನು? ವಿಚಾರಣೆ ಯಾವ ದಿಕ್ಕಿನಲ್ಲಿ ನಡೆಯುತ್ತಿದೆ? ನಾನು ಅವತ್ತಿನಿಂದ ಪೇಪರ್ ಸೇಟ್‌ಮೆಂಟನ್ನೇ ಕೊಡಲಿಲ್ಲ. ಏಕೆಂದರೆ ಪ್ರಯೋಜನ ಇಲ್ಲವೆಂದು ಕೊಡಲಿಲ್ಲ. ಅವತ್ತು ಅಲ್ಲಿ ಗುಂಡನ್ನು ಹಾರಿಸದಿದ್ದರೆ, ಗಂಗಯ್ಯನನ್ನು ಕೊಲ್ಲದಿದ್ದರೆ ಇನ್ನೂ ಹೆಚ್ಚಿನ ಆಘಾತವಾಗುತ್ತಿತ್ತು. ಪ್ರವಾಸಿ ಮಂದಿರದಲ್ಲಿದ್ದ ಯಾರೂ ಕೂಡ ಬದುಕಲು ಸಾಧ್ಯವಿರಲಿಲ್ಲ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ, ಮತ್ತು ಅಲ್ಲಿದ್ದಂಥ ನನ್ನ ಸ್ನೇಹಿತರ ಅಭಿಪ್ರಾಯ ಕೂಡ ಏನೆಂದರೆ, ಅಲ್ಲಿದ್ದಂಥ ಟೆನ್‌ಷನ್, ಪ್ರಕ್ಷುಬ್ಧತೆಯನ್ನು ನಾನು ಒಪ್ಪುತ್ತೇನೆ. Still Madam, we cannot take law into our own hands. There is no self-defence as such. ನನ್ನನ್ನು ಕೊಲ್ಲುವುದಕ್ಕೆ ಬಂದವರಿಗೂ ಕೂಡ ಕೊಲ್ಲುವುದಕ್ಕೆ ಸಾಧ್ಯವಿಲ್ಲ. That is the Law. ಈ ರಾಷ್ಟ್ರದ ಕಾನೂನು ಏನು ಹೇಳುತ್ತದೆಂದರೆ, ಯಾರಾದರೂ ಕೊಲ್ಲುವುದಕ್ಕೆ ಬಂದರೂ ಕೂಡ ನಾನು ಕಾನೂನನ್ನು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ ಎಂದು. ಇದು ಒಂದು ವಿಚಾರವಾದರೆ, ಇನ್ನು ಎರಡನೆಯದಾಗಿ ಈ ಪ್ರವಾಸಿ ಮಂದಿರದಲ್ಲಿದ್ದಂಥ ಮಹಾನ್ ನಾಯಕರ ಪ್ರಾಣಕ್ಕೆ ಏನಾದರೂ ಧಕ್ಕೆಯಾಗಿದ್ದರೆ ನಾನು ಜನಗಳ ಪರವಾಗಿ ಕ್ಷಮೆ ಕೇಳುತ್ತೇನೆ. ಆದರೆ There is one ticklish problem is the D.I.G. was present, The S.P. was present, The policemen, not in hundreds but in thousands, were present, Incase such an occasion had arise, could they have kept quiet? May I know the answer for this question from the Treasury Benches? ಅಲ್ಲಿ ನಾವೇ ಗುಂಡು ಹೊಡೆದು ಯಾರನ್ನಾದರೂ ಕೊಲ್ಲದೇ ಇದ್ದಿದ್ದರೆ ನಮ್ಮನ್ನೇ ಯಾರಾದರೂ ಕೊಲ್ಲುತ್ತಿದ್ದರು. ಅದು ಇನ್ನೂ ಅತಿರೇಕಕ್ಕೆ ಹೋಗುತ್ತಿತ್ತು. ರಕ್ತಪಾತವೇ ಆಗುತ್ತಿತ್ತು. ನಾವು ಯಾರೂ ಕೂಡ ಉಳಿಯುವ ಸ್ಥಿತಿಯಲ್ಲಿರಲಿಲ್ಲ ಎನ್ನುವ ನನ್ನ ಗೆಳೆಯರಿಗೆ ನನ್ನ ಪ್ರಶ್ನೆ ಇಷ್ಟೇ, ಅವತ್ತು ಆಡಳಿತ ಪಕ್ಷದವರಿಗೆ ಹಿಂದೆ ಒಂದು ಜೀಪು, ಮುಂದೆ ಒಂದು ಜೀಪು ಹೋಗುತ್ತಿದ್ದವು. Madam speaker, I was wandering alone. ಒಬ್ಬೊಬ್ಬ ಮಂತ್ರಿಗೆ 4–4 ಜೀಪುಗಳು ಇರುತ್ತಿದ್ದವು ಹಿಂದೆ ಒಂದು ಜೀಪು,

ಮುಂದೆ ಒಂದು ಜೀಪು. ಅಲ್ಲಿದ್ದಂತೆ ಖಾಸಗೀ ವ್ಯಾನ್‌ಗಳಿಗೆಲ್ಲಾ ಪೊಲೀಸ್ ವ್ಯಾನ್ ಎಂದು ಬರೆದುಬಿಟ್ಟಿದ್ದರು. ಆ ಸಂದರ್ಭದಲ್ಲಿ ನಿಮ್ಮನ್ನು ಕಾಯುತ್ತಿದ್ದ ಪೊಲೀಸರು ಏತಕ್ಕೆ ಸುಮ್ಮನಿದ್ದರು. ಟಿ.ವಿಯಲ್ಲಿ ಇದನ್ನು ನಾನೇ ಕಣ್ಣಾರೆ ನೋಡಿದ್ದೇನೆ. S.P. was there, D.I.G. was there and number of policemen were there. ನಿಮ್ಮ ಪ್ರಾಣಕ್ಕೆ ಹಾನಿಯಾಗುತ್ತದೆಂದು ಗೊತ್ತಾಗಿದ್ದರೆ ಮತ್ತು ನಿಮ್ಮನ್ನೆಲ್ಲಾ ಕೊಂದು ಹಾಕುವುದಕ್ಕೆ ಜನ ಹತ್ತಿರಕ್ಕೆ ಬಂದಿದ್ದಾರೆಂದು ತಿಳಿದಿದ್ದರೆ ಪೊಲೀಸರು ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ? why the police has not taken any action? I was not present there, I was not a witness. ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಇವರೆಲ್ಲರ ಪ್ರಾಣಕ್ಕೆ ಹಾನಿಯಾಗತಕ್ಕ ಸಂದರ್ಭ ಬಂದಿದ್ದರೆ ನಿಮ್ಮ ಅತ್ಯುನ್ನತ ಅಧಿಕಾರಿಗಳು ಸುಮ್ಮನೆ ಕೂರುತ್ತಿರಲಿಲ್ಲ. ಆ ಜನರು ನಮ್ಮ ಪ್ರಾಣವನ್ನು ತೆಗೆಯುತ್ತಿದ್ದರು. ಹೇಳತಕ್ಕದ್ದು ಕೇವಲ ಈ ಪ್ರಕರಣವನ್ನು ಮುಚ್ಚಿಹಾಕುವುದಕ್ಕೆಂದು ಹೇಳುವ ನೆಪವೇ ಹೊರತು ನಿಜವಾದ ಕಾರಣ ಅಲ್ಲ. ನಾನು ತಮಗೆ ಹೇಳುತ್ತೇನೆ, ನೀವು ಎಷ್ಟೇ ಗುಂಡು ಹೊಡೆದಿದ್ದರೂ ಕೂಡ ಆ ಪರಿಸ್ಥಿತಿಯನ್ನು ಕಂಟ್ರೋಲ್ ಮಾಡುವುದಕ್ಕೆ ಆಗುತ್ತಿರಲಿಲ್ಲ. ಅದೃಷ್ಟವಶಾತ್ ಮಳೆ ನಮ್ಮನ್ನು, ನಿಮ್ಮನ್ನು, ಎಲ್ಲರನ್ನೂ ಉಳಿಸಿತು. ಆ ದಿವಸ ಒಂದೇ ಒಂದು ಪ್ರಾಣಹಾನಿಯಿಂದ ಆ ಚುನಾವಣೆಯನ್ನು ಮುಗಿಸುವಂಥ ಪರಿಸ್ಥಿತಿ ಬಂತು. ಅವತ್ತು ಮಳೆ ಬರದೇ ಇದಿದ್ದರೆ ನೀವು ಏನಾಗುತ್ತಿದ್ದಿರೋ, ಪರಿಸ್ಥಿತಿ ಏನಾಗುತ್ತಿತ್ತೋ ನನಗಂತೂ ಗೊತ್ತಿಲ್ಲ. I agree that there was a tension. Still I am pleading, that the police were there, the S.P. was there, policemen - not one or two, in thousands were there. ಒಂದು ಜೀವಕ್ಕೆ ಅಪಾಯವಾದರೆ ಪೊಲೀಸರು ಕ್ರಮ ತೆಗೆದುಕೊಳ್ಳುತ್ತಿದ್ದರು. ಜೀವಕ್ಕೆ ಅಪಾಯವಾಯಿತು ಎಂಬುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ಸಿದ್ಧನಿಲ್ಲ. ಮತ್ತೊಂದು ಇವರ ವಾದ ಏನಿದೆ, ಅದು ಕೋರ್ಟ್‌ನಲ್ಲಿ ಎಷ್ಟರಮಟ್ಟಿಗೆ ನಿಲ್ಲುತ್ತದೋ ಗೊತ್ತಿಲ್ಲ. ಬಹುಶಃ ಮಾನ್ಯ ಇದಿನಬ್ಬನವರು ಇಲ್ಲಿರಬಹುದು. ಅವರು ಮ್ಯಾಕ್‌ಬೆತ್‌ನ ಉದಾಹರಣೆಯನ್ನು ಕೊಟ್ಟು ಮಾನ್ಯ ಜಾಲಪ್ಪನವರ ಕೇಸನ್ನು ಆರ್ಗ್ಯುಮೆಂಟ್ ಮಾಡಿದರು. ನನಗೆ ಕಾಲಾವಕಾಶ ಇಲ್ಲದಿರುವುದರಿಂದ ಅದನ್ನು ಹೇಳುವುದಕ್ಕೆ ಆಗುತ್ತಿಲ್ಲ. ನಾನು ಇವತ್ತು ಬೆಳಿಗ್ಗೆಯಿಂದ ಇಲ್ಲೇ ಕೂತು ಈ ಪುಸ್ತಕವನ್ನು ಓದಿದ್ದೇನೆ. ಅದರ ಬಗ್ಗೆ ನನಗೆ ಅತ್ಯಂತ ಗೌರವ ಇದೆ. ರಾಜಕಾರಣದಲ್ಲಿ ನಾನು ಅವರನ್ನು ಬಹಳವಾಗಿ ಮೆಚ್ಚಿಕೊಂಡಿದ್ದೇನೆ. ಮಾನ್ಯ ಜಾಲಪ್ಪನವರ ಕೇಸಿನಲ್ಲಿ ಅವರು ಮಾತನಾಡುತ್ತಾ ಅಪ್ಪಣೆಯನ್ನು ಕೊಟ್ಟಿದ್ದಾರೆ. ಮ್ಯಾಕ್‌ಬೆತ್‌ನ ಕೇಸನ್ನು ಉದಾಹರಣೆಯಾಗಿ ಕೊಟ್ಟು ಇದನ್ನು ಮುಚ್ಚಿಟ್ಟುಕೊಳ್ಳತಕ್ಕ ಪ್ರವೃತ್ತಿ ಎಷ್ಟು ಕೆಟ್ಟದ್ದು ಎಂಬುದನ್ನು ಅವರು ಹೇಳಿದ್ದಾರೆ. ಅವರು ಹೇಳಿದ್ದನ್ನೇ ನಾನು ಪುನರುಚ್ಚರಿಸಲು ಇಷ್ಟಪಡುತ್ತೇನೆ. ಏನೆಂದರೆ "ಒಬ್ಬ ವ್ಯಕ್ತಿಯ ರಕ್ಷಣೆಗಾಗಿ ಈ ನೆಲದ ಕಾನೂನಿಗೆ ಬೆಂಕಿ ಹಚ್ಚಬೇಡಿ, ಒಬ್ಬ ಮಂತ್ರಿಯ ಗೌರವ ಕಾಪಾಡುವುದಕ್ಕೋಸ್ಕರವಾಗಿ ಈ ರಾಜ್ಯದ ಜನರ ಕಾನೂನಿನ ಬಗ್ಗೆ ಇರುವಂತಹ ನಂಬಿಕೆಗೆ ದ್ರೋಹ ಬಗೆಯಬೇಡಿ, ಅದನ್ನು ಮುಚ್ಚಿಡಲಿಕ್ಕೆ ಪ್ರಯತ್ನಪಟ್ಟರೆ, ಅದು ಸರಿಯಾಗುವುದಿಲ್ಲ'' ಎಂದು; ಅರಬ್ಬಿ ದೇಶದಲ್ಲಿರುವ ಇಡೀ ಸುಗಂಧವನ್ನು ತಂದು ಸುರಿದರೂ ಕೂಡ ಈ ಕೊಳೆಯನ್ನು ತೊಳೆಯುವುದಕ್ಕೆ ಸಾಧ್ಯವಾಗುವುದಿಲ್ಲ; ಆದರೆ ಒಂದು ಟಂಬ್ಲರ್ ನೀರಿನಿಂದ ತೊಳೆಯುವುದಕ್ಕೆ ಸಾಧ್ಯವೆಂದು ಅವರು ಅಪ್ಪಣೆ ಕೊಟ್ಟಿದ್ದಾರೆ. ಅವರ ಪಕ್ಷದ ಗೌರವಾನ್ವಿತ ಸದಸ್ಯರು ಹೇಳಿದ್ದನ್ನೇ ಇಲ್ಲಿ ನಾನು ಪುನರುಚ್ಚರಿಸುವುದಕ್ಕೆ ಇಷ್ಟಪಡುತ್ತೇನೆ. "ಹೊಲಸನ್ನು ತೊಳೆಯುವುದಕ್ಕೆ ಅರಬ್ಬಿ ದೇಶದ ಇಡೀ ಸುಗಂಧವನ್ನು ತಂದು ಸುರಿದರೂ ಸಾಲುವುದಿಲ್ಲ, ಹೊಲಸಾಗುವುದಕ್ಕೆ ಮುಂಚೆ ಒಂದು ಟಂಬ್ಲರ್ ನೀರಿನಿಂದ ಅದನ್ನು ತೊಳೆದು "ಸರಕಾರಕ್ಕೆ ಗೌರವ ಬರುವ ರೀತಿಯಲ್ಲಿ ನಡೆದುಕೊಳ್ಳಲಿ ಎಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಂಗರಕ್ಷಕ ಗುಂಡು ಹಾರಿಸಿದ, ಅದರಿಂದ ಸತ್ತ ಅನ್ನುವ ಒಂದು ವಾದ ಇದೆ. ನನ್ನ ಸ್ನೇಹಿತರು ಹೇಳಿದ ಹಾಗೆ ಅದಕ್ಕೂ ಕೂಡ ಒಂದು ನಿಯಮ ಇದೆ. ಏನೆಂದರೆ ಅಂಗರಕ್ಷಕನನ್ನು ನೇಮಿಸುವಂತಹ ಸಂದರ್ಭದಲ್ಲಿ ಸಂಬಂಧಪಟ್ಟಂತಹ ಅಧಿಕಾರಿ ಅವನಿಗೆ ಇಷ್ಟು

ಗುಂಡುಗಳು ಎಂದು ಕೊಟ್ಟಿರುತ್ತಾರೆ. ಅದು ಖರ್ಚಾದರೆ ಆತ ಲೆಕ್ಕ ಕೊಡಬೇಕು, ಎಲ್ಲಿ ಎಷ್ಟು ಗುಂಡುಗಳನ್ನು ಉಪಯೋಗಿಸಿದ್ದಾನೆ, ಏತಕ್ಕೆ ಉಪಯೋಗಿಸಿದ್ದಾನೆಂಬ ಲೆಕ್ಕ ಕೊಡಬೇಕು, ಆದರಿಂದ ಆದಂತಹ ಪರಿಣಾಮ ಏನು ಎನ್ನುವುದರ ಲೆಕ್ಕವನ್ನು ಕೂಡ ಕೊಡಬೇಕು. ಗೃಹಮಂತ್ರಿಗಳ ಮುಂದೆ ಆ ಲೆಕ್ಕ ಏನಾದರೂ ಇದ್ದರೆ ದಯಮಾಡಿ ಸದನದ ಮುಂದಿಡಬೇಕು. How many bullots or cartridges were supplied, whether they were used by the gunman and if they were used, for which purpose he has used and what is the result for having used those bullots. ಇಷ್ಟೆಲ್ಲಾ ಹೇಳಬೇಕಾಗುತ್ತದೆ. ಆದ್ದರಿಂದ ಯಾರೋ ಮಾಡಿದ ಪಾಪಕ್ಕೆ ತಾವು ಗುರಿಯಾಗುವುದು ಬೇಡ. ಈಗಾಗಲೇ ಒಂದು ಕೊಲೆಯನ್ನು ಮಾಡಿ ಗಂಗಯ್ಯನ ಹೆಂಡತಿಯನ್ನು ಮುಂಡೆ ಮಾಡಿದ್ದು ಸಾಕಾಗಿದೆ. ಈಗ ಗನ್‌ಮ್ಯಾನ್ ಹೆಂಡತಿಯನ್ನು ಮತ್ತೆ ಮುಂಡೆ ಮಾಡಿ ಆ ಕುಟುಂಬದ ಪಾಪಕ್ಕೆ ಭಾಗಸ್ಥರಾಗುವುದು ಬೇಡವೆಂದು ಸರಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುವುದಕ್ಕೆ ಮುಂಚೆ ನನ್ನ ಕಳಕಳಿಯ ಪ್ರಾರ್ಥನೆ ಈ ಸರ್ಕಾರಕ್ಕೆ ಇಷ್ಟೆ, 302ರ ಆಪಾದನೆಗೆ ಒಳಗಾಗಿರುವ ಒಬ್ಬ ವ್ಯಕ್ತಿಯನ್ನು just because the case has been registered ಎಂದು ಬಂಧಿಸಲಿಕ್ಕೆ ಸಾಧ್ಯವಿಲ್ಲ ಎನ್ನುವುದು ಸರಿಯಲ್ಲ.

(ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು) ಇಷ್ಟು ಹೊತ್ತು ಕುಣಿಗಲ್‌ನಲ್ಲಿ ನಡೆದಂತಹ ಘಟನೆ ಬಗ್ಗೆ ಸಾಕಷ್ಟು ಪ್ರಸ್ತಾಪ ಮಾಡಿದ್ದೇನೆ. ಗಂಗಯ್ಯನ ಕೊಲೆಯಾಗಿದೆ, ಯಾರು ಕೊಲೆ ಮಾಡಿದ್ದಾರೆನ್ನುವುದನ್ನು ತೀರ್ಮಾನ ಮಾಡುವಂತಹ ಜವಾಬ್ದಾರಿ ಕರ್ತವ್ಯ ನ್ಯಾಯಾಧೀಶರದ್ದು. ಯಾರು ಕೊಲೆ ಮಾಡಿದ್ದಾರೆ, ಯಾರ ಮೇಲೆ ಆಪಾದನೆ ಇದೆ ಎನ್ನುವುದರ ವಿವರವನ್ನು ಅಲ್ಲಿರುವಂತಹ ಅಧಿಕಾರಿ ನಮಗೆ ಒದಗಿಸಿಕೊಟ್ಟಿದ್ದಾರೆ. ಗಂಗಯ್ಯನ ಹೆಂಡತಿ ಮುಂಡೆಯಾದಾಗ ಕೈ ಚಾಚಿ ಕೊಟರೆ ಕಾನೂನು ಅಷ್ಟೇ ಅಲ್ಲ, ದೇವರು ಧರ್ಮದಲ್ಲಿ ಯಾರಿಗಾದರೂ ಸ್ವಲ್ಪ ಕಿಂಚಿತ್ತಾದರೂ ಭಯ ಇದ್ದರೆ ಅದನ್ನು ಕೂಡ ಗಮನಕ್ಕೆ ತಂದುಕೊಳ್ಳಬೇಕಾಗುತ್ತದೆ. ಇಷ್ಟನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ ಈ ನಾಡಿನ ಕಾನೂನಿಗೆ ಬೆಲೆ ಬರಬೇಕಾದರೆ ನಿಮ್ಮ ಸರಕಾರಕ್ಕೆ ಕಿಮ್ಮತ್ತು ಬೇಕಾದರೆ I am pressing the word 'credibility. ಯಾರು ವ್ಯಕ್ತಿ ಎನ್ನುವುದನ್ನು ಮರೆತುಬಿಡಿ. You arrest the accused and please see that the due process of law is given effect to. ಇಷ್ಟೊಂದು ಸಮಯ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸುತ್ತೇನೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ) : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಮಯ್ಯನವರು ಮಾತನಾಡಿದ ಮೇಲೆ ನನಗೆ ಮಾತನಾಡುವುದಕ್ಕೆ ಇಚ್ಛೆ ಇಲ್ಲ. ಆದರೆ ನಾನು ಬೆಳಿಗ್ಗೆ ಮಾತನಾಡಿದಾಗ ಮುಖ್ಯಮಂತ್ರಿಗಳು ಇರಲಿಲ್ಲ. ಆದ್ದರಿಂದ ನಾನು ಒಂದೇ ಒಂದು ವಾಕ್ಯವನ್ನು ಹೇಳುತ್ತೇನೆ. ಏನೆಂದರೆ, ಈ ಒಂದು ರಾಜ್ಯದ ವಿಧಾನ ಸಭೆಯಲ್ಲಿ ಐಪಿಸಿ 302ರ ಬಗ್ಗೆ ಅರ್ಧ ದಿವಸ ಮಾತನಾಡಬೇಕಾಗಿ ಬಂದಿರುವಂತಹ ಅವಶ್ಯಕತೆ ದೊಡ್ಡ ಅವಮಾನದ ವಿಚಾರ. ಮತ್ತೇನೂ ಹೇಳುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೇ, ವಿಷಯ ಪ್ರಸ್ತಾಪ ಮಾಡತಕ್ಕಂತಹ ಸಂದರ್ಭ ಮತ್ತು ಅದಕ್ಕೆ ಪೂರಕವಾಗಿ ಬಂದಿರತಕ್ಕಂಥ ವಿಷಯಗಳು, ಇದನ್ನು ಗಮನಿಸಬೇಕಾಗಿರತಕ್ಕಂಥ ಪ್ರಮುಖವಾದಂಥ ಅಂಶಗಳು ಯಾವುವು ಎನ್ನತಕ್ಕಂಥದ್ದನ್ನು ಮಾನ್ಯ ರಾಮಯ್ಯನವರು ಹೇಳಿದ್ದಾರೆ. ಮಾನ್ಯ ಸದಸ್ಯರು ಹೆಚ್ಚಾಗಿ ಪುನಃ ಅದೇ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದಾರೆ; ಹೆಚ್ಚಿನ ವಿವರಗಳನ್ನು ಪಡೆಯತಕ್ಕಂಥ ಸಾಧ್ಯತೆ ಕೂಡ ಇರತಕ್ಕಂಥ ಸಂದರ್ಭ ಅವರಿಗೆ ಇದೆ. ಇದೇ ಸಂದರ್ಭದಲ್ಲಿ ಪ್ರೊಫೆಸರ್ ನಂಜುಂಡಸ್ವಾಮಿಯವರು ಇರಬಹುದು, ಮಾನ್ಯ ಬೈರೇಗೌಡರು ಇರಬಹುದು ಮತ್ತೆ ಉಳಿದಿರತಕ್ಕಂಥ ಮಾನ್ಯ ಸದಸ್ಯರು ಕೂಡ ಈ ವಿಚಾರದ ಬಗ್ಗೆ ಬೆಳಿಗ್ಗೆ ಕೂಡ ಮಾತನಾಡಿ ಈ ವಿಷಯದ ಮೇಲೆ ಬೆಳಕನ್ನು ಚೆಲ್ಲತಕ್ಕಂಥ ಪ್ರಯತ್ನ ಮಾಡಿದ್ದಾರೆ. ಇದರಲ್ಲಿ ಒಂದು ನೀತಿಯನ್ನು ನಾವು ಪ್ರತಿಪಾದನೆ ಮಾಡಬೇಕಾಗುತ್ತದೆ: ಕಾನೂನಿನ ಮುಂದೆ ಎಲ್ಲರೂ

ಸಾರಿಸಮಾಜರು ಎನ್ನತಕ್ಕಂಥ ಮಾತನ್ನು ಪ್ರತ್ಯೇಕವಾಗಿ ಹೇಳತಕ್ಕಂಥ ಅವಶ್ಯಕತೆ ಇಲ್ಲ ಎಂದು ನಾನು ಭಾವಿಸುತ್ತೇನೆ. ಇದೇ ಸಂದರ್ಭದಲ್ಲಿ ಕಾನೂನನ್ನು ಮಾಡತಕ್ಕಂಥ ಸಂದರ್ಭದಲ್ಲಿ, ಅದೇ ಕಾನೂನು ಮತ್ತೊಂದು ಏನು ಹೇಳುತ್ತೇವೆ ಆ ಒಂದು ನೀತಿಯನ್ನು ಪ್ರತಿಪಾದನೆ ಮಾಡತಕ್ಕಂಥ ಸಂದರ್ಭದಲ್ಲಿ ವಾಸ್ತವಾಂಶ ಮತ್ತು ಸತ್ಯವನ್ನು ಬೆಳಕಿಗೆ ತರತಕ್ಕಂಥ ಸಂದರ್ಭದಲ್ಲಿ ಅದರ ಹಿನ್ನೆಲೆ ಏನು ಹೇಳುತ್ತದೆ ಎನ್ನತಕ್ಕಂಥ ವಿಚಾರವನ್ನು ಕೂಡ ನಾವು ಗಮನಿಸಬೇಕು. ಇವತ್ತು ನಾವು ಇಲ್ಲಿ ಕುಳಿತಿರಲಿ, ಅಲ್ಲಿ ಕುಳಿತಿರಲಿ, ಈ ಕಾನೂನಿನ ಚೌಕಟ್ಟನ್ನು ಬಿಟ್ಟು ಯಾರೂ ಕೂಡ ಮಾತನಾಡುವುದಕ್ಕೆ ಬರುವುದಿಲ್ಲ. ಹೌದು ಆ ಚೌಕಟ್ಟಿನಲ್ಲಿ ಮಾತನಾಡತಕ್ಕಂಥ ಸಂದರ್ಭವನ್ನು ನಾವೆಲ್ಲರೂ ಪಡೆದಿದ್ದೇವೆ. ಅದರೆ ಒಂದು ಮಾತು ಒಂದು ವಿಷಯದ ಬಗ್ಗೆ ಒಬ್ಬ ವ್ಯಕ್ತಿಯ ಮೇಲೆ ಆಪಾದನೆ ಬಂದಾಗ ಅಥವಾ ಫಿರ್ಯಾದು ಬಂದಾಗ ಕಾನೂನು ಕ್ರಮವನ್ನು ತೆಗೆದುಕೊಳ್ಳತಕ್ಕ ಸಂದರ್ಭ ತನ್ನ ಕೆಲಸವನ್ನು ತಾನು ಮಾಡಲಿಕ್ಕೆ ಪ್ರಾರಂಭವಾದ ಮೇಲೆ ಮತ್ತೆ ನಾವು ಈಗ ಯಾವ ಸಂದರ್ಭದಲ್ಲಿ ಇದ್ದೇವೆ. ಎನ್ನತಕ್ಕಂಥ ವಿಚಾರವನ್ನು ಕೂಡ ನಾವು ಮಾಡತಕ್ಕಂಥದ್ದು ಇದೆ. ನಾನು ವಿವರಗಳಿಗೆ ಈ ಸಂದರ್ಭದಲ್ಲಿ ಹೋಗದೆ, ಮಾನ್ಯ ಸಭಾಧ್ಯಕ್ಷರೇ ತಮ್ಮ ಅನುಮತಿಯನ್ನು ಪಡೆದು ಒಂದು ಮಾತನ್ನು ಹೇಳಬೇಕಾಗಿದೆ. ವಿರಗಳಿಗೆ ಹೋಗತಕ್ಕಂಥ ಸಂದರ್ಭ ಇದು ಅಲ್ಲ. ವಾಸ್ತವಾಂಶವನ್ನು ಮುಚ್ಚಿಡಬೇಕೆನ್ನತಕ್ಕಂಥದ್ದಲ್ಲ. ನಮಗೆ ತಿಳಿದಿರುವಂತೆ ಈಗ ಕೆಲವು ತೀರ್ಮಾನಗಳನ್ನು ಸರ್ಕಾರದ ವತಿಯಿಂದ ನಾವು ಮಾಡಿದ್ದೇವೆ. ಒತ್ತಡ ತಮ್ಮ ವತಿಯಿಂದ ಬರಲಿ, ಆ ರೀತಿ ನಮಗೇ ಅನಿಸಿರಲಿ ನಾವು ಕೆಲವು ತೀರ್ಮಾನವನ್ನು ಸರ್ಕಾರದ ವತಿಯಿಂದ ಮಾಡಿದ್ದೇವೆ. ಇಲ್ಲಿ ಎರಡು ವಿಚಾರಗಳನ್ನು ಗಮನಿಸಬೇಕು, ಏನೆಂದರೆ ಈ ಬಗ್ಗೆ ಒಂದು ತನಿಖೆ ನಡೆಯುತ್ತಿದೆ ಎನ್ನುವ ಮಾತನ್ನಾವು ಮರೆಯಬಾರದು. ಇವತ್ತು ತನಿಖೆ ಮಾಡುತ್ತಿರತಕ್ಕಂಥ ಸಂದರ್ಭದಲ್ಲಿ ಆ ಕೇಸ್‌ನಲ್ಲಿ ಯಾವುದೇ ಒಬ್ಬ ಚಿಕ್ಕ ಅಧಿಕಾರಿಯಿಂದ ತನಿಖೆ ನಡೆಯುತ್ತಿದೆ ಎನ್ನುವ ಭಾವನೆ ತಮಗೆ ಬೇಡ. ನನಗೆ ಗೊತ್ತಿರು ಹಾಗೆ ಎಸ್.ಪಿ. ರ್‍ಯಾಂಕಿನವರು ತನಿಖಾಧಿಕಾರಿಯಾಗಿ ಇರಲಿ ಎಂದು ತಿಳಿಸಿದ್ದೇವೆ. ತಮಗೆ ಗೊತ್ತಿದೆ, ಅವರ ಕೆಳಗಡೆ ಇರತಕ್ಕ ಅಧಿಕಾರಿ ಕೂಡ, an offence under Section 302 of the Indian Penal Code can be investigated by an officer who is below the rank of an S.P. ಅದು ಬರುತ್ತದೆ. ಅಷ್ಟಾದರೂ ಕೂಡ ನಾವು ಇದರಲ್ಲಿ ಹಾಗೆ ಮಾಡಿಲ್ಲ. ಮೇಲಿನ ಅಧಿಕಾರಿಯನ್ನು ನಾವು ಇಟ್ಟಿದ್ದೇವೆ. ನಾವು ಹೇಳತಕ್ಕ ವಿವರಗಳು ಏನಿದೆ ಅವು ನಾಳೆ ಪತ್ರಿಕೆಯಲ್ಲಿ ಬಂದರೆ ತನಿಖೆಗೆ ಅದು ಅಡ್ಡಿ ಬಾರದಿರಲಿ ಎಂಬ ದೃಷ್ಟಿಯಿಂದ ಮತ್ತು ತಾವು ತಪ್ಪು ತಿಳಿಯಲಾರಿರಿ ಎಂದು ಆಡುತ್ತಿದ್ದೇನೆ. ನಿಷ್ಪಕ್ಷಪಾತವಾದ ತನಿಖೆಗೆ ಅವಕಾಶ ಮಾಡಿಕೊಡಬೇಕು, ಯಾವುದೇ ಸಂದರ್ಭದಲ್ಲಿ ಅದನ್ನು ಮತ್ತೊಂದು ಕಡೆಗೆ ಎಳೆಯಬಾರದು. ಈ ಒಂದು ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಎಷ್ಟೋ ಸಾರಿ ಸದನದಲ್ಲಿ ಚರ್ಚೆ ಮಾಡತಕ್ಕ ಕಾಲದಲ್ಲಿ ಹೇಳಿಕೆಯನ್ನು ಕೊಡತಕ್ಕ ಸಂದರ್ಭದಲ್ಲಿ ಸರ್ಕಾರದ ಪರವಾಗಿ, ಯಾವುದೇ ಸರ್ಕಾರ ಇದ್ದರೂ ತನಿಖೆಗೆ ಅಡ್ಡಗಾಲುಹಾಕತಕ್ಕದ್ದನ್ನು ಆದಷ್ಟು ಕೈಬಿಡತಕ್ಕದ್ದು ಒಳ್ಳೆಯದೆಂದು ಹೇಳುತ್ತಾ ಬಂದಿದ್ದೇವೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನಾನು ಈ ಮಾತನ್ನು ಬೆಳಿಗ್ಗೆ ಹೇಳುವಾಗ ಮುಖ್ಯಮಂತ್ರಿಗಳು ಇರಲಿಲ್ಲ. ತಮ್ಮ ಉತ್ತರದಲ್ಲಿ ಈ ಒಂದು ಗೊಂದಲ ಬರಲಾರದು. Whether it is a judicial enquiry or a magisterial enquiry or and other kind of enquiry, it cannot be used to circumvent the legal and judicial process. ಇದು ಸ್ಪಷ್ಟ ಇರಬೇಕು. Let that enquiry continue. It doesnot mean that it can come in the way of judicial and legal process. ಶ್ರೀ ಎಸ್. ಬಂಗಾರಪ್ಪ : ನಾನು ಆ ವಿಚಾರವನ್ನು ಗಮನದಲ್ಲಿಟ್ಟೇ ಮಾತನಾಡುತ್ತಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ : ನಾನು ಆಗಲೇ ಹೇಳಿದ ಸಂದರ್ಭದಲ್ಲಿ, ಇನ್‌ವೆಸ್ಟಿಗೇಷನ್ ಆಫೀಸರ್ ಇನ್‌ವೆಸ್ಟಿಗೇಷನ್ ಮಾಡುವಾಗ ಸರ್ಕಾರ ಇಂಟರ್‌ಫಿಯರ್ ಆಗಬೇಕು, ಹಸ್ತಕ್ಷೇಪ ಮಾಡಬೇಕೆಂದು ಯಾವ ಹಂತದಲ್ಲೂ ಆರ್ಗ್ಯು ಮಾಡಿಲ್ಲ. There is a prohibition for that. Not only the

government, even the court cannot interfere with the investigation of the investigation officer. That is the greatest paramount privilege given to the investigation officer under Section 154. ಸರ್ಕಾರ ಅಷ್ಟೇ ಅಲ್ಲ, ಉಚ್ಚ ನ್ಯಾಯಾಲಯ, ಸರ್ವೋಚ್ಚ ನ್ಯಾಯಾಲಯ, ಪೋಲೀಸರ ವಿಚಾರಣೆ ಎಲ್ಲಿಯೂ ಕೂಡ ಹಸ್ತಕ್ಷೇಪ ಮಾಡುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ಹಸ್ತಕ್ಷೇಪ ಮಾಡಬೇಕೆಂಬುದು ನನ್ನ ಪ್ರಶ್ನೆ ಅಲ್ಲ. ನನ್ನ ಪ್ರಶ್ನೆ ಬಹಳ ಚಿಕ್ಕದು. ಈ ರಾಷ್ಟ್ರದ ನೆಲದ ಕಾನೂನನ್ನು ಸರ್ವತೋಮುಖವಾಗಿ ಸರ್ವರಿಗೂ ಅನ್ವಯಿಸಬೇಕೆಂಬುದು ನನ್ನ ಪ್ರಾರ್ಥನೆ. ಅದಕ್ಕೆ ತಾವು ಉತ್ತರಿಸಿದರೆ ಸಾಕು.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ರಾಮಯ್ಯನವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ; ಏಕೆಂದರೆ ಈ ವಿಚಾರವನ್ನು ಮತ್ತೊಮ್ಮೆ ನೆನಪು ಮಾಡಿಕೊಟ್ಟದ್ದಕ್ಕೆ. ನಾನು ಯಾವ ವಿಚಾರವನ್ನು ಹೇಳುತ್ತಿದ್ದೆನೋ ಅದಕ್ಕೆ ಪೂರಕವಾಗಿ ಬಂದವು ತಮ್ಮ ಮಾತುಗಳು. ಅದಕ್ಕೆ ನಾನು ಅಭಿನಂದಿಸುತ್ತೇನೆ. ಏಕೆಂದರೆ ತನಿಖೆ ಇಂಪಾರ್ಷಿಯಲ್ ಆಗಿರಬೇಕು, ನಿಷ್ಪಕ್ಷಪಾತವಾಗಿರಬೇಕೆಂಬ ವಿಚಾರ ಇದೆ. ಇವತ್ತಿಗೂ ಕೂಡ ಆ ವಿಚಾರದಲ್ಲಿ ಹಾಗೆ ಹೀಗೆ ಎಂದು ಯಾವ ವಿಚಾರವನ್ನು ಕೂಡ ತಾವು ಆಡಿಲ್ಲ, ನಾವು ಆಡಿಲ್ಲ. ಒಂದು ಸಾರಿ ಒಬ್ಬರಿಗೆ ಆ ಜವಾಬ್ದಾರಿಯನ್ನು ವಹಿಸಿದ ಮೇಲೆ ನಾವು ಮಧ್ಯೆ ಹೋಗಬಾರದು. Free and fair investigation will have to be there and we will have to create an atmosphere where such an investigation can take place where by the people can start believing that kind of investigation. ಎಂಬ ದೃಷ್ಟಿಯಿಂದ ನಾವು ವಿಚಾರ ಮಾಡಿರತಕ್ಕದ್ದು. ಅನಂತರ ಪ್ರೊಫೆಸರ್ ಅವರು ಹೇಳಿದ್ದು ಕೂಡ ನನ್ನ ಗಮನದಲ್ಲಿದೆ. ಇವತ್ತು ಉದಾಹರಣೆಗೆ ಜುಡಿಶಿಯಲ್ ಎನ್‌ಕ್ವೈರಿ ಮಾಡಿದರೆ, That is under the provisions of the Commission of Inquiries Act of 1952 as far as my knowledge goes. ನಾವು ಅದರ ಪ್ರಕಾರ ಮಾಡುತ್ತೇವೆ. ಆ ಎನ್‌ಕ್ವೈರಿ, what for it is ordered by various governments - either by the Central Government or the State Governments ? Fact finding ಎನ್‌ಕ್ವೈರಿ ದೃಷ್ಟಿಯಿಂದ ನಾವು ಬೇಕಾದಷ್ಟು ಸಾರಿ ಮಾತನಾಡಿದ್ದೇವೆ. ಒತ್ತಡ ಬಂತು ಎಂಬ ದೃಷ್ಟಿಯಿಂದಲೂ ಅಲ್ಲ. ನಾನು ಅಲ್ಲಿ ಏನು ಮುಗಿಯಿತು ಎಂಬ ವಿವರಗಳಿಗೆ ಹೋಗುವುದಕ್ಕಿಂತ ಮೊದಲು ಈ ವಿಚಾರದಲ್ಲಿ ನಾನು ಕೂಡ ಮುಖ್ಯಮಂತ್ರಿಯಾಗಿ ಏತಕ್ಕಾಗಿ ಆ ಹೇಳಿಕೆಯನ್ನು ಕೊಟ್ಟೆ ಎಂಬುದನ್ನು ಕೂಡ ಹೇಳುವುದು ಬಹಳ ಒಳ್ಳೆಯದು ಎಂದು ನಾನು ಭಾವಿಸಿದ್ದೇನೆ. ಕಾನೂನು ಕೂಡ ಏನು ಹೇಳುತ್ತದೆ? ತಾವು ಹೇಳಿದ್ದೀರಿ. ಏನೆಂದರೆ, ಫ್ರಾನ್ಸ್ ದೇಶ ಒಂದು ಬಿಟ್ಟು ಬೇರೆ ಬೇರೆ ದೇಶಗಳಲ್ಲಿ ಒಬ್ಬ ನಿರಪರಾಧಿಯನ್ನು ರಕ್ಷಣೆ ಮಾಡುವಂಥ ಸಂದರ್ಭ ಬಂದರೆ ಅನೇಕ ಜನ ಅಪರಾಧಿಗಳನ್ನು ಬಿಡುಗಡೆ ಮಾಡಿದರೂ ಚಿಂತೆಯಿಲ್ಲ ಎಂಬ ಮಾತನ್ನು ಅದನ್ನು ಒಪ್ಪುತ್ತೇನೆ. ಅದು ಎಲ್ಲರಿಗೂ ಗೊತ್ತಿರತಕ್ಕದ್ದು. ನನ್ನ ಮನಸ್ಸಿನಲ್ಲಿ ಇದ್ದದ್ದೂ ಅದೇ. ನಾನು ಆ ಸಂದರ್ಭದಲ್ಲಿ, ಈ ವಿಚಾರ ಪತ್ರಿಕೆಯಲ್ಲಿ ಬಂದಿರತಕ್ಕ ಸಂದರ್ಭದಲ್ಲಿ, ಆಗಿನ ಸಂದರ್ಭವನ್ನು ತಾವು ದಯವಿಟ್ಟು ನೆನೆಸಿಕೊಳ್ಳಬೇಕು. ಸಹಜವಾಗಿ ಕುಣಿಗಲ್‌ನಲ್ಲಿ ನಡೆದಿರುವ ಘಟನೆ ರಾತ್ರಿ ಏನೂ ನಡೆದಿದ್ದಲ್ಲ. ತಾವು ಕಾಲವನ್ನು ಕೂಡ ಹೇಳಿದ್ದೀರಿ. ನಾನು ತಮಗೆ ಅಭಿನಂದಿಸುತ್ತೇನೆ. ಇದು ಹಾಡುಹಗಲು ನಡೆದಿರತಕ್ಕ ಘಟನೆ. ಒಬ್ಬ ಗಂಗಯ್ಯ ಎಂಬ ಕಡುಬಡವ ಏನು ಸತ್ತಿದ್ದಾನೆ ಈ ಘಟನೆಯಲ್ಲಿ ಅವರ ಕುಟುಂಬ ಏನಿದೆ ಆ ಕುಟುಂಬದ ನೋವಿನ ಅವಿಭಾಜ್ಯ ಅಂಗವಾಗಿ ನಾನು ಮಾತನಾಡುತ್ತಿದ್ದೇನೆ. ಎಲ್ಲರೂ ಕೂಡ ಅದನ್ನು ಮಾತನಾಡಬೇಕಾಗುತ್ತದೆ. ಅವರಿಗೆ ಮೂರು ಜನ ಮಕ್ಕಳಿದ್ದಾರೆಂದು ಆಮೇಲೆ ಆತನ ಹೆಂಡತಿ ಮೂಗಿಯಾಗಿದ್ದಾರೆ. ತಾವು ಹೇಳಿದ್ದೀರಿ. ವಾಸಕ್ಕೆ ಸರಿಯಾಗಿ ಮನೆ ಇಲ್ಲ ಎಂಬ ಮಾತು ಹೇಳಿದ್ದೀರಿ. ಅವರಿಗೆ ಯಾವ ರೀತಿಯಾಗಿ ಸಹಾಯ ನಾವು ಕೊಡಬೇಕೆಂದು ತಾವು ತಿಳಿಸುತ್ತೀರಿ ಅಷ್ಟೇ ಸಹಾಯವನ್ನು ಸರ್ಕಾರದಿಂದ ನಾವು ಅವರಿಗೆ ಮಾಡುವುದಕ್ಕೆ ಸಿದ್ಧವಿದ್ದೇವೆ. ಏಕೆಂದರೆ ಈ ಕಡೆ ಮನೆ ಯಜಮಾನನನ್ನೂ ಕಳೆದುಕೊಂಡು,

ಮೂರು ಮಕ್ಕಳನ್ನೂ ಇಟ್ಟುಕೊಂಡು ಮೂಗಿಯಾಗಿ ಮನೆಯಿಲ್ಲದಿರುವ ಸಂದರ್ಭದಲ್ಲಿ, ಕಡುಬಡವರಿಗೆ ಯಜಮಾನರು ಇದ್ದ ಸಂದರ್ಭದಲ್ಲೇ ಆ ತೊಂದರೆ ಇದ್ದಾಗ ಇನ್ನು ಇಲ್ಲದಿರುವ ಸಂದರ್ಭದಲ್ಲಿ ಏನು ಎಂದು ವಿಚಾರ ಮಾಡಬೇಕು. ನಾನು ಬರೀ ಒಂದು ಘಟನೆ ಬಗ್ಗೆ.......

ಶ್ರೀ ಸಿ. ಬೈರೇಗೌಡ : ಯಾವ ರೀತಿ ಸಹಾಯ ಮಾಡಬೇಕು ಎಂದು ಹೇಳಿದರೆ ಆ ರೀತಿ ಸರ್ಕಾರ ಮಾಡುತ್ತದೆ ಎಂದು ಹೇಳಿದಿರಿ. ನಿಮ್ಮ ಹತ್ತಿರ ಭಿಕ್ಷೆ ಕೇಳುವುದಕ್ಕೆ ನಾವು ಬರುವುದಿಲ್ಲ.

ಶ್ರೀ ಆರ್.ಎನ್. ನಾಯಕ್ : ಭಿಕ್ಷೆ ಕೇಳದಿದ್ದ ಮೇಲೆ ? ಪರಿಹಾರ ಕೊಟ್ಟಿಲ್ಲ ಎಂದು ಹೇಳುವುದು ಏತಕ್ಕೆ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ರಾಮಯ್ಯನವರು ಅವರ ನೋವನ್ನು ಏನು ಅನುಭವಿಸಿ ಮಾತನಾಡಿದ್ದಾರೆ ಆ ವಿಚಾರ ಗ್ರಹಿಕೆ ಮಾಡುವ ಶಕ್ತಿ ದೇವರು ಅಲ್ಪಸ್ವಲ್ಪ ನನಗೆ ಕೊಟ್ಟಿದ್ದಾನೆ ಎಂಬ ಹಿನ್ನೆಲೆಯಲ್ಲಿ ಈ ಮಾತನ್ನು ಆಡಿದ್ದೇನೆ. ನಾನು ನಿಮ್ಮ ಶಕ್ತಿ ಬಗ್ಗೆ ಮಾತನಾಡಲಿಲ್ಲ ಬೈರೇಗೌಡರ. ನಾನು ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳಬಲ್ಲೆ. ಏನೆಂದರೆ......

ಶ್ರೀ ಸಿ. ಬೈರೇಗೌಡ : ಯಾವ ರೀತಿ ನಡೆದುಕೊಳ್ಳಬೇಕು ಎಂಬುದನ್ನು ಹೇಳಿದರೆ ಆ ರೀತಿ ನಡೆದುಕೊಳ್ಳುತ್ತೇನೆ ಎಂದು ನಮ್ಮ ಮೇಲೆ ಹಾಕುತ್ತಿದ್ದೀರಲ್ಲ.........

ಶ್ರೀ ಎಸ್. ಬಂಗಾರಪ್ಪ : ನಿಮ್ಮ ಮೇಲಲ್ಲ........

ಶ್ರೀ ಸಿ. ಬೈರೇಗೌಡ : ಮಾನ್ಯ ರಾಮಯ್ಯನವರ ಮೇಲೆ ಹಾಕುತ್ತಿದ್ದೀರಲ್ಲಾ, ಅದಕ್ಕೆ ನಾನು ಇನ್ನೂ ವ್ಯಥೆಪಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ : ನಿಮಗೂ ಕೂಡ ಅದನ್ನು ಗ್ರಹಿಸತಕ್ಕ ಶಕ್ತಿ ನನಗಿಂತ ಜಾಸ್ತಿ ಇದ್ದರೆ ನಾನು ಸಂತೋಷಪಡುತ್ತೇನೆ. ನಿಮಗೂ ಅದಿರಲಿ ಅದು ಇದೆಯೋ ಇಲ್ಲವೋ ಎಂಬ ಬಗ್ಗೆ ತಾವು ಮಾತನಾಡಿದರೆ ಬಹಳ ಒಳ್ಳೆಯದು.

ಶ್ರೀ ಸಿ. ಬೈರೇಗೌಡ : ಇದುವರೆಗೂ ಗೊತ್ತಾಗಿದೆಯಲ್ಲ ಯಾರಿಗೆ ಎಷ್ಟು ಇದೆ ಎಂಬುದು. ನಾನಾದರೂ ಅವರ ನೆರವಿಗೆ ಹೋಗಿದ್ದೇನೆ. ಅವರ ಕುಟುಂಬಕ್ಕೆ ಬೇಕಾಗಿರತಕ್ಕ ಸಹಾಯ ನಮ್ಮ ಕೈಯಲ್ಲಿ ಸಾಧ್ಯವಾಗಿದ್ದನ್ನು ನಾವು ಮಾಡಿದ್ದೇವೆ. ನಿಮಗೆ ಎಷ್ಟು ಇದೆ ಎಂಬುದು ನಿಮ್ಮ ಮಾತಿನಿಂದ ಹೊರಗೆ ಬಂತಲ್ಲ, ಅಷ್ಟು ಸಾಕು.

ಶ್ರೀ ಎಸ್. ಬಂಗಾರಪ್ಪ : ವಿಷಯವನ್ನು ಷಿಫ್ಟ್ ಮಾಡುವುದಕ್ಕೆ ನನಗೆ ಆಸೆ ಇಲ್ಲ. ನನಗೆ ಅವರ ನೋವಿಗಿಂತ ಹೆಚ್ಚು ಆ ವಾದ ಅಲ್ಲ. ಬೈರೇಗೌಡರ ವಾದ ಅಲ್ಲ. ಆ ಮಾತು ಸ್ಪಷ್ಟಪಡಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೇ ತಮ್ಮ ಅನುಮತಿ ಪಡೆದು ಸರ್ಕಾರದ ಪರವಾಗಿ ಪುನರುಚ್ಚಾರ ಮಾಡುತ್ತಿದ್ದೇನೆ. ಸಹಾಯವನ್ನು ಅಕ್ಕಪಕ್ಕದವರು ಯಾರಾದರೂ ಕೊಟ್ಟಿರಬಹುದು, ತಾವು ಕೊಟ್ಟಿರಬಹುದು, ಮತ್ತೊಬ್ಬರು ಮಾಡಿರಬಹುದು. ಅದು ಪ್ರತ್ಯೇಕ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಮುಖ್ಯಮಂತ್ರಿಗಳೇ, I would like to tell through you Mr. Speaker Sir, the wido of gangaiah is expecting rule of law from you, not compensation.

ಶ್ರೀ ಎಸ್. ಬಂಗಾರಪ್ಪ : ರಾಮಯ್ಯನವರ ಮಾತಿನಲ್ಲಿ ಈ ಎರಡೂ ಇದ್ದಾವೆ ಎಂದು ನಾನು ಭಾವಿಸಿದ್ದೇನೆ. ಪ್ರೊಫೆಸರ್‌ರವರು ಒಂದನ್ನು ಮಾತ್ರ ಹಿಡಿದುಕೊಂಡಿದ್ದಾರೆ. ಅವರ ನೋವಿನ ಬಗ್ಗೆ ರಾಮಯ್ಯನವರು ನಿಮ್ಮ ಎದುರಿಗೇ ಕೂತು ಮಾತನಾಡಿದ್ದಾರೆ. ಅದಿಲ್ಲ, ಬರೀ 'ರೂಲ್ ಆಫ್ ಲಾ' ನಮ್ಮ ನೋವು ಎಂದರೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. ಅಷ್ಟು ಮಾತ್ರ ಹೇಳಬಲ್ಲೆ; ಆದರೆ ಕಡುಬಡವರ ನೋವನ್ನು ಗಮನದಲ್ಲಿ ಇಟ್ಟು ಹೇಳುವುದು ಒಳ್ಳೆಯದು ಎಂದು ನನ್ನ ಭಾವನೆ.

ಪ್ರೊ : ಎಂ.ಡಿ. ನಂಜುಂಡಸ್ವಾಮಿ : ಸಭಾಧ್ಯಕ್ಷರೇ, ನನ್ನ ತಾಳ್ಮೆಯನ್ನು ಈ ಸರ್ಕಾರ ಪರೀಕ್ಷೆ ಮಾಡುತ್ತಾ ಇದೆ. ರಾಮಯ್ಯನವರು ಮಾತನಾಡುತ್ತಾ, ಲಾ ಸೆಕ್ರೆಟರಿಯವರು ಏನು ಮಾಡುತ್ತಿದ್ದಾರೆ, ಅವರಿಗೆ "minimum knowledge of law " ಇದೆಯೇ ಎನ್ನುವ ಮಾತನಾಡಿದರು. ಮತ್ತೆ, ಈ ರಾಜ್ಯದ ಪೊಲೀಸರು ಏನು ವಿರೋಧಿಯರಾಗಿದ್ದಾರಾ ಎಂದು ಮಾತನಾಡಿದರು. ಏನೋ ಬಹಳ

ಸುಸಂಸ್ಕೃತ ವ್ಯಕ್ತಿ ರಾಮಯ್ಯನವರು, ಆ ಭಾಷೆ ಉಪಯೋಗಿಸಿದರು. ಆದರೆ ನಾನು ಬೇರೆ ಭಾಷೆ ಉಪಯೋಗಿಸಬೇಕಾಗುತ್ತದೆ. minimum decency ಇಲ್ಲ ಈ ಸರ್ಕಾರಕ್ಕೆ minimum knowledge of law ಅಲ್ಲ. This Government lacks minimum decency. ಪೊಲೀಸರು ನಿರ್ವೀರ್ಯರು ಅಲ್ಲ; ಮಾನಗೆಟ್ಟವರು.

ಶ್ರೀ ಎಸ್. ಬಂಗಾರಪ್ಪ : ಅಭಿಪ್ರಾಯಗಳು ವಿಭಿನ್ನವಾಗಿರುತ್ತವೆಂದು ತಮಗೆ ತಿಳಿದಿದೆ ಎಂದು ನಾನು ಭಾವಿಸುತ್ತೇನೆ.

Prof. M.D. NANJUNDA SWAMY : Just you cannot defend yourself. I am just walking out. This is intolerable.

(At this stage hon Member staged a walk out)

ಶ್ರೀ ಎಸ್. ಬಂಗಾರಪ್ಪ : ಆದರೂ ನಾನು ನಿಮ್ಮ ಬಗ್ಗೆ ಅಪಾರ ಗೌರವವನ್ನು ಇಟ್ಟುಕೊಂಡಿದ್ದೇನೆ. ಮುಂದಕ್ಕೂ ಕೂಡಾ ಮುಂದುವರಿಸುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ಪ್ರೊಫೆಸರ್‌ರವರು ಏನು ಹೇಳಿದರೂ ನಾನು ಅವರಿಗೆ ಗೌರವ ಕೊಟ್ಟು ಕೊಂಡು ಮುಂದುವರೆಯುತ್ತೇನೆ. ಅವರು ಮಾನ್ಯ ಸದಸ್ಯರಿದ್ದಾರೆ. ಆದರೆ ಒಂದು, ಮಾನ್ಯ ಸದಸ್ಯರಾದ ರಾಮಯ್ಯನವರು ಆಡಿರತಕ್ಕ ಮಾತಿನ ಆ ವಿಚಾರದಲ್ಲಿ ಆ ಕುಟುಂಬದ ಬಗ್ಗೆ ಆ ನೋವಿನ ಹಿನ್ನೆಲೆಯಲ್ಲಿ ಅವರು ಮಾತನಾಡಿದ್ದಾರೆನ್ನತಕ್ಕ ದೃಷ್ಟಿಯಿಂದ ನಾನು ಮಾತನಾಡಿದ್ದೇನೆ. ಸಹಾಯ ಕೊಡಲು ಸರ್ಕಾರ ಸದಾ ಸಿದ್ಧವಾಗಿದೆ. ಇವರಿಗೆ ಸಹಾಯವನ್ನು ಯಾವ ರೀತಿ ತಾವು ಕೊಡಬೇಕೆಂದು ಹೇಳುತ್ತೀರೋ ಆ ರೀತಿ ಕೊಡುವುದಕ್ಕೆ ನಾವು ಸಿದ್ಧರಿದ್ದೇವೆ. ಆದರೆ ಒಂದೇ ಒಂದು ವಿಷಯವೆಂದರೆ, ತಾವು ಹೇಳಿದಿರಿ ಎಂದು ಅಲ್ಲ. ಇದರಲ್ಲಿ ನಮ್ಮ ಕರ್ತವ್ಯ ಕೂಡಾ ಅಡಗಿದೆ ಎಂದು ಭಾವಿಸಿದ್ದೇವೆ. ಸಹಾಯಕ್ಕೆ ನಾವು ಸಿದ್ಧರಿದ್ದೇವೆ. ತಾವು ಹೇಳಿದ್ದಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ. ಈ ಬಗ್ಗೆ ಮೊದಲೇ ಸಹಾಯ ಕೋರುತ್ತೇವೆ. ಸಹಾಯ ಕೊಡತಕ್ಕದ್ದು ನಮ್ಮ ಆದ್ಯ ಕರ್ತವ್ಯ ಎಂದು ಭಾವಿಸಿದ್ದೇವೆ ಇನ್ನು......

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಒಂದು ಜವಾಬ್ದಾರಿ ಸ್ಥಾನದಲ್ಲಿ ಇದ್ದು, ಅವರಿಗೆ ನಿಜವಾಗಿಯೂ ಯಾವುದರ ಬಗ್ಗೆಯೂ ಆಸಕ್ತಿ ಇಲ್ಲದೇ ಒಬ್ಬ ಮುಖ್ಯಮಂತ್ರಿಯಾಗಿ ವರ್ತನೆ ಮಾಡಿದ್ದರೆ ಆ ನಿಮಿಷಕ್ಕೇ ಪರಿಹಾರವನ್ನು ಘೋಷಣೆ ಮಾಡಬೇಕಾಗಿತ್ತು. ಆ ಕೆಲಸ ಮಾಡದೇ ಇವತ್ತು ಆ ಕುಟುಂಬಕ್ಕೆ ಕ್ಷಮಾಪಣೆ ಅಲ್ಲ, ಈ ಒಂದು ಘಟನೆಯಲ್ಲಿ ನೀವು ನಡೆದುಕೊಂಡ ರೀತಿ ಬಗ್ಗೆ ಇಡೀ ರಾಜ್ಯದ ಜನರ ಮುಂದೆ ಕ್ಷಮಾಪಣೆ ಕೇಳಬೇಕು. ಅಂತಹ ಅಕ್ಷಮ್ಯ ಅಪರಾಧವನ್ನು ಈ ಒಂದು ಸಂದರ್ಭದಲ್ಲಿ ತಾವು ಮಾಡಿದ್ದೀರಿ. ಒಂದು ಕೊಲೆ ಆದ ತಕ್ಷಣ 302ರ ಪ್ರಕಾರ ಏಕೆ ಅರೆಸ್ಟ್ ಮಾಡಿಲ್ಲ ಎನ್ನುವುದು ಇಲ್ಲಿ ಮೂಲ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ : ನಾನು ಅವರಿಗೆ ಈಲ್ಡ್ ಆಗಿಲ್ಲ. ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ಪ್ರಾಮುಖ್ಯವಾಗಿ ತನಿಖೆ ನಡೆಯತಕ್ಕ ವಿಚಾರದಲ್ಲಿ ನ್ಯಾಯಾಂಗ ತನಿಖೆ ಬಗ್ಗೆ ನಾವು ತೀರ್ಮಾನ ಮಾಡಿದ್ದೇವೆ. ಕರ್ನಾಟಕ ಹೈಕೋರ್ಟ್‌ಗೂ ಕೂಡಾ ನಾವು ಬರೆದಿದ್ದೇವೆ. To spare the services of one of the Judges of the Karnataka High Court..... ಅವರಿಂದ ಉತ್ತರ ಬಂದ ತಕ್ಷಣ ಸರ್ಕಾರ ಆಜ್ಞೆ ಹೊರಡಿಸತಕ್ಕ ವಿಚಾರ ಇದೆ. We are awaiting. ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೇ, ಬಹುಶಃ ನಾನು ಎರಡನೇ ದಿನ ಮಾನ್ಯ ಮುಖ್ಯಮಂತ್ರಿಗಳನ್ನು ಈ ಸದನದಲ್ಲಿ ನೋಡಿದೆ. ಇದೇ ಮುಖ್ಯಮಂತ್ರಿ ಬಂಗಾರಪ್ಪನವರೇನು ಕೂತು ಮಾತನಾಡುತ್ತಿದ್ದಾರೋ ಎಂದು ಅನುಮಾನ ನನಗೆ ಬರುತ್ತದೆ. ಕಾರಣ ಇಷ್ಟೇ. ಬೆಳಿಗ್ಗೆ ಲೋಕಸೇವಾ ಆಯೋಗದ ವಿಚಾರ ಮಾತನಾಡುತ್ತಾ ಹೇಳಿದರು, ನಿಮ್ಮ ಸರ್ಕಾರ ಇದ್ದಾಗ ರಾಚಯ್ಯನವರು ಅದ್ಯಾವುದನ್ನೋ ನಿಲ್ಲಿಸಿಬಿಡಲಿಲ್ಲವೇ ಎಂದು.

ನಾನು ಮುಖ್ಯಮಂತ್ರಿಯಾದರೆ ಹೀಗೇ ಮಾತನಾಡಬೇಕೋ ಏನೋ ಗೊತ್ತಿಲ್ಲ, ಬೆಳಿಗ್ಗೆ ನೀವು ವಾದ ಮಾಡಿದ್ದು whether this Government have any right to interfare with the

functioning of the Public Service Commission because of the Constitutional safeguard.

ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ ನಿಮ್ಮ ಸರ್ಕಾರ ಇದ್ದಾಗ ಮಾಡಲಿಲ್ಲವೇ ಎಂದು ಅದು ನೇಮಕಾತಿ ಸಮಿತಿ, it is a creation of the Government.

ಶ್ರೀ ಆರ್.ಎನ್. ನಾಯಕ್ : ಮಾನ್ಯ ಸದಸ್ಯರು ಯಾವುದನ್ನು ಚರ್ಚೆ ಮಾಡುತ್ತಿದ್ದಾರೆ? ಅದು ಮುಗಿದ ಮೇಲೆ ಏತಕ್ಕೆ ಮತ್ತೆ ಚರ್ಚೆ?

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ ಮಾನ್ಯ ನಾಯಕ್‌ರವರನ್ನು ನಾನು ಆರು ವರ್ಷಗಳ ಕಾಲ ನೋಡಿದ್ದೇನೆ. ಆಗ ಸ್ವಲ್ಪ ಸಣ್ಣಗಿದ್ದರು, ಈಗ ಸ್ವಲ್ಪ ದಪ್ಪವಾಗಿದ್ದಾರೆ. ಆದರೆ ಉಳಿದಿದ್ದು ಹಾಗೆಯೇ ಇದೆ. ಏನೂ ಬದಲಾವಣೆಯಾಗಿಲ್ಲ. ನಾನು ನೋಡಿದ್ದ ಅವರನ್ನು ಬಹಳ ವರ್ಷಗಳ ಹಿಂದೆ ಈಗ ಅವರಿಗೆ ಮದುವೆ ಆಗಿದೆಯೆಂದು ಕಾಣುತ್ತದೆ. ಸ್ವಲ್ಪ ದಪ್ಪವಾಗಿದ್ದಾರೆ. ಆದರೆ ಬೇರೆ ಯಾವುದಕ್ಕೂ ಬದಲಾವಣೆಯಾಗಿಲ್ಲ. ನಾನು ಏತಕ್ಕೆ ಇದನ್ನು ಹೇಳಿದೆ ಅಂದರೆ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ನಿವೇದನೆ ಮಾಡಿಕೊಳ್ಳುವುದೇನೆಂದರೆ ತಾವು ಈ ರಾಜ್ಯದ ಮುಖ್ಯಮಂತ್ರಿಗಳಾದಾಗ ಅಪಾರವಾದ ನಿರೀಕ್ಷೆಯನ್ನು ನಾನು ಮಾಡಿದ್ದೆ. ನಾನು ಉದಾಹರಣೆ ಕೊಡುತ್ತಿದ್ದೇನೆ, ನಾವು ಏನು ಪ್ರಶ್ನೆ ಎತ್ತುತ್ತೇವೆ ಅದಕ್ಕೆ ತಾವು ಉತ್ತರ ಕೊಡಿ ಸ್ವಾಮಿಯೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಉದಾಹರಣೆ ಕೊಟ್ಟೆ ಅಷ್ಟೆ. ಈಗಲೂ ಅಷ್ಟೇ ಸ್ವಾಮಿ, ರಾಜ್ಯ ಸರ್ಕಾರದಲ್ಲಿ ಅಂತಹುದ್ದೆ ಒಂದು ಸಂದರ್ಭ ಬಂದಿದೆ ಈಗ; ಏನು ಸಾಹೇಬರು ಅಪ್ಪಣೆ ಮಾಡಿದ್ದೀರಿ ಅದನ್ನು ಓದಲಾ ನಾನು? ಯಾವಾಗ ಮಾನ್ಯ ಜಾಲಪ್ಪನವರು ಖೂನಿ ಕೇಸಿನಲ್ಲಿ ಅಪರಾಧಿಯಾಗಿದ್ದ ಸಂದರ್ಭದಲ್ಲಿ ಶ್ರೀಮಾನ್ ಬಂಗಾರಪ್ಪನವರು ವಿರೋಧ ಪಕ್ಷದಲ್ಲಿದ್ದು ಮುಖ್ಯಮಂತ್ರಿಗಳ ರಾಜೀನಾಮೆಯನ್ನು ಕೇಳಿದ್ದಾರೆ. ಆದರೆ ನಾನು ಕೇಳುತ್ತಿಲ್ಲ. I am just asking rule of law. Due process of law. You know better because you have studied Constitutional law in Texas. ನಾನು ಅವರನ್ನು ಏನೂ ಕೇಳುತ್ತಿಲ್ಲ. ನಾನು ಕೇಳುತ್ತಿರುವುದು ಈ ನೆಲದ ಕಾನೂನನ್ನು ಸಮಾನವಾಗಿ ಜಾರಿಮಾಡಿ ಎಂದು ಅದಕ್ಕೆ ನನಗೆ ಉತ್ತರ ಬೇಕಾಗಿರುವುದು. ಜಾಲಪ್ಪನವರು ಕೇಸು ಬಂದಾಗ ತಾವೇನು ಹೇಳಿದ್ದೀರಿ ಅದನ್ನು ತಮ್ಮ ಅವಗಾಹನೆಗೆ ತರುತ್ತಿದ್ದೇನೆ. "for the sake of the fair investigation, you must resign of the position and you have no right to continue here as Chief Minister....

ನಾನು ಅಷ್ಟು ಮುಂದಕ್ಕೆ ಹೋಗಿಲ್ಲ. ನಿಮ್ಮ ಸಂಪುಟದ ಸದಸ್ಯರೊಬ್ಬರು ಖೂನಿ ಕೇಸಿನಲ್ಲಿ ಅಪರಾಧಿಯಾಗಿರುವುದರಿಂದ Mr. Speaker, Sir, you know the joint responsibility of the Cabinet. I would have demanded the resignation of the Chief Minister but I have not gone to that extent because I know it is useless....

ಈ ರಾಷ್ಟ್ರದಲ್ಲಿ ನಾವು ಯಾರೂ ಅಷ್ಟು ಸೆನ್ಸಿಟಿವ್ ಇಲ್ಲ. ಯಾರೂ ರಾಜೀನಾಮೆಯನ್ನು ಕೊಡುತ್ತಿರಲಿಲ್ಲ. ನಾನು ಅದನ್ನು ಎಕ್ಸ್‌ಪೆಕ್ಟ್ ಮಾಡಿ ಕೇಳಲಿಲ್ಲ. ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನೀವ ರಾಜೀನಾಮೆ ಕೊಡುವುದು ಬೇಡ. ನಿಮ್ಮ ಸರ್ಕಾರ ರಾಜೀನಾಮೆ ಕೊಡುವುದು ಬೇಡ. ನಮ್ಮ ಗೃಹಮಂತ್ರಿಗಳು ರಾಜೀನಾಮೆ ಕೊಡುವುದು ಬೇಡ. ಈ ನೆಲದ ಕಾನೂನನ್ನು ಜನಸಾಮಾನ್ಯರಿಗೆ ಹೇಗೆ ಅನ್ವಯಿಸುತ್ತೇವೆ, ಒಬ್ಬ ಸಾಮಾನ್ಯ ಮನುಷ್ಯ ಖೂನಿ ಮಾಡಿದರೆ ಹೇಗೆ ಹಿಡಿದು ಒಳಗೆ ಹಾಕುತ್ತಿದ್ದೇವೆ ಹಾಗೆ ಇದರಲ್ಲಿ ಏತಕ್ಕೆ ಮಾಡಲಿಲ್ಲ ಎನ್ನುವುದಕ್ಕೆ ನೀವು ಉತ್ತರ ಕೊಡಿ, ಸಾಕು ಸ್ವಾಮಿ?

ಶ್ರೀ ಎಸ್. ಬಂಗಾರಪ್ಪ : ನಾನು ವಿಷಯವನ್ನು ಪ್ರಸ್ತಾಪಮಾಡಲಿಕ್ಕೆ ಸಂದರ್ಭವಾದರೂ ಇಷ್ಟೇನೇ. ಅಲ್ಲಿ ವಿಷಯಗಳು ಪ್ರಸ್ತಾಪ ಆದಮೇಲೆ ಯಾವ ತೀರ್ಮಾನವನ್ನು ಸರ್ಕಾರಮಟ್ಟದಲ್ಲಿ ನಾವು ಮಾಡಿದ್ದೇವೆ. ಎನ್ನುವುದಕ್ಕೆ ವಿಚಾರವನ್ನು ಮಾತ್ರ ನಾನು ಹೇಳಿದ್ದೇನೆ. ನ್ಯಾಯಾಂಗ ತನಿಖೆ ಮಾಡಲಿಕ್ಕೆ

ಕೂಡ ನಾವು ತೀರ್ಮಾನ ಮಾಡಿದ್ದೇವೆ. ಅದರ ಬಗ್ಗೆ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಿದ್ದೇವೆ ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಅದರ ಅರ್ಥವೇನು ? ಇವತ್ತು ತನಿಖೆಯಾಗಲಿ ಸತ್ಯ ನ್ಯಾಯ ಹೊರಬರಲಿ, ತಪ್ಪಿತಸ್ಥರ ಮೇಲೆ ಕ್ರಮವನ್ನು ಕಾನೂನು ಪ್ರಕಾರ ತೆಗೆದುಕೊಳ್ಳುವುದಕ್ಕೆ ಯಾವ ಸಿದ್ಧತೆಯನ್ನು ಸರ್ಕಾರ ಮಾಡಿಕೊಳ್ಳಲೇಬೇಕೋ ಅದನ್ನು ಮಾಡುವುದಕ್ಕೆ ನಾವು ಸಿದ್ಧರಾಗಿದ್ದೇವೆ ಎನ್ನತಕ್ಕದ್ದು ಇದರ ಅರ್ಥ. ಕರ್ನಾಟಕ ಲೋಕಸೇವಾ ಆಯೋಗದ ವಿವರಗಳಿಗೆ ನಾನು ಹೋಗುವುದಿಲ್ಲ. ತಾವು ಹೇಳಿದ್ದರಿಂದ ಒಂದೇ ಒಂದು ಮಾತು. ಲೋಕಸೇವಾ ಆಯೋಗಕ್ಕೆ ಒಂದು ವಿಷಯ ಹೋದಮೇಲೆ, ಸರ್ಕಾರ ಅದರ ಬಗ್ಗೆ ಕಾರ್ಯಕ್ರಮವನ್ನು ಹಾಕಿ ಹಿಂದಕ್ಕೆ ತೆಗೆದುಕೊಳ್ಳುವುದಕ್ಕೆ ನಮಗೆ ಅಧಿಕಾರ ಇರುವುದನ್ನು ನಾನು ಹೇಳಿದೆ. ಇದು ಇಷ್ಟು ಬಿಟ್ಟರೆ, ಏನೆಲ್ಲಾ ಆಗಿದೆ ಇದಕ್ಕೆ ಯಾವ ಸಂಬಂಧವೆಂದು ನನಗಂತೂ ಅದು ಅರ್ಥವಾಗಲಿಲ್ಲ.

ಇನ್ನು ಅಲ್ಲಿ ಬ್ಯಾಲ್ ಪೇಪರ್ಸ್ ಹರಿದು ಹಾಕಿದರು ಮತ್ತೊಂದು ಎನ್ನತಕ್ಕದ್ದರ ಬಗ್ಗೆ ಕಂಪ್ಲೈಂಟ್ ಕೊಟ್ಟಿದ್ದೇವೆ ಎನ್ನುವ ಮಾತನ ಅವರೇ ಹೇಳಿದ್ದಾರೆ. ಏನದರೂ ಕಂಪ್ಲೈಂಟ್ ಕೊಟ್ಟಿದ್ದರೆ these are all matters that come well within the purview of the Election Commission of India. ಅದು ಹೋಗತಕ್ಕ ವಿಚಾರ.

Sri. Y.K. RAMAIAH : It is an offence under IPC.

Sri. S. BANGARAPPA : May be; also I presume that you have brought all of these matters through a complaint to the Election Commission of India.

Sri. Y.K. RAMAIAH : The Deputy Commissioner of Tumkur and the S.P. of Tumkur recorded the statement of the polling officers That is sufficient to invoke the Criminal Procedure Code.

ಶ್ರೀ ಎಸ್. ಬಂಗಾರಪ್ಪ : ಅವರು ಏನೇ ಮಾಡಿದ್ದರೂ ಕೂಡ ಎಲೆಕ್ಷನ್ ಕಮೀಷನ್‌ದವರು ಅಂತಿಮವಾಗಿ ತೀರ್ಮಾನ ಮಾಡುತ್ತಾರೆ. Therefore they cannot take any decision independently ನನಗೆ ಗೊತ್ತಿರುವ ಹಾಗೆ That is the legal position.

Sri. Y.K. RAMAIAH : Mr. Speaker, Sir, I would like to bring to the notice of the Hon'ble Chief Minister it is an offence under I.P.C. also. You can take the report from Law experts and you can proceed.

Sri. S. BANGARAPPA : No, I do agree, ರಾಮಯ್ಯನವರೇ ನಾನು ಕೇಳುವುದು there is a section ಇದೆ. ಅಂದ ತಕ್ಷಣ independent of what Election Commission can do under the law ನಾವೇ ತೆಗೆದುಕೊಂಡು ಹೋಗಿ ಮಾಡತಕ್ಕಂಥ ವಿಚಾರ ಅಷ್ಟೇ ಅಲ್ಲ, ಎಲೆಕ್ಷನ್ ಕಮೀಷನ್ ಅವರದ್ದು ಕೂಡ ಕಾರ್ಯಕ್ರಮಗಳು ಇವೆ. ಈಗ ವಿವರಗಳಿಗೆ ಹೋಗುವುದು ಬೇಡ. ಅದನ್ನು ಅಲ್ಲಿಗೇ ಬಿಡೋಣ. ತಾವು ತನಿಖೆಗೆ ಕಂಪ್ಲೇಂಟ್ ವಗೈರೆ ಏನು ಕೊಟ್ಟಿದ್ದೀರಿ, ಅದರ ಬಗ್ಗೆ ನಾವು ಗಮನಿಸೋಣ. ಮತಗಟ್ಟೆ ಕ್ಯಾಪ್ಚರ್, ಫಾಲ್ಸ್ ಓಟಿಂಗ್ ಮತ್ತೊಂದು ಆದಷ್ಟೂ ಕೂಡ ಅವರಿಗೇ ಬರತಕ್ಕದ್ದು. ಅದರ ಬಗ್ಗೆ ಯಾವುದೇ ಪ್ರಸ್ತಾಪ ಮಾಡುವುದಕ್ಕೆ ಈ ಸಂದರ್ಭದಲ್ಲಿ ನಾನು ಹೋಗುವುದಿಲ್ಲ. ಅನಂತರ ಕಂಪ್ಲೇಂಟ್ ಬಂದಾಗ ಇವತ್ತು ರಮೇಶ್‌ರವರನ್ನು ನೀವು ಮಂತ್ರಿಮಂಡಲದಿಂದ ಏತಕ್ಕಾಗಿ ಬಿಡಬೇಕು, ಕೇಸ್ ಹಾಕಬೇಕು, ಅರೆಸ್ಟ್ ಮಾಡುವ ಮಾತಾಗಲೀ ಏತಕ್ಕೆ ಹೇಳಿದ್ದೀರಿ ಎಂದರೆ ಇನ್‌ಫರ್ಮೇಷನ್ ತಾವೇ ಹೇಳಿದ ಹಾಗೆ ಆಗುತ್ತೆ. ನಾನು ಕೇಳಿದೆ ತಾವು ಇದ್ದಿರೇನು ಆ ಹೊತ್ತಿನಲ್ಲಿ ಅಂತ. ತಾವು ಕ್ಲಿಯರ್ ಆಗಿ ಹೇಳಿದ್ದೀರಿ. ನಾನೇನೂ ಇರಲಿಲ್ಲ ಎನ್ನತಕ್ಕಂಥ ಮಾತು. ಅಲ್ಲಿ ತಾವು ಏನೇ ಹೇಳಿದರೂ ಕೂಡ "Hearsay" ಎಂಬುದು ಸ್ಪಷ್ಟವಾಗಿ ಅದರಿಂದ ಗೊತ್ತಾಗುತ್ತದೆ. ಸುಮಾರಾಗಿ ತಾವು ಬಹಳ ವರ್ಷ ಕ್ರಿಮಿನಲ್

ಕೇಸ್‌ಗಳನ್ನು ನಡೆಸಿದ್ದೀರಿ ಅಂತ ಕೇಳಿ ಬಹಳ ಸಂತೋಷವಾಯಿತು. ನನಗೂ ಕೂಡ ಸ್ವಲ್ಪ ಎಲಿಮೆಂಟರಿ ನಾಲೆಡ್ಜ್ ಇದೆ. as far as the Criminal Jurisprudence is concerned. ಎನ್ನತಕ್ಕಂಥಾದ್ದು ಸ್ಪಷ್ಟವಾಗಿ ನಾನು ಕೂಡ cognizable, non-cognizable warrant, summon case procedure, murder cases ನಲ್ಲಿ ಸ್ವಲ್ಪ ಇದ್ದು ಬಂದವರು ಆಗಿದ್ದೇವೆ. ಅನೇಕ ಜನ ಮಾನ್ಯ ಮಿತ್ರರು, ಪ್ರಾಕ್ಟೀಸ್ ಮಾಡತಕ್ಕವರು ಇದ್ದಾರೆ. ಇಲ್ಲಿ ಶ್ರೀ ಉಸ್ತಾದ್ ಅವರೂ ಕುಳಿತುಕೊಂಡಿದ್ದಾರೆ. ಹಾಗೆ ಕೆಲವರು ಕೂಡ ಇದ್ದಾರೆ. ಈ ಪ್ರೊಫೆಸರ್ ವಿಚಾರ ಗೊತ್ತಿರತಕ್ಕಂಥ ಸಂದರ್ಭದಲ್ಲಿ ಅವರಿಗೆ ಗೊತ್ತಿದೆಯೆಂದು ನಾನು ಭಾವಿಸುತ್ತೇನೆ.

The moment a complaint is made, if you start of arresting a person... Bringing a person for questioning is different from what action you take to keep a person under lawful arrest.

ಏಕೆಂದರೆ ಇವತ್ತು ಪೊಲೀಸಿನವರಿಗೂ ಕೂಡ ನನಗೆ ಗೊತ್ತಿರುವ ಹಾಗೆ ಹುಡೇಗಲ್ ಬಗ್ಗೆ ಇನ್‌ಫಾರ್ಮೇಷನ್ ಇತ್ತು. ಶ್ರೀಮತಿ ಲಕ್ಷ್ಮಮ್ಮ ಕಂಪ್ಲೇಂಟ್ ವಗೈರೆ ಏನು ಕೊಟ್ಟಿದ್ದಾರೆ, ಅದೂ ಕೂಡ ರಿಜಿಸ್ಟರ್ ಆಗಿದೆ ಎನ್ನತಕ್ಕಂಥ ವಿಚಾರವನ್ನು ಸಹ ತಾವು ಹೇಳಿದ್ದೀರಿ. ಕೃಷ್ಣಪ್ಪ, ಸಬ್‌ಇನ್ಸ್‌ಪೆಕ್ಟರ್ ಅವರು ರಿಜಿಸ್ಟರ್ ಮಾಡಿದ್ದಾರೆ ಇತ್ಯಾದಿ ಮಾತನ್ನು ತಾವು ಹೇಳಿದ್ದೀರಿ. ಆದರೆ ಅದರ ಬಗ್ಗೆ ವಿವರಗಳಿಗೆ ನಾನು ಹೋಗುವುದಿಲ್ಲ. ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ.

The point for consideration at this stage is, the moment the complaint is lodged and then if you just keep a man under lawful arrest then there is no end for all these things. For argument sake also I am posing this question. Even for academic interest also. Make a complaint, keep a person under arrest because the information. You know the difference between getting the information. You want a person to be arrested under Sec. 302. The moment the complaint is made in the police station, what law says. The case is to be registered. The moment information is received. You must send the FIR before the court. Everybody knows this. Get a complaint, registered, send an FIR to the court and immediately keep the person under lawful arrest finished. Then investigation commences.

ಈ ಮಾತನ್ನು ಬರೀ ರಮೇಶ್ ಬಗ್ಗೆ ನಾನು ಮಾತನಾಡುತ್ತಿಲ್ಲ. For academic interest also I am posing this question. ಈ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ನಾಳೆ ಎಲ್ಲರ ಮೇಲೆ ಕಂಪ್ಲೇಂಟ್ ಕೊಡುತ್ತಾ ಹೋಗಿಬಿಡಬಹುದು. ಕಂಪ್ಲೇಂಟ್ ಬಂದರೆ ತಕ್ಷಣ ಕೇಸ್ ರಿಜಿಸ್ಟರ್ ಆಗಬೇಕು ಮತ್ತು ಕೇಸ್ ರಿಜಿಸ್ಟರ್ ಆದ ತಕ್ಷಣ ಎಫ್.ಐ.ಆರ್. ಹಾಕಬೇಕು. ಅದು ಕೋರ್ಟಿಗೆ ಹೋಗಬೇಕು. ಎಫ್.ಐ.ಆರ್. ಹೋದ ತಕ್ಷಣ If this were to be argument, I don't think, anybody can be there so safe. ಈ ಮಾತನ್ನು ಆರ್ಗ್ಯುಮೆಂಟ್ ಸೇಕ್‌ನಿಂದ ಹೇಳಿದ್ದೇನೆ. That is why, this is the main reason, why I made the statement. ಇವತ್ತು ಯಾರಾದರೂ ಇರತಕ್ಕದ್ದು. ಅಲ್ಲ.

VIPs & VVIPs – Very very important personalities, were there. This is the information I received. Net only persons belonging to my political perty but also people belonging to your own political party-as well as there may be-persons from other political parties also. They were there in the election field.

ಏಕೆಂದರೆ, ಅವತ್ತು ವೋಟಿಂಗ್ ಮುಗಿಯುತ್ತಾ ಇದೇ, ನಾಲ್ಕೂವರೆ, ಐದು ಗಂಟೆ ಎಂದು ನನಗೆ ಬಂದಿರತಕ್ಕ ವರದಿ. ಅವತ್ತು ಎಲ್ಲರೂ ನೋಡಿರತಕ್ಕ ವಿಚಾರ. ನಾವು ಕೂಡಲೇ ಅರೆಸ್ಟ್ ಮಾಡಲು ಹೋದರೆ ಗತಿ ಏನಾಗುತ್ತಿತ್ತು not because you said he is Ramesh.

SRI Y.K. RAMAIAH : I do wish to interrupt. If you could kindly yield for a minute. ನನಗೆ ಅರ್ಥವಾಗುತ್ತಾ ಇಲ್ಲ ಅವರು ಹೇಳಿದ್ದನ್ನೇ ಮತ್ತೊಂದು ಸಲ ಓದಲೇ? ಮುಖ್ಯಮಂತ್ರಿಗಳ ನಡವಳಿಕೆ ನನಗೆ ಅರ್ಥವಾಗುತ್ತಾ ಇಲ್ಲ. ಅವರು ಏನು ಹೇಳಿದ್ದಾರೆ ಅದನ್ನೇ ಹೇಳುತ್ತೇನೆ. ಇವತ್ತು ಫಿರ್ಯಾದಿಯೋ, ಅಪರಾದಿಯೋ ಅಥವಾ ನಿರ್ದೋಷಿಯೋ ಎಂದು ತೀರ್ಮಾನ ಮಾಡುವವರು ಯಾರು? ನಾನೇ, ಅವರೇ, ತಾವೇ. ಯಾರು ಎಂಬುದನ್ನು ಅವರೇ ಹೇಳಿದ್ದಾರೆ, ಅದನ್ನು ಓದಲೇ? ಅವತ್ತು ಅಪರಾಧಿ ಯಾರು, ಅಪರಾಧಿ ರಮೇಶ್ ಅವರನ್ನು ನಾನು ನೋಡಿಯೇ ಇರಲಿಲ್ಲ. ಇದು ರಮೇಶ್ ಅವರ ಪ್ರಶ್ನೆ ಅಲ್ಲವೇ ಅಲ್ಲ. ಇವತ್ತು ಅಪರಾಧಿ ರಮೇಶ್‌ರವರು ಇಲ್ಲವೇ, ನಾನು ಅಪರಾಧಿ ಎನ್ನುವುದನ್ನು ತೀರ್ಮಾನ ಮಾಡುವವರು ಯಾರು ಎನ್ನುವುದನ್ನು ಆಗಲೇ ಹೇಳಿದ್ದೇನೆ. ಇದನ್ನು ತೀರ್ಮಾನ ಮಾಡುವ ಅಧಿಕಾರ ನ್ಯಾಯಾಧೀಶರಿಗೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಹಿಂದೆ, ಒಂದು ಸ್ಟೇಜ್‌ನಲ್ಲಿ ಹೇಳಬಾರದೆಂದು ಅವರೇ ಹೇಳಿದ್ದಾರೆ. ಅದನ್ನು ಓದುತ್ತೇನೆ. "ಈಗಲೂ ಕೂಡ ಅದನ್ನು ಅವರು ಜಸ್ಟಿಫೈ ಮಾಡುತ್ತಿದ್ದಾರೆ. ಅದು ಅಲ್ಲ, ಇವರು ನಿರ್ದೋಷಿ ಅಲ್ಲ, ಇವರು ದೋಷಿ ಎಂದು ಹೇಳುವುದಕ್ಕೆ ನೀವೇನು ಕೋರ್ಟಿನವರೇ? ಈ ಪ್ರಶ್ನೆಯನ್ನು ಕೇಳುವವನು ನಾನಲ್ಲ, ಆಗಿನ ಮುಖ್ಯಮಂತ್ರಿಗಳನ್ನು ಅವರು ಇಲ್ಲಿ ಕುಳಿತುಕೊಂಡು ಕೇಳಿದ್ದಾರೆ. ವಿರೋಧಪಕ್ಷದ ನಾಯಕರ ಸ್ಥಾನದಿಂದ ಕುಳಿತುಕೊಂಡು, ಆಗಿನ ಮುಖ್ಯಮಂತ್ರಿಗಳನ್ನು ಕೇಳಿದ್ದಾರೆ. ಈ ಪ್ರಶ್ನೆಯನ್ನು ನಾನು ಈಗ ಕೇಳುತ್ತಿದ್ದೇನೆ. "ನೀವೇನು ಕೋರ್ಟಿನವರೇ, ನಿಮ್ಮಿಂದ ಎವಿಡೆನ್ಸ್ ಆಗಿದೆಯೇ? ನಿಮ್ಮನ್ನು ಯಾರು ಬಿಟ್ಟಿದ್ದಾರೆ, ನಿಮಗೆ ಏನು ಅಧಿಕಾರ ಇದೆ, ಏನು ಮಾಡಲಿ ಮತ್ತೆ ಮತ್ತೆ ಅವರು ಇದನ್ನೇ ಹೇಳುತ್ತಿದ್ದಾರೆ. ಇದರಿಂದ ನಾನು ಮಧ್ಯೆ ಪ್ರವೇಶ ಮಾಡಲೇಬೇಕಾಗುತ್ತದೆ. ಅವರು ಹೇಳಿರುವುದನ್ನೇ ಪರಿಪಾಲನೆ ಮಾಡಿ ಎಂದು ಹೇಳುತ್ತಿದ್ದೇನೆ. ಅದೇಕೋ ಇಲ್ಲಿಂದ ಅಲ್ಲಿಗೆ ಹೋದಮೇಲೆ ಬದಲಾವಣೆಯಾಗುತ್ತದೆ. ನಾವು ಏನು ಮಾಡೋಣ? ಅವರ ಜೀವನದಲ್ಲಿ ಏನು ನಂಬಿದ್ದಾರೆ, ಏನು ಹೇಳಿದ್ದಾರೋ ಏನು ಅಳವಡಿಸಿಕೊಂಡಿದ್ದಾರೋ ಅದನ್ನು ಕಾರ್ಯರೂಪಕ್ಕೆ ತನ್ನಿ ಎಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಯಾವ ವಿಚಾರವನ್ನು ಅಲ್ಲಿ ಕೇಳಿದ್ದೇನೆ, ಆಗಿನ ಸಂದರ್ಭದಲ್ಲಿ ಇದ್ದಂಥ ಕೇಸ್ ಯಾವುದು...

SRI Y.K RAMAIAH : If that is the case, ಇಲ್ಲಿ ಕುಳಿತುಕೊಂಡಾಗ ಸಂದರ್ಭಕ್ಕೆ ತಕ್ಕಹಾಗೆ ಮಾತನಾಡಿದ್ದೇನೆ, ಅಲ್ಲಿ ಕುಳಿತುಕೊಂಡಾಗ ಸಂದರ್ಭಕ್ಕೆ ತಕ್ಕಹಾಗೆ ಮಾತನಾಡಿದ್ದೇನೆಂದು ಹೇಳಿದರೆ, I have no objection.

SRI. S. BANGARAPPA : Don't immediately jump to that conclusion ರಾಮಯ್ಯನವರೇ? ನಾನು ಏನು ಹೇಳುತ್ತಿದ್ದೇನೆ, ಅಂದರೆ, ತಾವು ಬಹಳ ಸ್ಪೀಡ್‌ನಲ್ಲಿದ್ದಂತೆ ಕಾಣುತ್ತದೆ. ನಾನು ಒಂದೇ ಒಂದು ತಮ್ಮ ಗಮನಕ್ಕೆ ತರುವುದು, ಯಾವ ವಿಚಾರವನ್ನು ಒಂದು ಕೇಸ್‌ನ ಬಗ್ಗೆ ಹೇಳುತ್ತೇನೋ, ಆ ಕೇಸ್‌ನ ವಿದ್ಯಮಾನಗಳು, ಸ್ಟೇಜಸ್, ಅಲ್ಲಿ ಸಿ.ಐ.ಡಿ. ಎನ್‌ಕ್ವೈರಿ ಮತ್ತೊಂದು ಎಲ್ಲಾ ಬಂದಿತ್ತು. ಈ ಕೇಸ್‌ನಲ್ಲಿ ಸಿ.ಐ.ಡಿ. ಎನ್‌ಕ್ವೈರಿ ಮತ್ತೊಂದು ವಿಚಾರ ಏನಿದೆ? ನಾನು ಅದಕ್ಕೇ ಹೇಳುವುದು; ಆ ವಿಚಾರ ಬೇರೆ, ಇದು ಬೇರೆ ಎನ್ನತಕ್ಕ ದೃಷ್ಟಿಯಿಂದ ಹೇಳುತ್ತಿದ್ದೇನೆ. ನಾನು ಹೇಳುವಂತಹದ್ದು ಆ ದಿವಸ, 8ನೇ ತಾರೀಖಿನ ದಿವಸ ಆ ಸಂದರ್ಭದಲ್ಲಿ ನಮಗೆ ಏನು ಮಾಹಿತಿ ಬಂದಿದೆ, ಆ ಮಾಹಿತಿ ಬಂದಂಥ ಕಾಲದಲ್ಲಿ according to you, or according to the complaint made by the deceased wife, Smt. Lakshmamma, ರಮೇಶ್‌ರವರು ಮಾಡಿದ್ದಾರೆ ಇತ್ಯಾದಿ ವಿಚಾರ ತಿಳಿದು ಬಂದಿದೆಯೆಂದು ಅವರು ದೂರು ಕೊಟ್ಟಿದ್ದಾರೆ. ಇದು

ಸರಿಯೋ, ತಪ್ಪೋ ಎಂಬುದನ್ನು ಹೇಳುತ್ತಿಲ್ಲ. It is a matter for investigation. But the point is ಆ ದಿವಸ, ನಾನು ಇಲ್ಲಿದ್ದಾಗ ನನಗೆ ಬಂದಿರತಕ್ಕ ಮಾಹಿತಿ, ಎಲ್ಲರೂ ನೋಡಿರತಕ್ಕ ವಿಚಾರ, ಸರ್ಕಾರಿ ಬಂಗಲೆ ಎದುರಿಗೆ ನಡೆದಿರತಕ್ಕ ವಿಚಾರ, ಯಾವ ಪರಿಸ್ಥಿತಿ ಎಂಬುದನ್ನು ತಾವೇ ಹೇಳಿದಿರಿ. ತಮ್ಮನ್ನು ಯಾರೋ ಬಂಗಲೆಯಲ್ಲಿ ಇಟ್ಟಿದ್ದರು ಎಂಬ ವಿಚಾರ. ಅದೇ ಮಾಹಿತಿ ನಮಗೂ ಬಂದಿರತಕ್ಕಂತಾದ್ದು. ನಾನು ಅದಕ್ಕಾಗಿಯೇ ಹೇಳಿದೆ, ಇದು ನಿಜವೇ, ಎಂದು ನನ್ನ ಮನಸ್ಸಿಗೂ ಬಂತು. Why this actually happended ? Why Mr. Ramaiah was taken to Bangalow ? I immediately contacted the police people false information. ಅದು ಹಬ್ಬಿಸಿರುವುದು ಎಂಬ ವಿಚಾರ ನನಗೆ ತಿಳಿದುಬಂತು. Actually I felt happy ನಮ್ಮ ವಿರೋಧಪಕ್ಷದ ಒಬ್ಬ ಮಿತ್ರರು, ಅದು ತಾವೇ ಇರಬಹುದು. ನಾವು ಒಂದು ನೀತಿಯನ್ನು ಅನುಸರಿಸಿಕೊಂಡು ಬಂದಿದ್ದೇವೆ. ಯಾರೇ ಇದ್ದರೂ ಕೂಡ ಸೋಲು ಗೆಲುವು ಪ್ರಶ್ನೆ ಪ್ರತ್ಯೇಕ. After all, it is all in a political game. ನಾಳೆ ಚುನಾವಣೆಯಲ್ಲಿ ಗೆಲ್ಲಬಹುದು, ಸೋಲಬಹುದು. ಇಷ್ಟಾದರೂ ಕೂಡ ಗೆದ್ದಮೇಲೆ, ಪ್ರೀತಿ, ವಿಶ್ವಾಸ ಇದ್ದೇ ಇರುತ್ತದೆ. ಆ ಟೈಮಿನಲ್ಲೂ ಕೂಡ ಇರುತ್ತದೆ, ಎದುರಿಗೆ ಕಂಡಾಗ ಕೂಡ ಇರುತ್ತದೆ. ನಾವು ಚುನಾವಣೆಯನ್ನು ನಡೆಸಿದ್ದೇವೆ, ನೀವು ಚುನಾವಣೆಗಳನ್ನು ನಡೆಸಿದ್ದೀರಿ. ಎಂತಹ ವಿರೋಧಿ ಬಂದರೂ ಕೂಡಾ ಚುನಾವಣೆ ಸಂದರ್ಭದಲ್ಲಿ ಕಾರು ಕೆಟ್ಟರೆ, ನಮ್ಮ ಕಾರಿನ ರೆಡಿಮೇಡ್ ಟೈರುಗಳು, ಅಂದರೆ ಸ್ಟೆಪ್ನಿಯನ್ನು ಕೊಟ್ಟು ಮುಂದಕ್ಕೆ ಹೋಗಿರತಕ್ಕ ರಾಜಕಾರಣವನ್ನು ನಾವೆಲ್ಲರೂ ಮಾಡಿಕೊಂಡೇ ಬಂದಿದ್ದೇವೆ.

ನಾವು ಅಷ್ಟೊಂದು ಅಪಾರ ಗೌರವ ಇಟ್ಟುಕೊಂಡು ಬಂದಿದ್ದೇವೆ. ಒಂದು ಘಟನೆ ಕೂಡಾ ನಡೆದಿರತಕ್ಕಂಥಾದ್ದು ಇಲ್ಲ. ನಾವು ಅಂತಹ ಚರಿತ್ರೆ ಇಟ್ಟುಕೊಂಡು ಬಂದಿದ್ದೇವೆ. ಚುನಾವಣೆಯ ಕಾಲದಲ್ಲಿ ಎಲ್ಲೂ ಕೂಡಾ ಹಾಗೆ ಇರತಕ್ಕಂಥ ಸಂದರ್ಭ ಬಂದರೆ ಕಾರು ನಿಲ್ಲಿಸಿ ವಿರೋಧ ಪಕ್ಷದವರನ್ನು ಕೇಳಿಕೊಂಡು ಮುಂದೆ ಹೋಗಿದ್ದೇವೆ. ಇಷ್ಟು ನೀತಿಯನ್ನು ಇಟ್ಟುಕೊಂಡು ಬಂದಿರತಕ್ಕಂಥವರಿಗೆ ವಿರೋಧ ಪಕ್ಷದ ಮಿತ್ರರಿಗೆ, ಅವರು ಅಭ್ಯರ್ಥಿ ಆಗಿರತಕ್ಕಂಥ ಕಾಲದಲ್ಲಿ ಹಾಗೆ ನಡೆದರೆ ಏನು ಎಂಬುದು ನನ್ನ ಮನಸ್ಸಿಗೆ ಬಂದು. ಇಷ್ಟು ವರ್ಷ ಆ ನೀತಿಯನ್ನು ಅನುಸರಿಸಿಕೊಂಡು ಬಂದು ಇದು ಹೀಗೆ ನಡೆದುಬಿಟ್ಟರೆ ಅದೂ ನಮ್ಮ ಸರಕಾರ ಇದ್ದಾಗ, ಗತಿ ಏನು ಎಂಬ ವಿಚಾರ ನನಗೆ ಬಂದು. Then I got it verified but the truth was otherwise. But it was completely a false rumour which was very much spread in that area. ಅದಕ್ಕಾಗಿ ನನಗೆ ಬಂದಿರುವ ಇನ್‌ಫರ್‌ಮೇಷನ್ ಪ್ರಕಾರ ಜನ ಬೇಕಾದಷ್ಟು ಕತ್ತಿಗಳು ಅಥವಾ ಐರನ್ ಬಾರ್ಸ್ ಮತ್ತೊಂದು ತೆಗೆದುಕೊಂಡು ಬಂದಿದ್ದರು ಇತ್ಯಾದಿ ಇತ್ಯಾದಿ.... ನಾನು ವಿವರಗಳಿಗೆ ಹೋಗುವುದಿಲ್ಲ. ಇದಿಷ್ಟೂ ಕೂಡಾ ವಿಚಾರಗಳು ನನಗೆ ಗೊತ್ತಾಗಿರುವುದು. ಅದಕ್ಕಾಗಿ That's why I said.

ರಮೇಶ್ ವಿಚಾರಕ್ಕೆ ಬಂದ ತಕ್ಷಣ ಹಾಗಿದ್ದರೆ ಹೀಗೆ ನಡೆಯುತ್ತಾ ಹೋದರೆ, ಸಪೋಸ್ ಏನಾದರೂ ಹೆಚ್ಚು ಕಡಿಮೆ ಮಾಡಿ, ಫಾಲ್ಸ್ ರೂಮರ್ ನಂಬಿ ಎಲ್ಲಾದರೂ ಹೊಡೆದು ಬಿಟ್ಟರೆ ಅಲ್ಲಿ ಬಂಗಲೆಯಲ್ಲಿ ಇದ್ದವರು ಯಾರು? ಇವತ್ತು ನಮ್ಮ ಕಡೆಯಲ್ಲಿರತಕ್ಕಂಥವರು, ನಾನು ಹೆಸರು ಹೇಳಿದರೆ ಚೆನ್ನಾಗಿರುವುದಿಲ್ಲ ಎಂಬ ದೃಷ್ಟಿಯಿಂದ ತಾವೂ ಹೇಳಿಲ್ಲ, ನಾನು ಹೇಳುವುದಕ್ಕೆ ಹೋಗುವುದಿಲ್ಲ. ಕಾಂಗ್ರೆಸ್ ಪ್ರೆಸಿಡೆಂಟರು, ಕಾಗೋಡು ತಿಮ್ಮಪ್ಪನವರು ಇದ್ದರು, ಸಚಿವರುಗಳು ಇದ್ದರು, ಪಾರ್ಲಿಮೆಂಟ್ ಮೆಂಬರ್ಸ್ ಇದ್ದರು, ಶಾಸಕರುಗಳಿದ್ದರು, ಇಷ್ಟಾರೆ ಎಲ್ಲರೂ ಸೇರಿ ನೋಡಿರತಕ್ಕ ಒಂದು ಅಭಿಪ್ರಾಯ. ಇದು ಮುಚ್ಚತಕ್ಕಂಥ ವಿಚಾರ ಅಲ್ಲ.

ಆದರ ಅದೇರೀತಿಯಲ್ಲಿ ಬೇರೆ ಪಕ್ಷದವರೂ ಕೂಡಾ, ನಮ್ಮ ಪಕ್ಷದವರೂ ಕೂಡಾ ಅಲ್ಲಿನ ಕಾಂಪೌಂಡ್ ಹತ್ತಿರ ಇದ್ದರು, ಅಲ್ಲಿ ಏನಾಗಿದೆ, ಉಳಿದುಕೊಳ್ಳುವುದಕ್ಕೋಸ್ಕರ ಮರ ಗಿಡ ಸೌದೆ ಗಿಡದ ಎಲ್ಲಾ ಹುದುಕಿದ್ದಾರೆ ಎಂಬ ವಿಚಾರ ಗೊತ್ತಾಯಿತು. ಏತಕ್ಕೆಂದರೆ ಕಬ್ಬಿಣದ ಸಲಾಕಿ ತೆಗೆದುಕೊಂಡು ಬಂದರು ಎಂಬುದನ್ನು ಕೇಳಿ ಈ ರೀತಿ ಮಾಡಿದರು. ಈ ವಿಚಾರ ನನಗೆ ಬಂದಮೇಲೆ ಎಲ್ಲಿದ ರಮೇಶ್

ಅವರ ಪ್ರಶ್ನೆ ಎಂಬುದು ನನಗೆ ಅರ್ಥ ಆಗುವುದಿಲ್ಲ ಎಂಬ ಪ್ರಶ್ನೆ ಕೂಡಾ ಬಂತು. ನಮ್ಮ ನಮ್ಮಲ್ಲಿ ವಿಚಾರಗಳು ಬಂತು, ಗನ್ ಮ್ಯಾನ್ ಗುಂಡು ಹಾರಿಸಿದಕ್ಕೆ ವಿಚಾರ ಮತ್ತೊಂದು ಬಂತು. These are all the matters I cannot vouch at this stage. Whether that was a fact or not, it is all the matter for complete investigation. That's why I said at the outset, better leave all the details to the area of investigation. Let us accept this. This is the legal position.

ಬಹಳ ಸ್ಪಷ್ಟವಾಗಿ ಒಂದು ಮಾತನ್ನು ಹೇಳಿದ್ದಾರೆ. ಏನೆಂದರೆ, ಇವತ್ತು ರಮೇಶ್ ಅವರನ್ನು ಅರೆಸ್ಟ್ ಏತಕ್ಕೆ ಮಾಡಲಿಲ್ಲ ಎಂದು ? This is the main reason why we did not initiate any action aggainst Mr. Ramesh.

ಇದು ಒಂದು ಕಾರಣ ಕೂಡಾ ಬಂತು. ಆದರೆ ರಾತ್ರಿ ಎಲ್ಲಾದರೂ ಒಂದು ಹಳ್ಳಿಯಲ್ಲಿ ನಡೆದಿದ್ದರೆ ಅಥವಾ ಅಲ್ಲೇ ರಾತ್ರಿ ನಡೆದಿದ್ದರೆ ಯಾರೂ ಜನ ಇಲ್ಲದಿದ್ದರೆ ಅದು ಏನಾದರೂ ನಿಜ ಎಂಬ ಅನುಮಾನ ಕೂಡಾ ಬಂದಿದ್ದರೆ then there lies some truth, semblance of truth.

ಸ್ವಲ್ಪವಾದರೂ ಇರಬೇಕು. ಕಂಪ್ಲೇಂಟ್ ಬಂದ ತಕ್ಷಣ ಅರೆಸ್ಟ್ ಮಾಡುವುದಕ್ಕೆ ಹೋಗಿಬಿಟ್ಟರೆ ನಾನು ಕೇಳುತ್ತೇನೆ. it will become a never ending business.

ಶ್ರೀ ಕಾಗೋಡು ತಿಮ್ಮಪ್ಪ : ಪೊಲಿಟಿಕಲ್ ಮೋಟಿವೇಷನ್ ಇರಬಹುದು.

ಶ್ರೀ ಎಸ್. ಬಂಗಾರಪ್ಪ : ನಾಳೆ ಕಂಪ್ಲೇಂಟ್ ಬಂದ ತಕ್ಷಣ ಅರೆಸ್ಟ್ ಮಾಡುತ್ತಾ ಹೋದರೆ ಯಾರೂ ಕೂಡಾ ಉಳಿಯುವುದಿಲ್ಲ ಅನ್ನತಕ್ಕ ಮಾತು....

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ಹೊಸ ಪುಸ್ತಕ ಬರೆಸಿಬಿಡಿ, ನಾವೆಲ್ಲಾ ಓದಿಕೊಂಡು ಕೋರ್ಟ್‌ಗೆ ಹೋಗುತ್ತೇವೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಯಡಿಯೂರಪ್ಪನವರೇ, ಸ್ವಲ್ಪ ತಾಳಿ, ಅರ್ಜೆಂಟ್ ಏತಕ್ಕೆ? ಅವರು ಹೋಗುತ್ತಾರೆ ಎಂದು ನೀವು ಏತಕ್ಕೆ ಹೋಗುತ್ತೀರಿ ?

MR. SPEAKER : Order, Order

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಅವರು ಹೋಗುವುದಕ್ಕೋಸ್ಕರ ರೆಡಿಯಾಗಿ ಬಂದಿದ್ದಾರೆ; ನೀವು ಏತಕ್ಕೆ ಹೋಗುತ್ತೀರಿ? ಅವರು ಅರ್ಜೆಂಟಾಗಾ ಸಭಾತ್ಯಾಗ ಮಾಡುವುದಕ್ಕೆ ತುದಿಗಾಲಲ್ಲಿ ನಿಂತಿದ್ದಾರೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಭಾನಾಯಕರೇ.......

ಶ್ರೀ ಎಸ್. ಬಂಗಾರಪ್ಪ : ಸ್ವಲ್ಪ ಒಂದು ನಿಮಿಷ, ನಾನು ಮುಗಿಸಿಬಿಡುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಭಾನಾಯಕರೇ, ನಾನೂ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಇರಬಹುದು ನಾನು ಇನ್ನೂ ಪೂರ್ತಾ ಹೇಳಿಕೊಟ್ಟಿಲ್ಲ. ತಾಳಿ.

ಶ್ರೀ ಡಿ.ಬಿ. ಚಂದ್ರೇಗೌಡ : ಕೆಲವು ಕ್ಲಾರಿಫಿಕೇಷನ್ಸ್ ಬೇಕಾಗಿದೆ.

ಶ್ರೀ ಎಸ್. ಬಂಗಾರಪ್ಪ : ನಾನು ಇನ್ನೂ ಪೂರ್ತಿಯಾಗಿ ಹೇಳಿಲ್ಲ, ತಾಳಿ. ನೀವು ಆಮೇಲೆ ಕೇಳುವಿರಂತೆ. ನಾನು ಉತ್ತರ ಕೊಡುತ್ತೇನೆ. ಅದರ ಬಗ್ಗೆ ತಮಗೆ ಏನೂ ಅನುಮಾನ ಬೇಡ. ಅನಂತರ ಇದರಲ್ಲಿ ಈ ವಿಚಾರ ಬಂದುದ್ದರಿಂದ ರಮೇಶ್ ಅವರನ್ನು ಅರೆಸ್ಟ್ ಮಾಡತಕ್ಕ ಪ್ರಶ್ನೆ ಬಂದಿಲ್ಲ. ಅಂಡ್ ಮೋರ್ ಓವರ್, ಈಗ ನೀವು ಏತಕ್ಕೆ ಅರೆಸ್ಟ್ ಮಾಡಬಾರದು ಎಂಬ ವಿಚಾರ ಬೆಳಿಗ್ಗೆ ಯಾರೋ ಹೇಳಿದರು ಎಂಬ ವಿಚಾರ ನನಗೆ ಗೊತ್ತಾಯಿತು. I am sorry, I have not gone throug the proceedings.

ಒಂದೇ ಒಂದು ವಿಚಾರ. What is the purpose of the arrest ? The purpose of the arrest is, if a person against whom a complaint is made and try to escape out of the clutches of the rules of law or the existing law, there comes immediate action to be initiated.

(INTERRUPTIONS)

ಶ್ರೀ ಎಸ್. ಬಂಗಾರಪ್ಪ : ಇವತ್ತು ಎಲ್ಲಿದೆ ಇಲ್ಲಿ ? ಯಾವ ವಿಚಾರ ಇದೆ ? ಸ್ವಲ್ಪ ತಾಳಿ ತಾಳಿ, ಸ್ವಲ್ಪ ತಾಳಿ ಬೈರೇಗೌಡರೇ.

(ಗೊಂದಲ)

MR. SPEAKER : Unless he obliges you by yielding, you cannot continue.

SRI. D.B. CHANDREGOWDA : Let him conduct a class in Criminal Procedure code so that we can all attend it.

ಶ್ರೀ ಎಸ್. ಬಂಗಾರಪ್ಪ : ಆಮೇಲೆ ಇಲ್ಲಿರತಕ್ಕಂಥ ವಿಚಾರ ಇಷ್ಟೇ.

SRI. R.V. DESHPANDE : I can understand. ತಾವು ಹೀಗೆ ಹೇಳಬಹುದು. ಒಂದು ವೇಳೆ Prima facie case.... ಅವರು ಎಲ್ಲಿ ಓಡಿ ಹೋಗುವುದಿಲ್ಲ ಅದರ ಸಲುವಾಗಿ ಅರೆಸ್ಟ್ ಮಾಡಿಲ್ಲ. That is not the condition. I cannot understand your fear. See in a Criminal law, when a complaint is filed, there is a prima facie case, immediate arrest will have to be mad.

SRI. S. BANGARAPPA : That's the point. ಅಲ್ಲಿಗೇ ನಾನು ಬರುತ್ತಿದ್ದೆ. ಇವತ್ತು ದೂರು ಕೊಟ್ಟ ತಕ್ಷಣ ಅರೆಸ್ಟ್ ಮಾಡಿದರೆ ಅದಕ್ಕೆ ಕೊನೆಯೇ ಇಲ್ಲ. ಎನ್ನತಕ್ಕಂಥ ಮಾತನ್ನು ನಾನು ಹೇಳಿದ್ದು ಅದೇ ಉದ್ದೇಶದಿಂದ. ತಮ್ಮ ಕಡೆಯಿಂದ ಬರಲಿ ಬರಲಿ ಚರ್ಚೆ ಆಗುತ್ತಾ ಆಗುತ್ತಾ ಹಾಗೆ ಬರಲಿ ಅಂತ ಪ್ರೈಮಾಫೇಸಿ ಅದು ಮೇಕ್ ಔಟ್ ಆಗದೆ ಇದ್ದರೆ there is no end for all these things ಎನ್ನತಕ್ಕಂಥ ಮಾತನ್ನು ಆಡಿ ಅದೇ ಅಭಿಪ್ರಾಯ ಇಟ್ಟೇ ನಾನು ದೇಶಪಾಂಡೆಜೀ ಹೇಳಿರತಕ್ಕಂಥ ಒಂದು ಅಭಿಪ್ರಾಯ. ಏಕೆಂದರೆ ಎಲ್ಲರೂ ಕೂಡ ನೋಡಿದ್ದಾರೆ. ನೋಡಿರತಕ್ಕಂಥ ವಿಚಾರ. ಹೆಚ್ಚುಕಡಿಮೆ ಆದರೆ ನಾಳೆ ಲೀಡರ್ಸ್‌ಗೆಲ್ಲಾ ಪೆಟ್ಟು ಬಿದ್ದು ಅವರು ಸತ್ತುಹೋದರೆ ಅವರ ಮೇಲೆ ಬರದು ಕೊಡುತ್ತಾ ಹೇಳಿಕೊಂಡರೆ ಏನು ಎನ್ನತಕ್ಕಂಥ ವಿಚಾರ ಕೂಡ ನನ್ನನ್ನು ಕೇಳಿದರು. ಫಾರ್ ಇನ್‌ಫರ್‌ಮೇಷನ್ ಏಕೆಂದರೆ ತಾವು ಇದೇ ಜಾಗದಲ್ಲಿ ಇದ್ದವರು. ಇವತ್ತು ನಾನು ಇರುತ್ತೇವೆ ಹೋಗುತ್ತೇವೆ. ಏಕೆಂದರೆ ಫ್ರೀ ಆಗಿ ನಾವು ರಾಜಕಾರಣದಲ್ಲಿ ಮೂವ್ ಆಗುತ್ತಿರುತ್ತೇವೆ. ನಾವು ನೀವು ಯಾವಾಗಲೂ ಫ್ರೀ ಆಗಿ ಮೂವ್ ಆಗುತ್ತಿರುತ್ತೇವೆ. ಒಂದೊಂದು ಸಾರಿ ಇವೆಲ್ಲಾ ನಡೆದುಹೋಗುತ್ತವೆ. ಆವಾಗ ಗತಿ ಏನಾಗುತ್ತದೆ ಎನ್ನತಕ್ಕಂಥ ವಿಚಾರ. ಪ್ರೈಮಾಫೇಸಿಯಾಗಿದ್ದರೆ ಮಾತ್ರ ನಮಗೆ ಆ ಕಾಲದಲ್ಲಿ ನಾನು ಹೇಳತಕ್ಕಂಥಾದ್ದು ಪ್ರೈಮಾಫೇಸಿಯಾಗಿ ಬರಲಿಲ್ಲ ಎನ್ನತಕ್ಕಂಥ ದೃಷ್ಟಿಯಿಂದ ನಾನು ಸ್ಟೇಟ್‌ಮೆಂಟ್ ಕೊಟ್ಟಿರತಕ್ಕಂಥಾದ್ದು. ಈ ಸಂದರ್ಭದಲ್ಲಿ....

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ...

ಶ್ರೀ ಎಸ್. ಬಂಗಾರಪ್ಪ : ನಾನು ಈಲ್ಡ್ ಆಗಿಲ್ಲ. I am sorry, I have not yielded.

MR. SPEAKER : Unless he yields, I cannot help you.

ಶ್ರೀ ಎಸ್. ಬಂಗಾರಪ್ಪ : ಲಾ ಸೆಕ್ರೆಟರಿಯಾಗಲೀ, ಅಡ್ವೋಕೇಟ್ ಜನರಲ್ ಆಗಲಿ, ಇವರೆಲ್ಲಾ ಏನು ಮಾಡುತ್ತಿದ್ದರು. ಇವರು ಅಡ್ವೈಸ್ ಸರಿಯಾಗಿ ಮಾಡಲಿಲ್ಲವೇ ? ಅವರಿಗೆ ಸರಿಯಾಗಿ ಬುದ್ಧಿ ಇಲ್ಲವೇ ಇತ್ಯಾದಿ ಇತ್ಯಾದಿ ಮಾತುಗಳು ತಾವು ಬರುವುದಕ್ಕಿಂತ ಮುಂಚಿತವಾಗಿ ಇದನ್ನೆಲ್ಲಾ ಆಡಿದ್ದಾರೆ.

ನಾನು ಹೇಳುತ್ತೇನೆ. ನೀವು ತೆಗೆದುಕೊಂಡು ಹೋಗಿ ಅಡ್ವೋಕೇಟ್ ಜನರಲ್ ಆಧ ತಕ್ಷಣ ಇನ್‌ವೆಸ್ಟಿಗೇಷನಲ್ಲಿ ಇಂಟರ್‌ಫಿಯರ್ ಆಗುವುದಕ್ಕೆ ಬರುವುದಿಲ್ಲ. ಲಾ ಸೆಕ್ರೆಟರಿ ಆದ ತಕ್ಷಣ ಇಂಟರ್‌ಫಿಯರ್ ಆಗುವುದಕ್ಕೆ ಬರುವುದಿಲ್ಲ. ಬೇಡ, I am the Chief Minister, whether you are here; I am here, or anybody else is here, as the Chief Minister can I say that I can go and interfere in the proper investigation of a case? I cannot do that legally.

ಆವಾಗ ಏನಾಗುತ್ತದೆ ನೋಡಿ, ನಿಮ್ಮ ಲಾ ಸೆಕ್ರೆಟರಿ ಇಂಟರ್‌ಪಿಯರ್ ಆಗಿದ್ದಾರೆ, ಅಡ್ವೋಕೇಟ್ ಜನರಲ್ ಇಂಟರ್‌ಪಿಯರ್ ಆಗಿದ್ದಾರೆ ಎಂದು ನಾಳೆ ತಾವೇ ಹೇಳುವುದಕ್ಕೆ ಒಂದು ಕಾರಣ ಕೂಡ ಬಂದು ಬಿಡುತ್ತದೆ. ಇದಕ್ಕೆ ಅವಕಾಶವನ್ನು ಎಂದೂ ಕೂಡ ಕೊಡಬಾರದು. ಆಮೇಲೆ ಮಾನ್ಯ ರಾಮಯ್ಯನವರು ಹೇಳಿದರು. ಜಯಪ್ರಕಾಶ್ ನಾರಾಯಣರ ಆ ಕಾಲದಲ್ಲಿ ಅವರ ಕಾರಿನಲ್ಲಿ ಲಿಟರೇಚರ್ ಇತ್ತು ಎಂದು ಹೇಳಿದರು. That matter has no bearing at all on the matter. I do not know what exactly was the ground for your arrest, at that time if at all you were arrested. I do not know all those things.

ನನಗೆ ಗೊತ್ತಿಲ್ಲ, ವಿವರ ಏನು ಆ ಕೇಸ್ ಏನು ಅಂತ ನನಗೆ ಗೊತ್ತಿಲ್ಲ. ಆ ವಿಚಾರ ಕೂಡ ನಮ್ಮಗ್ಯಾರಿಗೂ ಕೂಡ ಗೊತ್ತಿಲ್ಲ. ಇಲ್ಲಿ ಸರ್ಕಾರ ಸುಮ್ಮನೆ ಕುಳಿತಿದೆ ಎಂದರು. ಸರ್ಕಾರ ಸುಮ್ಮನೆ ಕುಳಿತಿಲ್ಲ. ತಾವು ಕೂಡ ಫೇರ್ ಆಗಿ ಒಂದು ಮಾತು ಹೇಳಿದಿರಿ. ಇನ್‌ವೆಸ್ಟಿಗೇಷನ್‌ನಲ್ಲಿ ನಾನು ಇಂಟರ್‌ಪಿಯರ್ ಆಗುವುದಿಲ್ಲ. ಎನ್ನತಕ್ಕಂಥ ಮಾತನ್ನು ಅವರೂ ಕೂಡ ರಾಮಯ್ಯನವರು ಫೇರ್ ಆಗಿ ಹೇಳಿದ್ದಾರೆ. In other words, investigation, lawful investigation under the rule of law or law of the land is on ಎನ್ನತಕ್ಕಂಥದ್ದನ್ನು ತಾವು ಒಪ್ಪಿಕೊಂಡಿದ್ದಕ್ಕೆ ನಾನು ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇನ್‌ವೆಸ್ಟಿಗೇಷನ್ ಆನ್ ಇದೆ ಅಂತ ಅಂದರೆ, ಜುಡಿಷಿಯಲ್ ಎನ್‌ಕ್ವೈರಿಗೆ ಡಿಸಿಷನ್ ನಾವು ತೆಗೆದುಕೊಂಡಿದ್ದೇವೆ. ಅಂತ ಅಂದರೆ what does it mean ? ಸರ್ಕಾರ ಗಾಂಭೀರ್ಯದಿಂದ ಕೈಕಟ್ಟಿ ಕುಳಿತುಕೊಂಡಿದೆ ಎನ್ನತಕ್ಕಂಥಾದ್ದನ್ನು ಅಕ್ಕಪಕ್ಕದಲ್ಲಿ ಹೇಳುತ್ತಾ ಹೋದರೆ ಅದಕ್ಕೆ what kind of ground or inference you can draw ಎನ್ನತಕ್ಕಂಥಾದ್ದನ್ನು ಈ ಸಂದರ್ಭದಲ್ಲಿ ತಮಗೇ ಬಿಡುತ್ತೇನೆ. ಅನಂತರ ಮುಂದೆ ನಾನು ವಿವರಗಳಿಗೆ ಹೋಗುವುದಿಲ್ಲ ಏಕೆಂದರೆ I have also got little knowledge about the criminal law. ನನಗೆ ಗೊತ್ತಿರುವ ಹಾಗೆ. ಒಬ್ಬ ವ್ಯಕ್ತಿ ಬಂದು ಬಿಟ್ಟರೆ ನಾಳೆ ನಾವು ತಲೆ ಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕೆ ಬರುವುದಿಲ್ಲ. ಯಾರಿಗೂ ಬರುವುದಿಲ್ಲ. That is also part of the same law of the land. ಕ್ರಿಮಿನಲ್ ಲಾ ತಮಗೆಲ್ಲಾರಿಗೂ ಗೊತ್ತಿರುವ ಹಾಗೆ right of self defence is available to you but to what extent you can exercise that; that is a matter for details. I do not want to go to the details of the matter. But, ಲೀಗಲ್ ಪೊಸಿಷನ್ ತಾವು ನೋಡಿದಾಗ right of self defence is available for any person.

ಹಾಗೇನಾದರೂ ಬಂದಿದ್ದರೆ ಈ ಕೇಸ್‌ನಲ್ಲಿ ವಿವರಗಳು ಏನು ಎನ್ನತಕ್ಕಂಥಾದ್ದಕ್ಕೆ ನಾನು ಹೋಗುವುದಿಲ್ಲ ಏಕೆಂದರೆ ತಾವು ಹೇಳಿದ್ದರಿಂದ ಅದನ್ನು ಸುಮ್ಮನೆ ಸಾಂಧರ್ಭಿಕವಾಗಿ ಪ್ರಸ್ತಾಪ ಮಾಡುತ್ತಿದ್ದೇನೆ. ನಾನು ಅದನ್ನು ಅಲ್ಲಿಗೆ ಬಿಡುತ್ತೇನೆ. ಇನ್ನು ಅರೆಸ್ಟ್ ಏತಕ್ಕಾಗಿ ಮಾಡಲಿಲ್ಲ ಮತ್ತೊಂದು ಎನ್ನುವುದಕ್ಕೆ ನಾನು ಇಷ್ಟೇ ಹೇಳುವುದು. The moment the information is received by the Police, that itself is not sufficient. That information should be a credible information.

ಅದರ ಬಗ್ಗೆ ಬೇಕಾದಷ್ಟು ಜಡ್ಜ್‌ಮೆಂಟ್‌ಗಳಿವೆ. ಸುಪ್ರೀಮ್ ಕೋರ್ಟ್‌ದೂ ಇದೆ. ಹೈಕೋರ್ಟ್‌ನಲ್ಲಿ ಇದ್ದಾವೆ. ಕ್ರೆಡಿಬಲ್ ಇನ್‌ಫರ್ಮೇಷನ್, ಅದಕ್ಕೆ ಕ್ರೆಡಿಬಿಲಿಟಿ ಬರಬೇಕು. ಇಲ್ಲವೆಂದು ನಾನು ಹೇಳಿದ ಹಾಗೆ ಬರೀ ಕಂಪ್ಲೇಂಟ್ ಕೊಡುವುದು, ಹಾಗೇ ಸ್ಟಾರ್ಟ್ ಆಗಿಬಿಡುತ್ತದೆ ಎನ್ನುವ ಹೆದರಿಕೆ ನಮ್ಮ ಮನಸ್ಸಿನಲ್ಲೂ ಕೂಡಾ ಅದು ಇರುತ್ತದೆ. ಆಮೇಲೆ ಒಬ್ಬ ವ್ಯಕ್ತಿ ಮೇಲೆ ದೂರ ಬಂದತಕ್ಷಣ ಸುಮ್ಮನೆ ಅರೆಸ್ಟ್ ಮಾಡುವುದು ಕೂಡಾ ಅಲ್ಲ. ಸಸ್ಪೀಷನ್ ಮೇಲೆ ಮಾಡುವುದಕ್ಕೆ ಹೋಗಬಾರದು. But is

ಅದಕ್ಕೆ ಇರಬೇಕಾಗುತ್ತದೆ. ಅದು ಇದ್ದಾಗ ಮಾತ್ರ ಮಾಡಬಹುದು. ಇಲ್ಲಿ ಪೊಲೀಸ್ ಆಫೀಸರ್ ಮಾಡಿಬಿಟ್ಟರೆ ಏನಾಗುತ್ತದೆಂದರೆ he has acted wilfully. He has acted against the law. ಇವೆಲ್ಲಾ ವಿಚಾರ ಕೂಡಾ ಬಂದುಬಿಡುತ್ತದೆ. ಆಗ ಜಸ್ಟೀಸ್ ಎಲ್ಲಿ ಹೋಗುತ್ತದೆ ಅನ್ನತಕ್ಕಂಥ ವಿಚಾರದ ಬಗ್ಗೆ ಕೂಡಾ ನಾವು ಗಮನಹರಿಸಬೇಕಾಗುತ್ತದೆ. ಮಾನ್ಯ ಸಭಾಧ್ಯಕ್ಷರೇ, ಈ ಸಂದರ್ಭದಲ್ಲಿ ಮೊದಲೇ ಹೇಳಿದ ಹಾಗೆ ವಿವರಗಳ ಬಗ್ಗೆ ಮತ್ತೆ ನಾನು ಹೋಗುವುದಿಲ್ಲ. ಇದರಲ್ಲಿ ಅಲ್ಲಿ ಲಾಠಿ ಚಾರ್ಜ್ ಮಾಡಿರತಕ್ಕಂಥಾದ್ದು, ಗಾಳಿಯಲ್ಲಿ ಗುಂಡು ಹಾರಿಸಿರತಕ್ಕಂಥಾದ್ದು. ಇದು ಕೂಡಾ ನಮ್ಮ ಗಮನಕ್ಕೆ ಬಂದಿವೆ. ಅದು ಕೂಡಾ ನಾಳೆ ಜುಡಿಷಿಯಲ್ ಎನ್‌ಕ್ವೈಯರಿಯಲ್ಲಿ ಯಾವ ರೀತಿ ಮಾಡುತ್ತಾರೆ ? ಅದನ್ನು ಕೂಡಾ ಅವರು ಗಮನಕ್ಕೆ ತೆಗೆದುಕೊಳ್ಳಲಿ. ಅನಂತರ ಕೇಸ್, ಇದರ ಬಗ್ಗೆ ಕೂಡ ರಿಜಿಸ್ಟರ್ ಆಗಿದೆ. ಅಲ್ಲಿ ಬಂದಿರತಕ್ಕಂಥ ವಿಚಾರ, ಗಲಾಟೆ ಮಾಡಿರತಕ್ಕಂಥಾದ್ದು, ಕ್ರೈಮ್ ನಂ. 114, 92 ಸೆಕ್ಷನ್ 143, 147, 148, 353, 352, 427, 506, 149 of the Indian Penal Code.

ಅದು ಕೂಡಾ ಸ್ವತಃ ಪೊಲೀಸರು ಈ ಕೇಸನ್ನು ದಾಖಲು ಮಾಡಿಕೊಂಡಿದ್ದಾರೆ. ನಡೆದಿರತಕ್ಕಂಥ ಘಟನೆ ಬಗ್ಗೆ ಸುವೋ–ಮೋಟೋ ವಿಚಾರ ಕೂಡಾ ಮಾಡಿದ್ದಾರೆ. ಅನಂತರ ಸೆಕ್ಷನ್ 302ರ ಪ್ರಕಾರ ತಾವು ಹೇಳಿದ ಹಾಗೆ ಏನು ಕಂಪ್ಲೇಂಟ್ ಕೊಟ್ಟಿದ್ದಾರೆ ? ಲಕ್ಷ್ಮಮ್ಮನವರು, ಅವರ ಕಂಪ್ಲೇಂಟ್ ಮೇಲೆ ಕೇಸ್ ದಾಖಲು ಮಾಡಿರತಕ್ಕಂಥ ವಿಚಾರ ಕೂಡಾ ತಮಗೆ ಗೊತ್ತಿದೆ. ಇಷ್ಟಾದರೂ ಕೂಡಾ ನಾನು ಮೊದಲೇ ಹೇಳಿದ ಹಾಗೆ ಮಾನ್ಯ ಸಭಾಧ್ಯಕ್ಷರೇ, ನಾವು ಇನ್‌ವೆಸ್ಟಿಗೇಷನ್‌ಗೆ ಕೊಟ್ಟಿರತಕ್ಕಂಥಾದ್ದು ಪೊಲೀಸ್ ಸೂಪರಿಂಟೆಂಡೆಂಟ್ ಗ್ರೇಡಿನ ಒಬ್ಬರಿಗೆ. ಇದಕ್ಕೆ ಜವಾಬ್ದಾರಿ ಇದೆ. ಒಳ್ಳೆಯ ಫೇರ್ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ ಎನ್ನುವ ಮಾತನ್ನು ಮಾತನ್ನು ಹೇಳಬಲ್ಲೆ. ಇನ್ನು ವಿವರಗಳಿಗೆ ಹೋಗತಕ್ಕಂಥಾದ್ದು ಸಾಧುವಲ್ಲ ಅನ್ನತಕ್ಕಂಥ ಅಭಿಪ್ರಾಯದ ಹಿನ್ನೆಲೆಯಲ್ಲಿ, ತಾವು ಹೇಳಿದ್ದಂಥಾದ್ದನ್ನು ಮೆಚ್ಚುತ್ತೇನೆ. ನಾವು ಕೂಡಾ ಅದೇರೀತಿ ಇರುತ್ತೇವೆ. Let us not interfere with the lawful investigation.

ಅದು ಮುಂದೆ ಯಾವ ರೀತಿ ಬರುತ್ತದೋ ಬಂದಾಗ ಅದನ್ನು ವಿಚಾರ ಮಾಡಬೇಕೇ ವಿನಃ ಬೇರೆ ಏನೂ ಇಲ್ಲ. ನಾಳೆ If the investigation discloses that prima facie case is made out against Mr. Ramesh, the Government will never hesitate to take action as per law irrespective of whether it is Ramesh or someone else. Law is same for everbody. All are equal before the law. I cannot think of propounding an another law other than the one we are practising in our land.

ಇಷ್ಟು ಮಾತ್ರ ಹೇಳಬಲ್ಲೆ. ಮಾನ್ಯ ಸಭಾಧ್ಯಕ್ಷರೇ, ಇದ್ದ ವಿಚಾರ ನಾನು ಹೇಳಿದ ಮೇಲೆ ಹೈಕೋರ್ಟ್‌ನಿಂದ ನ್ಯಾಯಾಂಗ ವಿಚಾರಣೆ ಆಗುತ್ತದೆ. ಆ ವಿಚಾರ ಬಂದ ತಕ್ಷಣ ಅಂಥ ಮಾತನ್ನು ಹೇಳಿದ್ದೇನೆ. Lawful investigation is on.

ಅಂದಮೇಲೆ ಫರ್ದರ್ ಇದರ ಬಗ್ಗೆ ಹೆಚ್ಚಿನ ರೀತಿ ಮಾತನಾಡತಕ್ಕಂಥಾದ್ದು ಅಷ್ಟು ವಿಧಿತವಲ್ಲ ಅನ್ನತಕ್ಕಂಥ ಮಾತನ್ನು ಹೇಳಿದ್ದೇನೆ. I hope, the Hon. Leader of the opposition will

agree with this view. They may not throw much light on the other aspect of lawful investigation. Thank you very much.

ಶ್ರೀ ವೈ.ಕೆ. ರಾಮಯ್ಯ : ಸನ್ಮಾನ್ಯ ಅಧ್ಯಕ್ಷರೆ, ನಾನು ಮುಖ್ಯಮಂತ್ರಿಗಳಿಗೆ ಋಣಿಯಾಗಿದ್ದೇನೆ. ಅವರು ಬಹಳ ತೊಂದರೆ ತೆಗೆದುಕೊಂಡು ಉತ್ತರ ಕೊಟ್ಟಿದ್ದಾರೆ. ಅವರ ವಾದ ಸರಣಿಯನ್ನು ಬಹಳ ಗಂಭೀರವಾಗಿ ನಾನು ಆಲಿಸಿದ್ದೇನೆ. There is no prima facie case to arrest the accused. If I am correct, this was the whole crux of the argument of the Hon. Chief Minister. ಏತಕ್ಕಾಗಿ ಅರೆಸ್ಟ್ ಮಾಡಲು ಆಗಲಿಲ್ಲ ಎಂಬುದಕ್ಕೆ ಅವರು ಕೊಟ್ಟಂತಹ ಕಾರಣ because there is no prima facie, we Can't arrest. ಇನ್ನುಮೇಲೆ ಈ ರಾಜ್ಯದಲ್ಲಿ ಇದು ಒಂದು ಕಾನೂನು; ಈ ಕಾನೂನು ಎಲ್ಲರಿಗೂ ಜಾರಿಯಾಗಬೇಕು. ಪ್ರೈಮಾಫೇಸಿ ಕೇಸ್ ಎಸ್ಟಾಬ್ಲಿಷ್ ಆಗುವವರೆಗೂ 302ರ ಪ್ರಕಾರ ಕೇಸ್ ರಿಜಿಸ್ಟರ್ ಆಗಿದ್ದರೂ ಕೂಡ ಯಾರನ್ನೂ ಅರೆಸ್ಟ್ ಮಾಡುವ ಹಾಗಿಲ್ಲ. ಇದು ಈ ರಾಜ್ಯದ ಕಾನೂನು ಆಗುವುದಾದರೆ ನನ್ನದು ಅಭ್ಯಂತರವಿಲ್ಲ. That is No. 1. Then No. 2 is ....

ಶ್ರೀ ಕಾಗೋಡು ತಿಮ್ಮಪ್ಪ : ರಾಮಯ್ಯನವರೇ, ಕ್ರಿಮಿನಲ್ ಲಾಯರ್ ಆಗಿ ನೂರಾರು ಕೇಸ್ ನಡೆಸಿದ್ದೇನೆ ಎಂದು ಹೇಳುತ್ತೀರಿ, ಯಾವಾಗ ಅರೆಸ್ಟ್ ಮಾಡಬೇಕೆಂದು ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿದೆ.

ಶ್ರೀ ವೈ.ಕೆ. ರಾಮಯ್ಯ : ಅದನ್ನೇ ಹೇಳುತ್ತಿದ್ದೇನೆ.

SRI KAGODU THIMMAPPA : It is for the investigation officer to decide to take anybody into custody or arrest. It is none of our business.

ಶ್ರೀ ವೈ.ಕೆ. ರಾಮಯ್ಯ ಅದನ್ನೇ ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಅವರು ಏನು ಹೇಳಿದರು, ಕ್ರೆಡಿಬಲ್ ಇನ್‌ಫರ್ಮೇಷನ್ ಅಲ್ಲ, ಅವರಿಗೆ ಅಧಿಕಾರ ಇಲ್ಲ ಎಂದು.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಕ್ರೆಡಿಬಲ್ ಇನ್‌ಫರ್‌ಮೇಷನ್ ಅಲ್ಲ ಎಂದು ಹೇಳುವುದಕ್ಕೆ ಇವರು ಯಾರು ? ಇನ್‌ವೆಸ್ಟಿಗೇಷನ್ ಆಫೀಸರ್ ಯಾರು ಇದ್ದಾರೆ, ಅವರಿಗೆ ಬಿಟ್ಟಿರತಕ್ಕ ವಿಚಾರ ಇದು.

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ : ನಾನು ಯಾವುದನ್ನೂ ಸ್ವತಃ ಹೇಳುತ್ತಿಲ್ಲ. ಇಲ್ಲಿ ಕಾನೂನಿನಲ್ಲಿ ಬರೆದಿದ್ದನ್ನು ಮಾತ್ರ ಓದುವುದಕ್ಕೆ ಇಷ್ಟಪಡುತ್ತೇನೆ.

(ಗೊಂದಲ)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ಅವರಿಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ; ನನಗೆ ಒಂದು ಸಂಶಯ ಬರುತ್ತದೆ. ಮಾನ್ಯ ರಾಮಯ್ಯನವರೇ, ತಾವು ಒಂದು ನಿಮಿಷ ಯೀಲ್ಡ್ ಆದರೆ . . .

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏನೂ ಹೊಸ ವಿಚಾರ ಇಲ್ಲ. ಹಳೆಯದನ್ನೇ ಹೇಳುತ್ತಿದ್ದೇನೆ. ನಾನು ಒಂದು ಪ್ರಶ್ನೆ ಕೇಳುತ್ತೇನೆ. ಮಾನ್ಯ ರಾಮಯ್ಯನವರು ಬಹಳ ಡೀಟೇಲ್ ಆಗಿ ಹಿಂದೆ ನಾವು ಮಾತನಾಡಿದ್ದು ಕೂಡ ಹೇಳಿದರು. ಈಗಲೂ ಕೂಡ ಸಿ.ಆರ್.ಪಿ.ಸಿ. ಹಾಗೂ ಅನೇಕ ಜಜ್‌ಮೆಂಟ್ ರೆಫರ್ ಮಾಡಿ ಹೇಳಿದರು. ನಾನು ಒಪ್ಪಿಕೊಳ್ಳುತ್ತೇನೆ. ಅವರು ಇನ್ನೂ ಒಂದು ಮಾತನ್ನು ಹೇಳಿದರು. ಏನೆಂದರೆ, ಗಂಗಯ್ಯ ಎಂಬುವರ ಕೊಲೆ ಆದಮೇಲೆ ಫಸ್ಟ್ ಇನ್‌ಫರ್‌ಮೇಷನ್ ರಿಪೋರ್ಟ್ ಇರಬೇಕಾಗಿತ್ತು ಅಥವಾ ಯಾರ ಮೇಲೆ ಕಂಪ್ಲೈಂಟ್ ಇರಬೇಕಾಗಿತ್ತು, ಅದನ್ನು ಕೊಟ್ಟಾದ ಮೇಲೆ ಆ ಹೆಣ್ಣು ಮಗಳನ್ನು ನಾನೇ ಕರೆಸಿದೆ. ಅವಳು ಮೂಗಿ ಇದ್ದಳು. ಈ ರೀತಿಯಾಗಿ ಬರೆಯಬೇಕು ಎಂದು

ಕಂಪ್ಲೈಂಟ್ ಎಲ್ಲಾ ಕೂಡ ಬರೆಸಿ ಕೊಟ್ಟು ಕಳಿಸಿದೆ ಎನ್ನತಕ್ಕ ಮಾತನ್ನು ಹೇಳಿದರು. ಇದರ ಅರ್ಥ ಏನು ಅಂದರೆ He has taken lot of interest on behalf of that dumb lady.

ಅಂದರೆ ಇಲ್ಲೂ ಕೂಡ ಇದರ ಹಿಂದೆ ಏನಾದರೂ ಇಂಟೆನ್‌ಷನ್ ಇದೆ ಎನ್ನತಕ್ಕದ್ದು ಸಾಬೀತು ಆಗುತ್ತದೆ. ಅಂದರೆ ಪೊಲಿಟಿಕಲ್ ಮೋಟಿವೇಟೆಡ್ ಎನ್ನುವುದನ್ನು ನಾನು ಇಲ್ಲಿ ಸ್ಪಷ್ಟಪಡಿಸಬೇಕಾಗುತ್ತದೆ. Othersise, law would have taken its own course, irrespective of whether it is Ramesh or somebody else.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಆಫೀಸರ್ ಇಂಪಾರ್ಷಿಯಲ್ ಎಂದು ಅವರೇ ಹೇಳುತ್ತಿದ್ದಾರೆ. ಕೃಷ್ಣಪ್ಪ ಎಂದು ಯಾರೋ ಒಬ್ಬರು ಇದ್ದರು ಎಂದು ಹೇಳುತ್ತಿದ್ದಾರೆ. ನಮಗೂ ಕೂಡ ಅನೇಕ ಇನ್‌ಫರ್‌ಮೇಷನ್ ಬಂದವು. ಕೃಷ್ಣಪ್ಪನವರು ಯಾರ ಚೇಲ, ಹೇಗೆ ಇದ್ದರು ಎನ್ನತಕ್ಕ ಬಗ್ಗೆ ಅನೇಕ ಕಂಪ್ಲೈಂಟ್ಸ್ ಬಂದವು. ನಾನು ವಿವರಕ್ಕೆ ಹೋಗುವುದಿಲ್ಲ. ಅವರು ಇಲ್ಲಿ ಹೇಳಿದ ಮೇಲೆ ನನಗೆ ಸ್ವಲ್ಪ ಅರ್ಥ ಆಯಿತು. ಈ ರೀತಿಯಾಗಿ ಗಂಗಯ್ಯ ಎಂಬುವರು ತೀರಿಕೊಂಡ ಮೇಲೆ ಆಕೆಯನ್ನು ಹಾಜರ್ ಕರೆಸಿದ್ದ, ಆಕೆ ಮೂಗಿ ಇದ್ದಳು. ಆಕೆಗೆ ಏನೂ ಗೊತ್ತಾಗಲಿಲ್ಲ. ಇದೆಲ್ಲವನ್ನೂ ನಾನು ಮಾಡಿಸಿದೆ ಎಂದು ಹೇಳಿದರು. ಅಂದಾಗ ನಾವು ಈಗ ಹೇಳಬೇಕಾಗಿದೆ. ನೀವು ಕೂಡ ಅಬೆಟರ್ ಅಥವಾ ರಮೇಶ್ ಅವರನ್ನು ಬೇಕೆಂತಲಲೇ ಫಾಲ್ಸ್‌ಲಿ ಇನ್‌ವಾಲ್ವ್ ಮಾಡುವುದಕ್ಕೆ ಇವೆಲ್ಲವನ್ನೂ ಮಾಡಿದ್ದೀರಿ ಎಂದು ನಾವು ಏನಾದರೂ ಆಪಾದನೆ ಮಾಡುವುದಕ್ಕೆ ಆಗುತ್ತದೆಯೇ ? ಸ್ವಲ್ಪ ನಾನು ಹೇಳುವುದನ್ನು ಕೇಳಿ. ಇದು ಇನ್‌ವೆಸ್ಟಿಗೇಷನ್ ಸ್ಟೇಜಿನಲ್ಲಿ ಇದೆ. ತಾವು ಹೇಳಿದ ಹಾಗೆ ಆಫೀಸರ್ ಕೂಡ ಇಂಪಾರ್ಷಿಯಲ್ ಎಂದು ಹೇಳಿದ ಮೇಲೆ ಅವರು ಮೊದಲೇ ರಿಜಿಸ್ಟರ್ ಮಾಡಬೇಕಾಗಿತ್ತು. ನೀವು ಹೇಳಿದ ಮೇಲೆ ಕೇಸ್ ರಿಜಿಸ್ಟರ್ ಮಾಡತಕ್ಕ ಅವಶ್ಯಕತೆ ಏನೂ ಇರಲಿಲ್ಲ. ಆದರೆ ನಾನು ಅದನ್ನು ಇಲ್ಲಿ ಹೇಳುವುದಿಲ್ಲ. ಆದರೆ ಇನ್‌ವೆಸ್ಟಿಗೇ,ನ್ ನಡೆದಿದೆ, ಅದು ನಡೆಯಲಿ. ಅದಕ್ಕೂ ಕೂಡಲು ಇಲ್ಲಿ ಪುನಃ ಇದನ್ನು ಪ್ರಸ್ತಾಪ ಮಾಡತಕ್ಕ ಅವಶ್ಯಕತೆ ಇಲ್ಲ ಎಂದು ನನ್ನ ಹೇಳಿಕೆ.

ಶ್ರೀ ವೈ.ಕೆ. ರಾಮಯ್ಯ : ನಾನೇ ಕಂಪ್ಲೈಂಟ್ ಹೇಳಿ ಬರೆಸಿದೆ ಎಂದು ಎಲ್ಲೂ ಹೇಳಲಿಲ್ಲ. ತುಮಕೂರಿಗೆ ಹೋಗಿ ರಾತ್ರಿ ವಾಪಸ್ ಬಂದೆ. ವಾಪಸ್ ಬಂದು ವೈ.ಎ. ಚುಚ್ಚಯ್ಯ ಎನ್ನುವವರ ಮುಖಾಂತರ ಆಕೆಯನ್ನು ಕರೆಸಿ ಕಂಪ್ಲೈಂಟ್ ನಾನೇ ಕೊಡಿಸಿದ್ದೇನೆ. ಇದನ್ನು ಈಗಲೂ ಹೇಳುತ್ತೇನೆ. ನಾಳೆ ಸಹ ಹೇಳುತ್ತೇನೆ. ಆಮೇಲೆ ನಾನು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಕಾನೂನನ್ನು ಅಷ್ಟೇ ಹೇಳುತ್ತಿದ್ದೇನೆ.

Arrest under this Section shall natural sequence. This is Section 42 of Cr.P.C. Arrest in case of a warrant case, in case of a congnizable offence under sec. 42 of the Cr.P.C. arrest under this section is a natural sequence. ಇಷ್ಟು ಒಂದು. ನಾನು ಇನ್ನೊಂದನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಆಮೇಲೆ ಅವರು ಏನು ಬೇಕಾದರೂ ಹೇಳಿಕೊಂಡು ಹೋಗಲಿ.

MR. SPEAKER : You are refering to the Criminal Procedure Code?

MR. Y.K. RAMAIAH : This is from B.V. Mitra, 15th Edition, of Cr. Pc. Section 42.

MR. SPEAKER : Mr. Kagodu Thimmappa was referring to the powers of investigation officer.

MR. Y.K. RAMAIAH : That is Section 154 Sir, ನನಗೂ ಹತ್ತು ವರ್ಷ ಆಗಿವೆ, ಮರೆತು ಹೋಗಿಬಿಟ್ಟಿದೆ. This is Section 156. <u>Police Officers Powers to Investigate :</u>

Under the code, investigation starts after the police officer receives the information in a report of an offence and investigation consisting of the following steps :

1. Proceed to spot,
2. Ascrtainment of the facts and circumstances of the case.
3. Discovery and arrest of the suspected offender.
4. Collection of the evidence relating to the commission of the offence which may be consistent and
5. Examination of various persons including the accused.

This is what the Code of Criminal Procedure expects from the Investigating Officer. Extablishment of a Prima facie case is not a condition precedent. That is important.

SRI KAGGODU THIMMAPPA : It is for the Investigating Officer to proceed according to the law. Let law take its own course. It is for the Investigating Officer. If he feels that arrest is necessary, let him exercise power under that provision. Let us keep the matter at that stage. He has perfectly pointed out the powers of the Investigating Officer.

SRI D.B. CHANDREGOWDA : I am grateful to Mr. Ramaiah for having presented the legal aspect of the matter. I do not want to go into that. ನಾನು ಬೆಳಿಗ್ಗೆ ನಿಲುವಳಿ ಸೂಚನೆಯನ್ನು ತಂದಿದ್ದಂಥ ಕಾಲದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ಅದರಲ್ಲಿ ಬಹಳ ಮುಖ್ಯವಾದುದು ಏನೆಂದರೆ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು right of self-defence. This is a fundamental question, not only concerned to Mr. Ramesh, the then Minister, but also concerned to all of us.

ನಮಗೆ ಗನ್‌ಮ್ಯಾನ್‌ಗಳನ್ನು ಕೊಟ್ಟಿರುತ್ತಾರೆ. ಅವನು ನಮ್ಮನ್ನು ರಕ್ಷಣೆ ಮಾಡುತ್ತಾನೆ ಮತ್ತು ಅಂಥ ಸಂದರ್ಭ ಬಂದಾಗ ಸೆಲ್ಫ್ ಡಿಫೆನ್ಸ್ ಮಾಡುವುದಕ್ಕೆ ಅವನೂ ಒಬ್ಬ ಸಹಕಾರಿ ಆಗುತ್ತಾನೆ ಎಂದು ನಾನು ಅಂದುಕೊಂಡಿದ್ದೇನೆ. ಬೆಳಿಗ್ಗೆ ಪೊಲೀಸ್ ಮ್ಯಾನುಯಲ್‌ನಲ್ಲಿ ಇದ್ದ ವಿಚಾರಗಳನ್ನು ನಾನು ಹೇಳುವುದಕ್ಕೆ ಪ್ರಯತ್ನ ಮಾಡಿದ್ದೆ. ಆದರೆ ಯಾವ ಕಾಲದಲ್ಲಿ ಗನ್‌ಮ್ಯಾನ್‌ಗೆ ಆ ಅಧಿಕಾರ ಬರುತ್ತದೆ when there is no police officer. Here, in this case, Senior police officers like D.I.G. down to the constable were physically present. If the story of Mr. Ramesh is to be believed, then do you think authority? This is number one. Number two is, every gunman is provided, according to the information provided in the manual, a revolver. It can be used up to a distance of 50 ft, maximum 50 ft. In the instant case, I have alleged in a press statement and right now arguing in the worning that a stengun is used and the sten gun is used by a person who is not trained to use the sten gun and the very question is, whether every gunman of the minister or the Lead of the opposition or yourself, Sir, is provided with a sten gun ? These are the four questions I want to ask. I do not want to elaborate it.

ಮೊದಲು ಅಲ್ಲಿ ಗಾಳಿಗೆ ಗುಂಡು ಹಾಕಿದರು. ಲಾಠಿ ಚಾರ್ಜ್ ಮಾಡಿದರು. ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೇವೆ. ಹೀಗೆ ಲಾಠಿ ಚಾರ್ಜ್ ಮಾಡಿದ್ದೇ ಇರಲಿ, ಗುಂಡು ಹಾರಿಸಿದ್ದೇ ಇರಲಿ, ಜಿಲ್ಲಾ

ಮ್ಯಾಜಿಸ್ಟ್ರೇಟರವರು ತತ್‌ಕ್ಷಣ ಸರಕಾರಕ್ಕೆ ಒಂದು ವರದಿಯನ್ನು ಕಳುಹಿಸುತ್ತಾರೆ. ಇದು ನನ್ನ ಆಪಾದನೆ. ಈ ವರದಿಯಲ್ಲಿ ಗುಂಡು ಹಾರಿಸುವುದಕ್ಕಾಗಲಿ, ಲಾಠಿ ಚಾರ್ಜ್ ಮಾಡುವುದಕ್ಕಾಗಲಿ, ಜ್ಯೂಡಿಷಿಯಲ್ ಮ್ಯಾಜಿಸ್ಟ್ರೇಟ್‌ರವರ ಅನುಮತಿ ಇರಲಿಲ್ಲ. ಹಾಗಿಂತಲೇ ಈ ವರದಿಯನ್ನು ಕಳುಹಿಸಿದರು. ಆ ಕಾರಣಕ್ಕಾಗಿಯೇ ಜಿಲ್ಲಾ ಮ್ಯಾಜಿಸ್ಟ್ರೇಟರ ವರ್ಗಾವಣೆಯೂ ಆಯಿತು.

ಇದು ಎರಡನೆಯ ಆಪಾದನೆ. ಯಾರು ಕೇಸನ್ನು ದಾಖಲೆ ಮಾಡಿಕೊಳ್ಳುತ್ತಾರೆ, Station House Officer, the so-called Inspector for having registered a Criminal case of the magnnitude of a murder charge, state becomes the party and the Police Officer did take note of the complaint and registered a case. Why he is transferred? Police Officer is transferred. The District Magistrat is transferred. Nothing is forth coming from the Taluke Magistrate. I would like to ask the Hon'ble Chief Minister to place the report of the Deputy Commissioner, the District Magistrate on the table of the House. ಮಾನ್ಯ ಅಧ್ಯಕ್ಷರೇ, ನಾನು ಪೂರ್ತಿ ಇದರ ವ್ಯಾಖ್ಯಾನಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ದೀರ್ಘವಾಗಿ ಚರ್ಚೆ ಆಗಿದೆ. ಈವತ್ತು ಗನ್‌ಮನ್‌ಗಳ ಕರ್ತವ್ಯವೇನು, ಜವಾಬ್ದಾರಿ ಎಷ್ಟು ಅದರ ಇತಿಮಿತಿಗಳೇನು ಇವಿಷ್ಟನ್ನು ಪೊಲೀಸ್ ಮ್ಯಾನುಯಲ್‌ನಲ್ಲಿ ಹೇಳಿದ್ದಾರೆ. ಈಗ ತಾವು ಹೊಸ ಥಿಯರಿ ಹೇಳಿದ್ದೀರಿ. ಅದನ್ನು ನೀವೇ ಹೇಳಿದರೆ ನಾವು ಇನ್ನುಮುಂದೆ ಅದರಂತೆ ಅನುಸರಿಸುತ್ತೇವೆ. ಏಕೆಂದರೆ ನನ್ನ ಹತ್ತಿರವೂ ಗನ್‌ಮನ್ ಇದ್ದಾನೆ. ನನಗೆ ಗೊತ್ತಿಲ್ಲ, ಆ ವಿಚಾರ, ಆದ್ದರಿಂದ ಇದನ್ನು ತಿಳಿದುಕೊಳ್ಳಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ದಿಲ್ಲಿಯಿಂದ ಬಂದ ಮೇಲೆ ಹೇಳಿದರು, ರಮೇಶರು ರಾಜೀನಾಮೆ ಕೊಡಬೇಕಾಗಿಲ್ಲ, ನ್ಯಾಯಾಂಗ ತನಿಖೆ ಮಾಡುತ್ತೇನೆಂದು; ಅಂದರೆ ಈ ಸರ್ಕಾರ ನಡೆಸುವವರು ಯಾರು ? ಮುಖ್ಯಮಂತ್ರಿಗಳಲ್ಲ, ಶಾಸಕರುಗಳಲ್ಲ, ಈ ಸರ್ಕಾರ ನಡೆಸುವವರು ಪ್ರಧಾನ ಮಂತ್ರಿಗಳು. ಆ ಕಾರಣಕ್ಕಾಗಿಯೇ ನ್ಯಾಯಾಂಗ ತನಿಖೆ ಮಾಡಿಸುತ್ತೇನೆ ಎಂದು ಇವರು ಹೇಳಿದ್ದಾರೆ. ನನಗೆ ಅವರಿಂದ ಇದರ ವಿವರಗಳು ಬೇಕು. ಕೊನೆಯದಾಗಿ ನಾನು ಅವರನ್ನು ಕೇಳುತ್ತೇನೆ. ಬ್ಯಾಂಕ್ ಸ್ಕಾಮ್ ಆಯಿತು, ಕೇಂದ್ರದಲ್ಲೂ ಒಬ್ಬ ಮಂತ್ರಿಗಳು ರಾಜೀನಾಮೆ ಕೊಟ್ಟರು. ಅವರನ್ನು ಅರೆಸ್ಟ್ ಮಾಡಿ ಅಂತ ಕೇಳಿದವೇ ? ಅದರ ಅಗತ್ಯ ಇದೆಯಂತ ಹೇಳಿದವರೆಯೇ ? ಈ ದೇಶದಲ್ಲಿ ಕ್ಯಾಪಿಟಲ್ ಪನಿಷ್‌ಮೆಂಟ್ ಇರತಕ್ಕ ಯಾವುದಾದರೂ ಒಂದು ಚಾರ್ಜ್ ಇದ್ದರೆ ಅದು 302; ಅದನ್ನು ಬಿಟ್ಟರೆ ಮತ್ತು ರಾಷ್ಟ್ರಗಳ ಮಧ್ಯೆ ವ್ಯಾಜ್ಯ ಮಾಡುವ ದೊಡ್ಡ ಪ್ರಮಾಣದ ಆಪಾದನೆಗಳನ್ನು ಬಿಟ್ಟರೆ this is the highest and a section which can invoke the capital punishment. ಇದರಲ್ಲಿ ನೀವು ನಾವು ಮಧ್ಯೆ ಪ್ರವೇಶ ಮಾಡಿಲ್ಲ, ಏನ್ಮುದೇನೂ ಇಲ್ಲ ಅಂತ ಹೇಳಿದರೆ, ನಾನು ಸರ್ಕಾರಕ್ಕೆ ಕೇಳುತ್ತೇನೆ, ನೀವು ಮುಖ್ಯಮಂತ್ರಿಗಳು ಹೋಂ ಮಿನಿಸ್ಟರಾಗಿ ಎಲ್ಲಕ್ಕಿಂತ ಹೆಚ್ಚಾಗಿ ಕಾನೂನನ್ನು ಬಲ್ಲವರಾಗಿ ನ್ಯಾಯಾಂಗದಲ್ಲಿ ವಾದ ಮಾಡಿದವರಾಗಿ, ನಿಮ್ಮ ಸಾಮಾನ್ಯ ಕಾನೂನು ಜ್ಞಾನ, ಮರ್ಡರ್ ಕೇಸ್‌ನಲ್ಲಿ ಹೆಂಡತಿ ದೂರು ಕೊಟ್ಟಿದ್ದಾರೆ; ಗಂಡನನ್ನು ಕಳೆದುಕೊಂಡವಳು, ಯಾಕೆ ಕೊಟ್ಟಳು, ಯಾರು ಕೊಡಿಸಿದರು ಅದೆಲ್ಲಾ ನನಗೆ ಬೇಕಾಗಿಲ್ಲ....

(ಗೊಂದಲ)

I do not want to go into the details. That question is to be taken in the court of law which tries this case. I do not want to go into this. My simole question is, whether the law of theland, i.e. the criminal law of the land has been set is motion or not ? If not, why ?

ರಮೇಶ್‌ರವರಿಗೆ ಶಂಕೆ ಬಂತು, ಮತ್ತು ನಿರಪರಾಧಿ ರಮೇಶ್ ಅವರಿಂದ ರಾಜೀನಾಮೆ ಏಕೆ ಕೊಡಿಸಿದಿರಿ ? ಅವರು ಅಪರಾಧ ಮಾಡಿಲ್ಲವೆಂದಾದರೆ ಅವರಿಂದ ರಾಜೀನಾಮೆ ಏಕೆ ತೆಗೆದುಕೊಂಡಿರಿ? ನಾವು ಕೇಳಿದ್ದಕ್ಕೆ ಎಂದರೆ, ಈಗ ಕೇಳ್ತೀವಿ ಅರೆಸ್ಟ್ ಮಾಡಿರಿ ಅಂತ, ಮಾಡ್ತೀರೋ?

Let us be true to our conscience. We are not arguing the case against an individual Mr. Ramesh, if he comes out clean, let him come with flying colours. I don't question. ಸಹಸ್ರಾರು ಜನರು ನೋಡುತ್ತಿರತಕ್ಕಂಥದ್ದು. ಸಹಸ್ರಾರು ಜನರು ಕಣ್ಣಿನಿಂದ ನೋಡಿದ್ದಾರೆ. ಒಟ್ಟಿನಲ್ಲಿ ಶಾಸನಗಳು ಏನು ಸೂಚಿಸುತ್ತವೆ, ನನಗೆ ಗೊತ್ತಿಲ್ಲ. ಪ್ರೊಫೆಸರ್ ನಂಜುಂಡಸ್ವಾಮಿಯವರು ಇಲ್ಲಿ ಇಲ್ಲ. ಅವರು ಒಂದು ಸಲಹೆಯನ್ನು ಕೊಟ್ಟರು. ನೀವು ಸರೆಂಡರ್ ಆಗಿ ಎಂದು. ನೀವು ಬೇಲ್ ತೆಗೆದುಕೊಂಡು ಬನ್ನಿ, ಏನಾದರೂ ಮಾಡಿ ಎಂದು. ಈ ರಾಜ್ಯದಲ್ಲಿ ಶಾಸನದ ಬಗ್ಗೆ ಏನಾದರೂ ಅಲ್ಪಸಲ್ಪ ಗೌರವ ಇನ್ನೂ ಉಳಿದಿದ್ದರೆ ಶಾಸನಗಳನ್ನು ಜಾರಿ ಕೊಡತಕ್ಕಂಥ ಜವಾಬ್ದಾರಿ ಈ ಸರ್ಕಾರದ್ದು ಇದ್ದರೆ, ಶಾಸಗಳ ಬಗ್ಗೆ ಗೌರವ ಏನಾದರೂ ಇದ್ದರೆ, ಸಾಮಾನ್ಯ ಜನರು ನಮ್ಮ ಶಾಸನವನ್ನು ಸರ್ಕಾರ ರಕ್ಷಣೆ ಮಾಡುತ್ತದೆ ಎನ್ನುವ ವಿಶ್ವಾಸ ಉಳಿಸಿಕೊಳ್ಳಬೇಕು ಎನ್ನತಕ್ಕಂಥ ಆಸಕ್ತಿ ಇದ್ದರೆ please see that the criminal law is set in motion.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಬೇರೆ ಹೊಸ ವಿಚಾರ ಏನಾದರೂ ಹೇಳುತ್ತಾರೆಂದು ನಾನು ಕಾಯುತ್ತಿದ್ದೆ. ಅವರು ಫ್ಯಾಕ್ಟ್ಸ್ ಬಗ್ಗೆ ಹೇಳುತ್ತಾ let me come to touch the legal aspects of the matter later on. Who were present there ಎನ್ನತಕ್ಕಂಥ ಮಾತಿಗೆ ನೀವು ಹೋಗತಕ್ಕಂಥ ಅವಶ್ಯಕತೆ ಇಲ್ಲ. ಏಕೆಂದರೆ ತಾವು ಹೇಳಿದಿರಿ, whether the rule of law is set in motion or not ? Yes, it is on ಎನ್ನತಕ್ಕಂಥದ್ದನ್ನು ನಾನು ಪದೇ ಪದೇ ಹೇಳಿದ್ದೇನೆ. Lawful investigation is on ಎನ್ನತಕ್ಕಂಥ ಮಾತನ್ನು ನಾನು ಪದೇ ಪದೇ ಹೇಳಿದ್ದೇನೆ. ಹಾಗಾದರೆ ಯಾವುದು ? That is the rule of law also.

ಆನಂತರದಲ್ಲಿ ಅಲ್ಲಿ ಯಾರು ಯಾರು ಇದ್ದರು ಎನ್ನತಕ್ಕಂಥ ವಿವರಗಳಿಗೆ ಹೋಗಬಾರದು ಎನ್ನತಕ್ಕಂಥ ಮಾತನ್ನು ನಾನು ಪದೇ ಪದೇ ಹೇಳುತ್ತಿದ್ದೇನೆ. That is why still ಆ ಇನ್‌ಫರ್ಮೇಷನ್ ಬಂದಾಗ ಏನು ಅಭಿಪ್ರಾಯ ಇತ್ತು ಎನ್ನುವ ಮಾತಿಗೋಸ್ಕರ ನಾನು ಹೇಳಿದ್ದೇನೆ. ಕೆಲವರು ಇದ್ದರು, ಇಲ್ಲ ಎನ್ನತಕ್ಕಂಥದ್ದು ಬಿಟ್ಟರೆ ಬೇರೆ ವಿವರಗಳಿಗೆ ಏನು ಹೋಗಲಿಲ್ಲ. ಅದಕ್ಕೋಸ್ಕರ ಹೋಗಬಾರದು ಎನ್ನತಕ್ಕಂಥ ದೃಷ್ಟಿಯಿಂದ ಹೇಳಿದೆ, because it would affect the fair investigation ಎನ್ನತಕ್ಕಂಥ ದೃಷ್ಟಿಯಿಂದ ನಾನು ಹೇಳಿದ್ದೇನೆ. ತಾವು ಹೇಳುತ್ತಿದ್ದಿರಿ, ಡಿಐಜಿ, ಎಸ್.ಪಿ. ಮತ್ತೊಬ್ಬರು where did you get all this information because you have heard from someone else. Were you present there ?

SRI. D.B. CHANDREGOWDA : I know.

SRI. S. BANGARAPPA : That is why Chandregowdaji, ನಾನು ಹೇಳುವುದು "I know" ಎಂದರೆ ಹೇಗೆ ? Some people must have told you that these people were there. ಅದು ಬಿಟ್ಟರೆ ಇನ್ಯಾವುದೇ ಇಲ್ಲ.

SRI D.B. CHANDRE GOWDA : Alright, place the report of the District Magistrate. Let us see what information he has sent.

Sri. Bangarappa : We should not commit that mistake of asking for the placement or the report of the District Magistrate. It is not a fair approach. In the name of fair investigation, I am appealing to you through the Chair, we should not do that. Suppose all those things are there, the Investigating Officer has got all powers to command all the records and get all those things into his possession if he so feels. He can do so. He has got every right.

ಅದಕೋಸ್ಕರ ನಾನು ಹೇಳುವುದು, ಆ ವಿಚಾರವನ್ನು ಟಚ್ ಮಾಡುವುದು ಬೇಡ ಎನ್ನತಕ್ಕಂಥ ದೃಷ್ಟಿಯಿಂದ ನಾನು ಹೇಳಿರತಕ್ಕಂಥ ವಿಚಾರ. ಇದರಲ್ಲಿ ರಿವಾಲ್ವರ್ ಇರುತ್ತದೆ. ಇದು 50 ಅಡಿ ಹೋಗುವ ಹಾಗೆ ಇಲ್ಲ, I don't know. you may be having ...

ಶ್ರೀ ಡಿ.ಬಿ. ಚಂದ್ರೇಗೌಡ : ತಾವು ಮುಖ್ಯಮಂತ್ರಿಯಾಗಿ ತುಮಕೂರು ಜಿಲ್ಲೆಗೆ ಹೋದಾಗ ನಿಮ್ಮ ಸೆಕ್ಯುರಿಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಅವರದ್ದು not your gun man. Please hear it in mind. This is the law. This is the Plice Manual. He shall be held responsible, if something goes wrong.

SRI S. BANGARAPPA : I do agree. ಆದರೆ ಇದು ಅವತ್ತು ಇದ್ದಂಥ ಪ್ರಶ್ನೆ ಅಲ್ಲ, ಎಸ್‌ಪಿ ಅಲ್ಲಿ ಇರುವುದಕ್ಕೆ. That is the day on which the polling has taken place. You were not there nor was I there. There was no necessity for either the DIG or a plice Officer holding the tank of DIG of SP could have been there. Therefore, that question does not arise at all, in this case.

ರಿವಾಲ್ವಾರ್ ಯಾವುದು ಇತ್ತು, ಯಾವುದು ಇಲ್ಲ, ಸ್ಟೆನ್‌ಗನ್ I don't know. I still believe, nor do you know. That is why these are all the informations you may be having. I may be having so may information.

ನಾನು ಅದನ್ನು ಟಚ್ ಮಾಡತಕ್ಕಂಥದ್ದು ಈ ಸ್ಟೇಜ್‌ನಲ್ಲಿ ಸರಿಯಲ್ಲ ಎನ್ನತಕ್ಕಂಥ ದೃಷ್ಟಿಯಿಂದ ನಾನು ಹೇಳುವುದು; ಅದನ್ನೆಲ್ಲಾ ಬಿಟ್ಟುಬಿಡೋಣ. ನೀವು ಡಿಸಿಯನ್ನು ವರ್ಗಾವಣೆ ಮಾಡಿದಿರಿ ಎಂದು ಹೇಳಿದಿರಿ; ನಾವು ಡಿಸಿಯನ್ನು ಇದಕ್ಕೋಸ್ಕರ ವರ್ಗಾವಣೆ ಮಾಡುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಎಷ್ಟೆಲ್ಲಿ ಡಿ.ಸಿ.ಯನ್ನು ವರ್ಗಾವಣೆ ಮಾಡಿದ್ದೇವೆ, ಎಲ್ಲಾ ಕಡೆಯಲ್ಲೂ ಈ ರೀತಿ ಏನೂ ಆಗಿಲ್ಲ. ಡಿಸಿ.ಯನ್ನು ವರ್ಗಾವಣೆ ಮಾಡತಕ್ಕಂಥ ಕಾಲ, ಬೇರೆ ಬೇರೆ ಕಾರಣಗಳು it is a matter of administration. ಅದು ಅಡ್ಮಿನಿಸ್ಟ್ರೇಷನ್‌ನಲ್ಲಿ ಬರತಕ್ಕಂಥದ್ದು. ಆ ಕಾಲದಲ್ಲಿ ಹೋಗುತ್ತದೆ.

SRI. D.B. CHANDRE GOWDA : According to you, at ieast till ನಿಮ್ಮ ನ್ಯಾಯಾಂಗ ತನಿಖೆ ಏನೋ ಮಾಡುತ್ತೇವೆ ಎಂದು ಹೇಳಿದ್ದೀರಲ್ಲಾ, ಅಲ್ಲಿಯವರೆಗಾದರೂ ಡೆಪ್ಯುಟಿ ಕಮೀಷನರ್ ಇರಬೇಕಾಗಿತ್ತು. because he is the main person who was incharge of the entire operation.

ಶ್ರೀ ಎಸ್. ಬಂಗಾರಪ್ಪ : ತಾವು ತಿಳಿದುಕೊಳ್ಳಿ. He was not incharge of the operation of these gallatas. ಒಂದು ತಿಳಿದುಕೊಳ್ಳಿ. ನಾನು ಹೇಳುತ್ತೇನೆ. ಯಾವಾಗಲೂ ಈ ರೀತಿ ಫೈರಿಂಗ್ ಮುಗಿದ್ದಂದು ಆದ ತಕ್ಷಣ immediately the scene shifts. Hope you will agree with me again. ಅದಕ್ಕೆ ನಾನು ವಿವರಗಳಿಗೆ ಹೋಗುತ್ತಿಲ್ಲ. ಹೋದ ತಕ್ಷಣ Case will have to be registered. Regular process of law will take its own course.

ಹಾಗಿಂದ ತಕ್ಷಣ ಇನ್‌ವೆಸ್ಟಿಗೇಷನ್ ಸ್ಟಾರ್ಟ್ ಆಗುತ್ತದೆ. Can the District Magistrate start stepping into the shoes of the investigating officer ? These are all the matters.

ಅದ್ದರಿಂದಲೇ ಆ ಏರಿಯಾದ ಟಚ್ ಮಾಡುವುದು ಬೇಡ, That is not the purpose for which the DC stands for. I rebut this. Even in case a report is produced by the District magistrate when he was there as District Magistrate, though he is under orders of transfer and he has been transferred or he has to report for duty somewhre else, he can be summoned by the investigating officer because he is completely emppowered to do so.

Under law he can summon anybody if he feels that the former DC is to be summoned to tender evidence.

ಆ ದೃಷ್ಟಿಯಿಂದಲೇ ಟಚ್ ಮಾಡುವುದು ಬೇಡ ಅಂತ ಹೇಳಿ ಆ ವಿವರಗಳಿಗೆ ನಾನು ಹೋಗಿಲ್ಲಲ. ಈ ಸಂದರ್ಭದಲ್ಲಿ ಗನ್‌ಮ್ಯಾನ್‌ದು ಜವಾಬ್ದಾರಿ ಏನು ಮತ್ತೊಂದೇನು I am sorry, that is a different aspect. ಆ ಗನ್‌ಮ್ಯಾನ್ ಏನು ಮಾಡಬೇಕು ಏನು ಮಾಡಬಾರದು ಅನ್ನೋದಕ್ಕೆ ಮ್ಯಾನುಯಲ್ ಇರುತ್ತದೆ ಅದನ್ನೆಲ್ಲಾ ಪರೇಟಾಗಿ ತೆಗೆದುಕೊಳ್ಳೋಣ. ಈಗಾಗಲೇ ನ್ಯಾಯಾಂಗ ತನಿಖೆಗೆ ನಾವು ಆಜ್ಞೆ ಮಾಡಿದ್ದೇವೆ. That is also the subject matter for enquiry under the terms of reference.

ನಾಳೆ ಆದೂ ಬರಲಿ, ಮಾನ್ಯುಯಲ್ ಕ್ಲಿಯರಾಗಿದ್ದಾಗ ಡೌಟ್ ಮಾಡಲು ಬರುವುದಿಲ್ಲ. ಆಮೇಲೆ ದೆಹಲಿಗೆ ಹೋಗಿ ಬಂದಮೇಲೆ ಸ್ಟೇಟ್‌ಮೆಂಟ್ ಕೊಟ್ಟೆ ಪ್ರೆಸ್‌ನಲ್ಲಿ ಪ್ರಶ್ನೆ ಹೇಗೆ ಕೇಳ್ತಾರೆ ಏನು ಉತ್ತರ ನಾವು ಕೊಡ್ತೀವಿ ಅನ್ನೋದರ ಮೇಲೆ ಅವರು ಹೇಗೆ ಬರೀತರೆ ಎಂಬುದು ತಮಗೆ ಗೊತ್ತಲ್ಲಾ, ಆಫ್ಕೋರ್ಸ್ ಚುನಾವಣೆ ಚುನಾವಣಾ ಕಮೀಷನ್‌ಗೆ ಸಂಬಂಧಿಸಿದ್ದು ಏನು ನಡೀತು ಅನ್ನತಕ್ಕದ್ದು; ಅವರು ಕೇಳತಕ್ಕದ್ದು the is the Hon'ble Prime Minister of the entire country. ಅವರು ಕೇಳಿದಾಗ ನಾನು ಮುಖ್ಯಮಂತ್ರಿಯಾಗಿ ಹೇಳುವುದೂ ಕೂಡ ಕೆಲವು ಸಲ ಬರುತ್ತದೆ. ಬಂದ ಮೇಲೂ ವಿಚಾರ ಮಾಡಿಯೇ ನಾನು ಹೇಳಿದ್ದೇನೆ. ನೀವು ನೇರವಾಗಿ ಸಂಬಂಧಪಟ್ಟಿದೆ, ಅವರನ್ನು ಕೇಳಿ ಇಲ್ಲಿ ಆಡಳಿತ ನಡೆಸ್ತಿದ್ದೇನೆ ಅಂತ ಅಭಿಪ್ರಾಯ ತಾವು ಹೇಳಿದ್ದೀರಿ. ಹಾಗಲ್ಲ. ನಾನು ಹೇಳಿದ್ದು ಈ ಕಾಂಟೆಕ್ಸ್‌ನಲ್ಲಿ ಹೇಳಿದ್ದೇನೆ ಅನ್ನತಕ್ಕ ಮಾತು. ಆಮೇಲೆ ಚಂದ್ರೇಗೌಡರೇ, ಯಾವುದೇ ಕೇಸ್ ರಿಜಿಸ್ಟರಾಗೋದ್ರಿಂದ ಹಿಡಿದು ಇನ್‌ವೆಸ್ಟಿಗೇಷನ್ ನಡೆದು ಮುಕ್ತಾಯವಾಗುವುದು ಯಾವಾಗ either through a judicial enquiry of as a result of a fair investigation or the matter taken to a court of law by filing a charge sheet, then only after getting the judgement from the concerned court. ಅಲ್ಲಿಯವರೆಗೆ ಯಾರೂ ಏನೂ ಮಾಡುವುದಕ್ಕೆ ಬರುವುದಿಲ್ಲ ಆ ಕಾನೂನಿನ ಪ್ರಕಾರವೇ ನಾವು ಹೋಗ್ತೇವೆ. That is the law of the land is who rule of law. ಅದನ್ನು ಬಿಟ್ಟು ನಾವ್ಯಾರೂ ಹೋಗುವುದಿಲ್ಲ, ಕಂಪ್ಲೇಂಟ್ ಮತ್ತೊಂದನ್ನು ಯಾರು ಕೊಡಿಸಿದರು ಎಂಬ ಬಗ್ಗೆ ನಾನು ಹೋಗುವುದಿಲ್ಲ; ರಾಮಯ್ಯನವರು ಅದರ ವಿಚಾರ ಹೇಳಿದ್ದಾರೆ, ಅದ್ಯಾರೋ ತುಮಕೂರಿನವರ ಮತ್ತೊಬ್ಬರ ಕೈಲಿ ಕೊಡಿಸಿದರು ಅಂತ, ತಾವೇ ಮಾಡಿದಿರಿ ಅಂತ ಪ್ರಶ್ನೆ ಇಲ್ಲ; ಯಾರು ಕೊಟ್ಟಿದ್ದಾರೆ ಯಾರು ಬಿಟ್ಟಿದ್ದಾರೆ ಅಷ್ಟೂ ಕೂಡ ತನಿಖೆಗೆ ಬರಲಿ. ಇಷ್ಟು ಹೇಳಿ ಅಧ್ಯಕ್ಷರೇ........

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ ಈ ರಾಜ್ಯದಲ್ಲಿ ಶಾಸನಗಳಿಗೆ ಬಲ ಇಲ್ಲ. ತಮ್ಮನ್ನು ರಕ್ಷಿಕ್ಷಿಸಿಕೊಳ್ಳುವುದಕ್ಕಾಗಿ ಸರ್ಕಾರ ತಮ್ಮದೇ ಆದ ಉತ್ತರ ಕೊಡ್ತಿದ್ದಾರೆ ಎಂದು ಆಪಾದನೆ ಮಾಡ್ತಾ ಇದ್ದೇನೆ. ಈ ನೆಲದ ಶಾಸನಕ್ಕೆ ಈ ಸರ್ಕಾರ ಗೌರವ ಹಾಗೂ ಮನ್ನಣೆ ಕೊಡುತ್ತಿಲ್ಲ. ನಮ್ಮ ವಾದವೆಲ್ಲಾ ಗೋರ್ಕಲ್ಲ ಮೇಲೆ ನೀರ್ಗಲ್ ಮಳೆ ಸುರಿದಂತೆ ಸರ್ವಜ್ಞ ಎಂಬಂತೆ ಆಗಿದೆ. ಅವರ ಈ ವಾದವನ್ನು ನಾನು ಒಪ್ಪಿಕೊಳ್ಳಲು ತಯಾರಿಲ್ಲ. ಆದ್ದರಿಂದ ನೊಂದ ಹೃದಯದಿಂದ, ಜನ ಮುಂದೆ ತೀರ್ಮಾನ ಮಾಡುತ್ತಾರೆ ಎಂದು ಹೇಳಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ವಿರೋಧ ಪಕ್ಷದ ನಾಯಕರು ಸಭಾತ್ಯಾಗ ಮಾಡಿದರು)

ಶ್ರೀ ಎಸ್. ಬಂಗಾರಪ್ಪ : ಅದು ನಿಮ್ಮ ರಾಜಕೀಯ ಅಂತ ನಾನು ಹೇಳಲೇಬೇಕಾಗಿದೆ. ಉದಾಹರಣೆಗೆ ಆ ಲೀಡರ್‌ಗಳು ಸತ್ತುಹೋಗಿದ್ದರೆ, ಹೊಡೆತ ಬಿದ್ದಿದ್ದರೆ ಮಹಜರ್ ಬರೀತಾ ಇದ್ರೇನೋ ಅನ್ನುವ ಪ್ರಶ್ನೆ ಕೂಡ ಇಲ್ಲಿ ಬರಾಗಿದೆ.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳ ಉತ್ತರವನ್ನು ನಾವು ಕೂಲಂಕುಷವಾಗಿ ಕೇಳಿದ್ದೇವೆ. ಈ ರಾಜ್ಯದಲ್ಲಿ ನಡೆದ ಹೇಯವಾದ ಕೃತ್ಯವನ್ನು ಅತ್ಯಂತ ಭಯಂಕರವಾದ ರೀತಿಯಲ್ಲಿ ಪ್ರತಿಪಾದಿಸಲು ಹೊರಟಿದ್ದಾರೆ. ಏಕೆಂದರೆ ಆಡಳಿತ ಪಕ್ಷದವರಿಗೆ

ಸಂಬಂಧಪಟ್ಟವರಾದರೆ ಒಂದು ಕಾನೂನು ಸಾಮಾನ್ಯ ಜನಕ್ಕಾದರೆ ಮತ್ತೊಂದು ಕಾನೂನು, ಇದರ ಪ್ರತಿಫಲವನ್ನು ಮುಂದೆ ಇವರೂ ಕೂಡ ಉಣ್ಣುತ್ತಾರೆ ಅಂತ ಎಚ್ಚರಿಕೆ ಹೇಳಿ ಸರ್ಕಾರದ ಈ ನೀತಿಯನ್ನು ಪ್ರತಿಭಟಿಸಿ ಹೊರಗಡೆ ಹೋಗುತ್ತಿದ್ದೇವೆ.

(ಶ್ರೀ ಸಿ. ಬೈರೇಗೌಡರು ಸಭಾತ್ಯಾಗ ಮಾಡಿದರು)

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ಈಗಿನ ಪರಿಸ್ಥಿತಿಯಲ್ಲಿ ಆಡಳಿತ ಪಕ್ಷದಿಂದ ಬಹುಶಃ ಇದಕ್ಕಿಂತ ಹೆಚ್ಚಿನದೇನನ್ನೂ ನಾನು ನಿರೀಕ್ಷೆ ಮಾಡಲಾರೆ. ಒಂದು ಬೆಟ್ಟ ಅಗೆದು ಇಲಿ ಹಿಡಿದಂತಾಗಿದೆ. ಇಷ್ಟೆಲ್ಲಾ ಬೆಟ್ಟ ಅಗೆದರೂ ಏನೂ ಪ್ರಯೋಜನವಾಗಲಿಲ್ಲ. ಬೈರೇಗೌಡರು ಈಗಾಗಲೇ ಹೇಳಿದಂತೆ ಬಹುಶಃ ಇದು ಒಳ್ಳೆಯದಲ್ಲ. ನಾನು ಆಗಲೇ ಹೇಳಿದ್ದೇನೆ. ಇಲ್ಲಿ ರಮೇಶ್ ಅವರು ಇದ್ದಾರೆ, ಮಂಜುನಾಥರವರು ಇದ್ದಾರೆ ಅಥವಾ ಪೀಠದಲ್ಲಿರುವ ಅಧ್ಯಕ್ಷರಿದ್ದಾರೆ, ಅದು ಅಷ್ಟು ಮುಖ್ಯವಲ್ಲ. ನಾನು ಆಗಲೇ ಹೇಳಿದೆ; ನಾನು ಅವರನ್ನು ಕುಣಿಗಲ್ ಚುನಾವಣೆಯಲ್ಲಿ ನೋಡಲಿಲ್ಲ. ಒಂದು ದಿವಸ ಯಾವುದೋ ಒಂದು ದೇವಸ್ಥಾನದ ಹತ್ತಿರ ನೋಡಿದ್ದೇನೆ ಅಷ್ಟೆ, ಪ್ರಶ್ನೆ ಅದಲ್ಲ. ಈ ಸರ್ಕಾರದ ಬಗ್ಗೆ ಜನರಲ್ಲಿ ನಂಬಿಕೆ ಬರಬೇಕಾದರೆ, ಕಾನೂನಿನ ಬಗ್ಗೆ ವಿಶ್ವಾಸ ಹುಟ್ಟಬೇಕಾದರೆ, ನೀವು ಈ ಕೆಲಸ ಮಾಡಬೇಕಾದ್ದು ನಿಮ್ಮ ಆದ್ಯ ಕರ್ತವ್ಯ ಇತ್ತು. ಆ ಕರ್ತವ್ಯವನ್ನು ಪರಿಪಾಲನೆ ಮಾಡುವುದಕ್ಕೆ ನೀವು ಒಪ್ಪುತ್ತಿಲ್ಲವಾದ್ದರಿಂದ ಅದನ್ನು ಪ್ರತಿಭಟಿಸುತ್ತಾ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಸಂದರ್ಭದಲ್ಲಿ ಶ್ರೀ ವೈ.ಕೆ. ರಾಮಯ್ಯನವರು ಸದನದಿಂದ ಸಭಾತ್ಯಾಗ ಮಾಡಿದರು ಮತ್ತು ಈಗಾಗಲೇ ಸಭಾತ್ಯಾಗ ಮಾಡಿದ್ದ ಶ್ರೀ ಬೈರೇಗೌಡರು ಪುನಃ ಪೀಠಕ್ಕೆ ಬಂದು ಕುಳಿತರು).

ಅಧ್ಯಕ್ಷರು : ಬೈರೇಗೌಡರೇ, ಕೆಲವು ಪ್ರಕ್ರಿಯೆಗಳನ್ನು ಆಯಾ ಕಾಲಕ್ಕೆ ಮಾಡದೆ ಹೋದರೆ ಎಂತಹ ಅನಾಹುತವಾಗುತ್ತದೆ ಎನ್ನತಕ್ಕಂಥಾದ್ದಕ್ಕೆ ನೀವು ಹಾಗೂ ಶ್ರೀ ರಾಮಯ್ಯನವರು ಉದಾಹರಣೆ. ನೀವೇನೋ ಸಭಾತ್ಯಾಗ ಮಾಡಿ ಹೋದಿರಿ, ಆಗ ರಾಮಯ್ಯನವರು ನಿಮ್ಮನ್ನು ಹಿಂಬಾಲಿಸಬೇಕಾಗಿತ್ತು. ಅಷ್ಟರಲ್ಲಿ ನೀವು ವಾಪಸ್ಸು ಬಂದಿರಿ, ಅವರು ಹೊರಗೆ ಹೋಗಿದ್ದಾರೆ. ಆದುದರಿಂದ, this has some serious implications. This is a lesson for everyone of this House. Whatever should happen, should happen at a given point of time.

ಶ್ರೀ ಸಿ. ಬೈರೇಗೌಡ : (ವೇಮಗಲ್) ವಿಷಯ : ಹಾಲು ಉತ್ಪಾದಕರಿಗೆ ಹಾಲಿನ ಬೆಲೆಯನ್ನು ಹೆಚ್ಚಿಗೆ ನೀಡುವ ಬಗ್ಗೆ ಸನ್ಮಾನ್ಯ ಸಭಾಧ್ಯಕ್ಷರೇ, ನಾನು ವಾಪಸ್ಸು ಬಂದ ಕಾರಣವೇನೆಂದರೆ, ಕೆಲವು ಗುರುತರವಾದಂಥ ವಿಚಾರ ಅಲ್ಲಿಗೆ ಮುಕ್ತಾಯವಾಯಿತೆಂದು ನನ್ನ ಭಾವನೆ. ಅಲ್ಲದೆ, ನಾನು ಬೇರೆ ಕೆಲವು ಗುರುತರವಾಗಿರತಕ್ಕಂಥ ವಿಚಾರಗಳನ್ನು ಸಹ ಪ್ರಸ್ತಾಪಿಸಬೇಕಾಗಿದೆ. ಇವೊತ್ತು ಅಧಿವೇಶನದ ಕೊನೆಯ ದಿವಸವೆಂದು ನಾನು ಅಂದುಕೊಂಡಿದ್ದೇನೆ. ನಾವು ಹೊರಗಡೆ ಹೋದಾಗ ತಾವು ಅಕಸ್ಮಾತ್ ನನ್ನ ಹೆಸರನ್ನು ಕರೆದರೆ, ಆಗ ನಾನು ಸದನದಲ್ಲಿ ಇಲ್ಲದಿದ್ದರೆ ನಾನು ಆಗ ಕರ್ತವ್ಯಲೋಪ ಮಾಡಿದಂತೆ ಆಗುತ್ತದೆ. ಆ ದೃಷ್ಟಿಯಿಂದ ನಾನು ಪುನಃ ವಾಪಸ್ಸು ಬಂದೆನೇ ವಿನಃ ಬೇರೆ ಯಾವ ಕಾರಣದಿಂದಲೂ ಅಲ್ಲ. ಈ ಸದನ ಪ್ರಾರಂಭವಾದಾಗ ಅವೊತ್ತೇ ನಾನು ತಮ್ಮ ಗಮನಕ್ಕೆ ತಂದಿದ್ದೇನೆ, ಇವೊತ್ತು ಸಹ ತಮ್ಮ ಗಮನಕ್ಕೆ ತಂದಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಇವೊತ್ತಿನ ದಿವಸ ಸದನದಲ್ಲಿದ್ದಾರೆ. ನನ್ನದು ಮೂರು ವಿಚಾರಗಳಿವೆ. ಮೊದಲನೆಯದಾಗಿ, ಇವೊತ್ತು ಹಾಲು ಉತ್ಪಾದಕರ ಮಹಾ ಮಂಡಲಿ ಹಾಲಿನ ಬೆಲೆಯನ್ನು ಹೆಚ್ಚಿಸತಕ್ಕಂಥ ತೀರ್ಮಾನಕ್ಕೆ ಬಂದಿದೆ. ಇದರ ಬಗ್ಗೆ ನಾನು ವಿವರಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ. ಹಾಲು ಉತ್ಪಾದಕರ ಮಹಾಮಂಡಳಿಯವರು ಸರ್ಕಾರಕ್ಕೆ ಶಿಫಾರಸ್ಸನ್ನು ಕಳುಹಿಸಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ತೀರ್ಮಾನ ಮಾಡಿದೆ ಅಥವಾ ಮಾಡುತ್ತದೆ ಅಥವಾ ಇಲ್ಲವೇ ಎನ್ನತಕ್ಕಂಥ ಮಾತನ್ನು ಇವೊತ್ತು ತಿಳಿಸಬೇಕು. ಕಾರಣವೇನೆಂದರೆ ಇವೊತ್ತಿನ ದಿವಸ ಹಾಲಿನ ಉತ್ಪಾದನೆ ಕಡಿಮೆಯಾಗುತ್ತಿದೆ. ಇದರ ಬಗ್ಗೆ ನಾವು ಹೇಳಬೇಕಾಗಿಲ್ಲ, ಅಂಕಿ-ಅಂಶಗಳೇ ತೋರಿಸುತ್ತವೆ. ಇದಕ್ಕೆ ಕಾರಣವೇನೆಂದರೆ ಇವೊತ್ತಿನ ದಿವಸ ಹಾಲು ಉತ್ಪಾದಕರಿಗೆ ಸರಿಯಾದ ಬೆಲೆ ಸಿಗುತ್ತಿಲ್ಲ. ಸರಿಯಾದಂಥ ಬೆಲೆ